ಶ್ರೀಸತ್ಯತೀರ್ಥಭಿಕ್ಷು ವಿರಚಿತಃ

ಶ್ರೀಮನ್ಮಧ್ವವಿಲಾಸಃ



ಸಂಪಾದನೆ, ಅನುವಾದ ಮತ್ತು ವಿವರಣೆ : ಕೆ. ರಾಘವೇಂದ್ರ ಪುರಾಣಿಕ

ಪ್ರಕಾಶಕರು : ಕೆ.ಎಸ್. ಬದರೀನಾರಾಯಣ ರಾವ್, ಬೆಂಗಳೂರು

ಶ್ರೀಸತ್ಯತೀರ್ಥಭಿಕ್ಷು ವಿರಚಿತಃ

ಶ್ರೀಮನ್ಮಧ್ವವಿಲಾಸಃ

ಸಂಪಾದನೆ, ಅನುವಾದ ಮತ್ತು ವಿವರಣೆ
ಕೆ. ರಾಘವೇಂದ್ರ ಪುರಾಣಿಕ

ಪ್ರಕಾಶಕರು
ಕೆ.ಎಸ್. ಬದರೀನಾರಾಯಣ ರಾವ್, ಬೆಂಗಳೂರು

Shreemanmadhvavilasagrantha

Translated & Edited by :
Sri K. Raghavendra Puranik

Published by :
Sri K. S. Badarinarayana Rao
Meghasagar Restaurant
322, C.M.H. Road
Indiranagar, Bangalore - 38.

Printed at :
Shri Siddhi Graphics, Udupi. Ph : 35065

Rs. 35/-

Publishing Rights are Reserved.

ಜಗದ್ಗುರು ಶ್ರೀಮದಾಚಾರ್ಯರ ಚರಿತ್ರಾತ್ಮಕವಾದ

'ಶ್ರೀಮನ್ಮಧ್ವವಿಲಾಸಗ್ರಂಥ'ವು ಪ್ರಕಾಶಕರಾದ

ಶ್ರೀಮತಿ ವಾಸಂತಿ ಹಾಗೂ ಕೆ. ಎಸ್. ಬದರೀನಾರಾಯಣ ರಾವ್ ಬೆಂಗಳೂರು

ಶ್ರೀ ಕೆ. ಎಸ್. ಬದರೀನಾರಾಯಣ ರಾವ್ ಬೆಂಗಳೂರು ಇವರ

'ಷಷ್ಟ್ಯಬ್ದಮಹೋತ್ಸವ'ದ ಸವಿನೆನಪಿಗಾಗಿ

ಶ್ರೀ ಭಾವಿಸಮೀರರಾದ ಶ್ರೀ ವಾದಿರಾಜಗುರುಸಾರ್ವಭೌಮರ ಅವತಾರ

ಭೂಮಿಯಾದ

ಶ್ರೀಹೂವಿನಕೆರೆ ಕ್ಷೇತ್ರದಲ್ಲಿ

ದಿನಾಂಕ 11.10.2000 ಬುಧವಾರದಂದು ನಡೆದ ಸಮಾರಂಭದಲ್ಲಿ

ಗುರುಗಳಾದ ಪರಮಪೂಜ್ಯ ಶ್ರೀಸೋದಾಮಠಾಧೀಶರಾದ

ಶ್ರೀ ಶ್ರೀ ವಿಶ್ವೋತ್ತಮತೀರ್ಥ ಶ್ರೀಪಾದಂಗಳವರ

ಅಮೃತಹಸ್ತದಿಂದ ಬಿಡುಗಡೆಗೊಳಿಸಲ್ಪಟ್ಟು

ಶ್ರೀ ಸಮೀರ-ಗುರುರಾಜವಂದಿತ ಶ್ರೀಭೂವರಾಹ ಹಯಗ್ರೀವಾತ್ಮಕ

ಶ್ರೀವೇದವ್ಯಾಸದೇವರ ಚರಣಕಮಲಗಳಲ್ಲಿ ಭಕ್ತಿಪೂರ್ವಕವಾಗಿ

ಸಮರ್ಪಿಸಲ್ಪಟ್ಟಿತು.

ಶ್ರೀಃ

ವ್ಯಾಸಾಯ ಭವನಾಶಾಯ ಶ್ರೀಶಾಯ ಗುಣರಾಶಯೇ ।
ಹೃದ್ಯಾಯ ಶುದ್ಧವಿದ್ಯಾಯ ಮಧ್ವಾಯ ಚ ನಮೋ ನಮಃ ॥
ಕಾಮಧೇನುರ್ಯಥಾ ಪೂರ್ವಂ ಸರ್ವಾಭೀಷ್ಟಫಲಪ್ರದಾ ।
ತಥಾ ಕಲೌ ವಾದಿರಾಜಶ್ರೀಪಾದೋಽಭೀಷ್ಟದಃ ಸತಾಮ್ ॥

ಅನುಗ್ರಹ ಸಂದೇಶ

ಲೋಕದಲ್ಲಿ ಅಕ್ಷರಗಳನ್ನು ಕಲಿಸುವ ಗುರುಗಳಿಗೆ ನಾವು ಗೌರವವನ್ನು ನೀಡುತ್ತೇವೆ. ಅವರ ಹಿರಿಮೆಯನ್ನು ಗುರುತಿಸಿ ಅವರಿಗೆ ವಿಧೇಯರಾಗಿದ್ದುಕೊಂಡು, ಅವರು ನಮ್ಮ ಮೇಲೆ ಯಾವಾಗಲೂ ಪ್ರಸನ್ನಚಿತ್ತರಾಗಿರುವಂತೆ ನೋಡಿಕೊಳ್ಳುತ್ತೇವೆ. ಹೀಗಿರುವಾಗ ನಮ್ಮನ್ನು ಈ ಸಂಸಾರ ಬಂಧನದಿಂದಲೇ ಬಿಡುಗಡೆ ಮಾಡಿ ಸ್ವರೂಪ ಸುಖವನ್ನು ಅನುಭವಿಸುವಂತೆ ಮಾಡುವ, ಮುಖ್ಯ ಸ್ವರೂಪೋದ್ಧಾರಕರಾಗಿರುವ ಗುರುಗಳ ವಿಷಯದಲ್ಲಿ ಎಷ್ಟು ಗೌರವವನ್ನು ಸಲ್ಲಿಸಬೇಕು ಎನ್ನುವುದನ್ನು ಊಹಿಸುವುದಕ್ಕೂ ಸಾಧ್ಯವಿಲ್ಲ. ಅಂತಹ ಗುರುಗಳು ನಮ್ಮ ಮೇಲೆ ಯಾವಾಗಲೂ ಪ್ರಸನ್ನಚಿತ್ತರಾಗಿರುವಂತೆ ಮಾಡಿಕೊಳ್ಳಬೇಕಾದರೆ ಅವರ ಸ್ವರೂಪ, ಸಾಮರ್ಥ್ಯ, ಅವರು ನಮಗೆ ಮಾಡುತ್ತಿರುವ ಉಪಕಾರ-ಎಲ್ಲವನ್ನು ನಾವು ಗುರುತಿಸಿಕೊಳ್ಳಬೇಕು.

ಅಂತಹ ಶ್ರೇಷ್ಠಮಟ್ಟದ ಸ್ವರೂಪೋದ್ಧಾರಕ ಗುರುಗಳೆಂದರೆ ಶ್ರೀಮದಾಚಾರ್ಯರು. ಅವರ ಅನುಗ್ರಹವನ್ನು ಪಡೆಯುವಲ್ಲಿ ನಾವು ವಿಶೇಷವಾಗಿ ನಮ್ಮ ಯೋಗ್ಯತೆಗೆ ಅನುಗುಣವಾಗಿ ಪ್ರಯತ್ನಶೀಲರಾಗಬೇಕು.

ಅಂತಹ ದಿಸೆಯಲ್ಲಿ ಶಾಸ್ತ್ರಗಳು ಅನೇಕ ದಾರಿಗಳನ್ನು ತೋರಿಸಿಕೊಟ್ಟಿವೆ. ಅವುಗಳಲ್ಲಿ ಬಹಳ ಸುಲಭವಾದ ಮಾರ್ಗವೆಂದರೆ ಅವರ ಯಥಾರ್ಥವಾದ ಚರಿತ್ರೆಯನ್ನು ಕೇಳಿ, ಅವರಲ್ಲಿ ಭಕ್ತಿಯನ್ನು ಇನ್ನಷ್ಟು ಹೆಚ್ಚಿಸಿಕೊಳ್ಳುವುದು. ಇದು ಕಡಿಮೆ ಸ್ತರದ ಸಾಧನೆಯೆನಿಸಿದರೂ ಆಂತರದೀಕ್ಷೆ ಬರುವುದಕ್ಕೆ ಪ್ರಥಮ ಸೋಪಾನ ಇದೇ ಆಗಿದೆ. ಸಾಧನೆಗಳನ್ನು ಶಾಸ್ತ್ರಗಳು ವಿಧಿಸುವಾಗ ಮೊದಲು ವಿಧಿಸುವುದು 'ಶ್ರವಣಂ...'' ಎನ್ನುವುದಾಗಿ, ಶ್ರವಣವನ್ನೇ ಎಂಬುದನ್ನು ಗುರುತಿಸಬಹುದು.

ಅಂತಹ ಶ್ರವಣಕ್ಕೆ ಯೋಗ್ಯವಾಗಿ ಇರುವಂತಹದ್ದು ಚರಿತ್ರೆಯ ಗ್ರಂಥಗಳು. ಯೋಗ್ಯರು ಬರೆದ ಗ್ರಂಥಗಳ ಪಾರಾಯಣ ಎಂಬುದು ಶ್ರೇಯಸ್ಕರವೇ ಆಗಿದೆ. ಜೊತೆಯಲ್ಲಿ ಅಂತಃಕರಣ ಶುದ್ಧಿಯನ್ನು ವಿಶೇಷವಾಗಿ ಇಂತಹ ಚರಿತ್ರೆಯ ಗ್ರಂಥಗಳು ತಂದುಕೊಡುತ್ತವೆ.

ಅದೇ ರೀತಿಯಾಗಿ ಶ್ರೀಮದಾಚಾರ್ಯರ ಚರಿತ್ರೆಯನ್ನು ನಿರೂಪಿಸುವ ಗ್ರಂಥಗಳ ಸಾಲಿಗೆ ಶ್ರೀಮದಾಚಾರ್ಯರ ವಿದ್ಯಾಶಿಷ್ಯರಾಗಿರುವ ಶ್ರೀಸತ್ಯ ತೀರ್ಥರು ರಚಿಸಿರುವ ಶ್ರೀ ಮಧ್ವ ವಿಲಾಸ ಗ್ರಂಥವೂ ಸೇರಿದೆ. ಇಷ್ಟರವರೆಗೂ ಹೊರ ಜಗತ್ತನ್ನು ಕಾಣದೆ ಇದು ಈಗ ಅನುವಾದ, ವಿವರಣೆಗಳೊಂದಿಗೆ ಜನರ ಮುಂದೆ ಕಾಣಸಿಕೊಳ್ಳುತ್ತದೆ. ಗ್ರಂಥದ ಬಗ್ಗೆ ಮತ್ತು ಗ್ರಂಥ ಕರ್ತೃಗಳ ಬಗ್ಗೆ ವಿಸ್ತೃತವಾದ ವಿವರಣೆ ಮುಂದೆ ಅನುವಾದಕರೇ ನೀಡಿರುವುದರಿಂದ ಆ ವಿಷಯವನ್ನು ಇಲ್ಲಿ ಹೆಚ್ಚಾಗಿ ಪ್ರಸ್ತಾವಿಸುವುದಿಲ್ಲ. ಶ್ರೀಮದಾಚಾರ್ಯರು ದೃಶ್ಯರೂಪದಿಂದ ಬದರಿಗೆ ಹೊರಟು ಹೋದ

ಮೇಲೆ ಬರೆದಂತೆ ಕಾಣುವ ಈ ಗ್ರಂಥ ಶ್ರೀಮದಾಚಾರ್ಯರ ಚರಿತ್ರೆಯ ಕೆಲವು ವಿಷಯಗಳ ಮೇ
ವಿಶೇಷವಾಗಿ ಬೆಳಕು ಚೆಲ್ಲುತ್ತದೆ. ಅನೇಕ ಹಸ್ತ ಪ್ರತಿಗಳ ಆಧಾರದಲ್ಲಿ ಈ ಗ್ರಂಥ ರೂಪಗೊಂಡಿದ್ದ
ವಿಶೇಷವಾದ ಮೆರುಗನ್ನು ಪಡೆಯುತ್ತಿತ್ತು.

ಆದರೂ ಒಮ್ಮೆ ಜನರ ಕೈಯನ್ನು ಸೇರಲಿ ಎನ್ನುವ ಅಭಿಪ್ರಾಯದಿಂದ ಪುಸ್ತಕ ಮುದ್ರಣವಾಗುತ್ತಿ

ಹಿಂದೆ ಅನಂತಾಸನದೇವರ ಅರ್ಚಕರಾಗಿದ್ದ, ಸದಾಚಾರ ಸಂಪನ್ನರಾಗಿದ್ದ ಹಾಗೂ ಶಾಸ್ತ್ರಗಳ
ಪರಿಣತರೂ ಆಗಿದ್ದ ಶ್ರೀರಾಮದಾಸ ಐತಾಳರ ಸಂಗ್ರಹದಲ್ಲಿದ್ದ ಈ ಗ್ರಂಥ ತಾಳೆಗರಿಯ ರೂಪದಿಂ
ಪುಸ್ತಕ ರೂಪದಲ್ಲಿ ಹೊರ ಬರುತ್ತಿರುವುದು ವಿದ್ವಾಂಸರಾದ ಕೆ. ರಾಘವೇಂದ್ರ ಪುರಾಣಿಕರ ವಿಶೇ
ಪರಿಶ್ರಮದಿಂದ. ಚಿಕಿತ್ಸಕ ಬುದ್ಧಿಯುಳ್ಳ ಇನ್ನೂ ಚಿಕ್ಕವಯಸ್ಸಿನ ಇವರು ಇದರ ಬಗ್ಗೆ ವಿಶೇಷವಾ
ಆಸ್ಥೆವಹಿಸಿ ಅನೇಕ ಕಡೆಗಳಿಂದ ಮಾಹಿತಿಗಳನ್ನು ಸಂಗ್ರಹಿಸಿ, ಸಮಗ್ರಗ್ರಂಥ ಪರಿಪೂರ್ಣವಾ
ಮೂಡಿಬರುವ ಹಾಗೆ ವಿಸ್ತೃತ ವಿವರಣೆ ಹಾಗೂ ವಿಶೇಷ ಟಿಪ್ಪಣಿಗಳೊಂದಿಗೆ ಹೊರ ತಂದಿದ್ದಾರ
ತಮ್ಮ ಚೊಚ್ಚಲ ಕೂಸು ಎನ್ನುವ ಅಭಿಮಾನದಿಂದ ಇದನ್ನು ಸಹೃದಯ ಸಮಾಜಕ್ಕೆ ನೀಡುತ್ತಿದ್ದಾರ
ಅವರ ಪ್ರಯತ್ನ ಇನ್ನಷ್ಟು ವ್ಯಾಪಕವಾಗಿ ಸಾಗಲಿ; ಅದಕ್ಕೆ ವಿಶೇಷತಃ ಶ್ರೀ ಕೃಷ್ಣದೇವರ
ಶ್ರೀಮದಾಚಾರ್ಯರ, ಶ್ರೀಗುರುರಾಜರ ಹಾಗೂ ಶ್ರೀ ಭೂತರಾಜರ ಕೃಪಾ ವಿಶೇಷ ನಿರಂತರವಾ
ಅವರ ಮೇಲೆ ಹರಿಯುತ್ತಿರಲಿ ಎಂದು ನಾವು ಹೃತ್ಪೂರ್ವಕವಾಗಿ ಆಶಿಸುತ್ತಿದ್ದೇವೆ.

ಜೊತೆಯಲ್ಲಿ ಈ ಪುಸ್ತಕದ ಪ್ರಕಾಶನಕ್ಕೆ ಆರ್ಥಿಕ ಸಹಾಯವನ್ನು ನೀಡಿ ಸಹಕಾರ ನೀಡಿದವರು ನಮ್ಮ
ಸಂಸ್ಥಾನದ ಮುಖ್ಯಾಭಿಮಾನಿಗಳಾದ ಶ್ರೀಮತಿ ಮತ್ತು ಕೆ. ಎಸ್. ಬದರಿನಾರಾಯಣ ರಾವ್ ಮತ್ತು
ಸುಪುತ್ರರು. ಇವರು ಹರಿಗುರುಗಳಲ್ಲಿ ಭಕ್ತಿಯುಳ್ಳವರು, ಜನರ ಮನವನ್ನು ಗೆದ್ದವರೂ ಆಗಿದ್ದಾರ
ಇಂತಹ ಅನೇಕ ಮಹನೀಯರ ಸಹಕಾರಗಳಿಂದ ಅನೇಕ ಗ್ರಂಥಗಳು ಆಸ್ತಿಕ ಜನರ ಕೈಯನ್ನು
ಸೇರಬೇಕಾದ ಆವಶ್ಯಕತೆ ಇದೆ. ಇದಕ್ಕೆ ಇವರ ಆದರ್ಶ ಮೊದಲ ಹೆಜ್ಜೆಯಾಗಿ ಹೆದ್ದಾರಿಯಾಗಲಿ ಎಂದು
ಹಾರೈಸುತ್ತಿದ್ದೇವೆ.

ಅವರ ಷಷ್ಟ್ಯಬ್ದ ಸಮಾರಂಭದ ನೆನಪಿಗಾಗಿ ಇಂತಹ ಒಂದು ವಿಶಿಷ್ಟವಾದ ಸೇವೆಯನ್ನು
ಕೈಗೊಂಡಿರುವುದು ವಿಶೇಷತಃ ಸ್ತುತ್ಯರ್ಹವಾಗಿದೆ. 'ಗಣಕಲ್ಪ'ವನ್ನೂ ಇದರೊಂದಿಗೆ ಪ್ರಕಾಶಿಸುತ್ತಾ
ಒಮ್ಮಲೇ ಇಮ್ಮಡಿಯಾದ ಶ್ರೀ ವೇದವ್ಯಾಸರ ವಾಙ್ಮಯ ಸೇವೆಯನ್ನು ನಡೆಸುತ್ತಿದ್ದಾರೆ. ಅವರಿಗೆ
ಹಾಗೂ ಅವರ ಕುಟುಂಬದವರಿಗೂ ಆಯುರಾರೋಗ್ಯಾದಿ ಸಕಲ ಸಂಪತ್ತುಗಳನ್ನು ಅನುಗ್ರಹಿಸಿ ಈ
ದಾರಿಯಲ್ಲಿ ಮುನ್ನಡೆಯುವಂತೆ ಮಾಡಿಸಲಿ ಎಂದು ನಾವು ನಮ್ಮ ಆರಾಧ್ಯ ದೇವರಾದ
ಸಮೀರ-ಗುರುರಾಜವಂದಿತ ಶ್ರೀ ಭೂವರಾಹ ಶ್ರೀ ಹಯಗ್ರೀವಾತ್ಮಕ ಶ್ರೀ ವೇದವ್ಯಾಸ ದೇವರಲ್ಲಿ
ಪ್ರಾರ್ಥಿಸುತ್ತಿದ್ದೇವೆ.

ಇತ್ಯನೇಕ ನಾರಾಯಣ ಸ್ಮರಣೆಗಳು

ಉಡುಪಿ

28-9-2000

ಶ್ರೀ ಶ್ರೀ ವಿಶ್ವೋತ್ತಮ ತೀರ್ಥ ಶ್ರೀಪಾದಂಗಳವರು

ಶ್ರೀ ಸೋದೆ ವಾದಿರಾಜ ಮಠ

ಉಡುಪಿ

ಸಂಪಾದಕ ಉವಾಚ

ತುಳು ಅಕ್ಷರಗಳನ್ನು ಕಲಿಯುವ ಹೆಬ್ಬಯಕೆಯಿಂದ ಪರಮಪೂಜ್ಯರಾದ ಶ್ರೀ ಕಾಣಿಯೂರು ಮಠಾಧೀಶರಾದ ಶ್ರೀ ಶ್ರೀ ವಿದ್ಯಾವಲ್ಲಭತೀರ್ಥರು ಅನುಗ್ರಹಿಸಿ ನೀಡಿದ ತುಳುಲಿಪಿಯ 'ಸುಮಧ್ವವಿಜಯ'ಗ್ರಂಥವನ್ನು ಅವಲೋಕಿಸುತ್ತಿದ್ದಾಗ,ಪರಮಪೂಜ್ಯರಾದ ಶ್ರೀ ಸೋದಾಮಠಾಧೀಶರಾದ ಶ್ರೀ ಶ್ರೀ ವಿಶ್ವೋತ್ತಮತೀರ್ಥಶ್ರೀಪಾದರು 'ಶ್ರೀಮಧ್ವವಿಲಾಸ' ಗ್ರಂಥದ ತುಳುಲಿಪಿಯ ಗ್ರಂಥವನ್ನು ನೀಡಿದರು. ಅಲ್ಲದೆ ಅದರ ಆಧಾರದಲ್ಲಿ ಸಿದ್ಧಪಡಿಸಿದ ಸಂಸ್ಕೃತಭಾಷೆಯಲ್ಲಿ ಬರೆಯಲ್ಪಟ್ಟ ಕಾಗದದ ಪ್ರತಿಯೊಂದನ್ನು ನೀಡಿದರು. ಎರಡನ್ನೂ ಅವಲೋಕಿಸಿ ತಾತ್ಪರ್ಯಾರ್ಥ ಮೂಡುವ ರೀತಿಯಲ್ಲಿ ಅನುವಾದವನ್ನು ಸಿದ್ಧಪಡಿಸಲು ನನಗೆ ಆಜ್ಞೆಯಿತ್ತರು. ದೇವರ, ಗುರುಗಳ ಮತ್ತು ಶ್ರೀಗಳವರ ಪರಮಾನುಗ್ರಹದಿಂದ ಈಗ ಅದು ಜನರ ಕೈಯನ್ನು ಸೇರುತ್ತಿದೆ.

ಸಂಸ್ಕೃತಲಿಪಿಯಲ್ಲಿದ್ದ ಕಾಗದದ ಪ್ರತಿಯಲ್ಲಿ ಬಿಟ್ಟು ಹೋದ ಕೆಲವು ಶಬ್ದಗಳನ್ನು ತುಳು ಹಸ್ತಪ್ರತಿಯ ಆಧಾರದಲ್ಲಿ ಸೇರಿಸಿ ಆದಷ್ಟು ಶುದ್ಧಪಾಠ ದೊರಕುವಂತೆ ಪ್ರಯತ್ನಿಸಿದ್ದೇನೆ. ಡಾ। ವ್ಯಾಸನಕೆರೆ ಪ್ರಭಂಜನಾಚಾರ್ಯರು ನೀಡಿದ ಪರಿಷ್ಕೃತ ಪ್ರತಿಯನ್ನು ಅಲ್ಲಲ್ಲಿ ಬಳಸಿಕೊಂಡಿದ್ದೇನೆ. ಸರಿಸುಮಾರಾಗಿ ಒಂದೇ ಒಂದು ಹಸ್ತಪ್ರತಿಯ ಆಧಾರದಲ್ಲಿ ಸಿದ್ಧವಾದ ಈ ಪಾಠದಲ್ಲಿ ಅನೇಕ ಕಡೆಗಳಲ್ಲಿ ನಾನೇ ಕೆಲವು ಪರಿಷ್ಕಾರಗಳನ್ನು ಮಾಡಿಕೊಂಡಿದ್ದೇನೆ. ಇದರ ಕುರಿತಾಗಿ ಹಸ್ತಪ್ರತಿಯಲ್ಲಿದ್ದ ಪಾಠವನ್ನೂ, ನಾನು ಪರಿಷ್ಕರಿಸಿದ ಪಾಠವನ್ನೂ ಕೊನೆಯಲ್ಲಿ ಪ್ರತ್ಯೇಕವಾಗಿ ವಿದ್ವಾಂಸರ ಅವಗಾಹನೆಗಾಗಿ ನೀಡಿದ್ದೇನೆ. ಜೊತೆಯಲ್ಲಿ ಕೆಲವು ಜಿಜ್ಞಾಸೆಗಳನ್ನೂ ಸಂಕ್ಷಿಪ್ತವಾಗಿ ನೀಡಿದ್ದೇನೆ. ಇದನ್ನು ಮುಂದಿನ ಪಾಠಶುದ್ಧಿಯ ಶೋಧನೆಗೆ ಅನುಕೂಲವಾಗುವುದೆಂಬ ನಿರೀಕ್ಷೆಯಿಂದ ನೀಡಿದ್ದೇನೆ.

ಅಲ್ಲದೇ ಅನೇಕ ಕಡೆಗಳಲ್ಲಿ 'ಸುಮಧ್ವವಿಜಯ' ಗ್ರಂಥ, ಮತ್ತು ಅದರ ಟೀಕಾಗ್ರಂಥಗಳ ಆಧಾರದ ಹಿನ್ನೆಲೆಯಲ್ಲಿ ಅನುವಾದ ಮೂಡಿ ಬಂದಿದೆ. ವಿಸ್ತಾರವಾದ ನಿರೂಪಣೆಯ ಆವಶ್ಯಕತೆಯಿದ್ದಲ್ಲಿ ಅನುವಾದದ ಬಳಿಕ ವಿಶೇಷ ವಿವರಣೆಯನ್ನು ಆವರಣದೊಳಗೆ ನೀಡಿದ್ದೇನೆ. ಕೆಲವೆಡೆ ವಿಸ್ತೃತ ನಿರೂಪಣೆ ಆವಶ್ಯಕ ಎಂದು ಕಂಡು ಬಂದಲ್ಲೂ ವಿವರಣೆಯನ್ನು ಗ್ರಂಥಗೌರವ ಭಯದಿಂದ ನೀಡಲಿಲ್ಲ. ಆವರಣದೊಳಗೆ ಬಂದ ವಿಚಾರಗಳು 'ಸುಮಧ್ವವಿಜಯ'ಗ್ರಂಥದಲ್ಲಿ ಬಂದವುಗಳು. ಅವುಗಳ ಬಗ್ಗೆ ಇನ್ನೂ ವಿಸ್ತೃತವಾದ ವಿವರಣೆಯನ್ನು 'ಸುಮಧ್ವವಿಜಯ' ದಿಂದಲೇ ಪಡೆಯಬಹುದು.

ಶ್ಲೋಕಗಳಲ್ಲಿ ಮತ್ತು ಅನುವಾದಗಳಲ್ಲಿ 'ಅಚ್ಯುತಪ್ರೇಕ್ಷ' ಎನ್ನುವ ವಿಶಿಷ್ಟ ಆನುಪೂರ್ವಿಯನ್ನು ಹೊಂದಿರುವ ಪದವನ್ನೇ ಬಳಸಿದ್ದೇನೆ. ಹಸ್ತಪ್ರತಿಯಲ್ಲಿ ಆ ರೀತಿಯಾಗಿ ಪದವಿರುವುದೇ ಇದಕ್ಕೆ ಕಾರಣ. ಒಂದೆರಡು ಕಡೆಗಳಲ್ಲಿ ತಾತ್ಪರ್ಯಾರ್ಥವನ್ನು ಇಟ್ಟುಕೊಂಡು ಅನುವಾದವನ್ನು ಮಾಡಿದ್ದೇನೆ. ಮೂರನೆಯ ವಿಲಾಸದಲ್ಲಿ ಇದನ್ನು ಓದುಗರು ಗಮನಿಸಬಹುದಾಗಿದೆ.

ಕೊನೆಯಲ್ಲಿ ಅನುವಾದ ಹಾಗೂ ವಿವರಣೆಯನ್ನು ಅವಲೋಕಿಸಿ, ಅಲ್ಲಲ್ಲಿ ಉಪಯುಕ್ತ ಮಾಹಿತಿಯನ್ನು ನೀಡಿ, ಅನುಗ್ರಹ ಸಂದೇಶದ ರಕ್ಷೆಯನ್ನಿತ್ತು, ಆ ಮೂಲ ಇನ್ನಷ್ಟು ಹೊಣೆಗಾರಿಕೆಯನ್ನು ಹೊರಿಸಿ ಪರಮಾನುಗ್ರಹವನ್ನು ನೀಡಿ ಹರಸಿ ಪರಮಪೂಜ್ಯರಾದ ಶ್ರೀ ಸೋದಾ ವಾದಿರಾಜಮಠಾಧೀಶರಾದ ಶ್ರೀ ಶ್ರೀ ವಿಶ್ವೋತ್ತಮತೀರ್ಥ ಶ್ರೀಪಾದಂಗಳವರ ಅಡಿದಾವರೆಗಳಲ್ಲಿ ಕೃತಜ್ಞತಾಪೂರ್ವಕವಾಗಿ ಅನಂತ ಪ್ರಣಾಮಗಳನ್ನು ಸಲ್ಲಿಸುತ್ತಿದ್ದೇನೆ.

ಅನೇಕ ಆವಶ್ಯಕವಾದ ಸಲಹೆಗಳನ್ನು ನೀಡುವುದರ ಜೊತೆಯಲ್ಲಿ ತಮ್ಮ ಸಂಸ್ಥಾನ ದೇವರ ಛಾಯಾಚಿತ್ರವನ್ನು ಅನುಗ್ರಹಿಸಿದ ಪರಮಪೂಜ್ಯರಾದ ಶ್ರೀಭೀಮನಕಟ್ಟೆ ಮಠಾಧೀಶರಾದ ಶ್ರೀ ಶ್ರೀ ರಘುಮಾನ್ಯತೀರ್ಥರಿಗೂ ಅನಂತ ಸಾಷ್ಟಾಂಗ ಪ್ರಣಾಮಗಳನ್ನು ಸಮರ್ಪಿಸುತ್ತಿದ್ದೇನೆ.

ಹಸ್ತಪ್ರತಿಯ ಕೆಲವೆಡೆ ಪರಿಷ್ಕರಿಸಿ, ಬಹಳ ಸಹಾಯವನ್ನು ನೀಡಿ, ಉಪಕರಿಸಿದ ವಿದ್ವಾಂಸರಾದ ಡಾ। ವ್ಯಾಸನಕೆರೆ ಪ್ರಭಂಜನಾಚಾರ್ಯರಿಗೆ ಅನಂತ ಪ್ರಣಾಮಪೂರ್ವಕ ಕೃತಜ್ಞತೆಗಳು.

ಅನುವಾದದ ಪುಸ್ತಕ ಪ್ರಕಾಶನಗೊಳ್ಳುವುದಕ್ಕೆ ಆರ್ಥಿಕ ಸಹಕಾರವನ್ನು ಒದಗಿಸಿ ಉಪಕಾರಗೈದ ಆತ್ಮೀಯರಾದ ಶ್ರೀ ಕೆ.ಎಸ್. ಬದರೀನಾರಾಯಣ ರಾವ್ ಇವರನ್ನು ಅಭಿನಂದಿಸುತ್ತಾ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ.

ಅತ್ಯಲ್ಪ ಸಮಯದಲ್ಲಿ ಈ ಪುಸ್ತಕ ಸುಂದರವಾಗಿ ಮೂಡಿಬರುವಂತೆ ಶ್ರಮಿಸಿದ ಆತ್ಮೀಯ ಮಿತ್ರರಾದ ಶ್ರೀ ಸಿದ್ಧಿ ಗ್ರಾಫಿಕ್ಸ್‌ನ ಶ್ರೀ ಶಿವಪ್ರಸಾದ್ ಶೆಟ್ಟಿ ಹಾಗೂ ಸಿಬ್ಬಂದಿ ವರ್ಗದವರಿಗೂ ಆತ್ಮೀಯ ಅಭಿನಂದನೆಗಳು.

ಕೊನೆಯಲ್ಲಿ ಈ ಒಂದು ಕಾರ್ಯದಲ್ಲಿ ನನ್ನನ್ನು ಶ್ರದ್ಧೆಯಿಂದ ತೊಡಗಲು ಉತ್ತೇಜಿಸಿ, ಹರಸಿದ ಮನೆಯ ಹಿರಿಯರೆಲ್ಲರಿಗೂ ಪ್ರಣಾಮಗಳನ್ನು ಸಲ್ಲಿಸುತ್ತಿದ್ದೇನೆ.

ಈ ಒಂದು ಅಲ್ಪ ವಾಙ್ಮಯಸೇವೆಯಿಂದ ಗುರುಗಳ ಹೃದ್ಗತನಾದ ಶ್ರೀ ಸಮೀರ-ಗುರುರಾಜವಂದಿತ ಶ್ರೀ ಹಯಗ್ರೀವಾತ್ಮಕವ್ಯಾಸಾಭಿನ್ನ ಶ್ರೀಕೃಷ್ಣದೇವರು ಸುಪ್ರೀತರಾಗಲಿ.

ಅನಯ ಸೇವಯಾ ಶ್ರೀಶೋ
ಹಯಾಸ್ಯಃ ಪ್ರೀಯತಾಂ ಮಯಿ ।
ಗುರುರ್ಮಧ್ವೋ ವಾದಿರಾಜೋ
ಭೂತರಾಜಶ್ಚ ಸರ್ವದಾ ॥

ಗ್ರಂಥಕರ್ತೃ ವಿಚಾರ

ಈ 'ಮಧ್ವವಿಲಾಸ' ಗ್ರಂಥವನ್ನು ರಚಿಸಿದ ಶ್ರೀ ಸತ್ಯತೀರ್ಥರ ಕುರಿತು ಹೆಚ್ಚಿನ ವಿಷಯವೇನೂ ತಿಳಿದು ಬರುವುದಿಲ್ಲ. ಆದರೆ ವಿವಿಧ ಮೂಲಗಳಿಂದ ಇಷ್ಟು ವಿಷಯಗಳನ್ನು ಸಂಗ್ರಹಿಸಬಹುದು- ಶ್ರೀ ಅಚ್ಯುತ ಪ್ರೇಕ್ಷ ತೀರ್ಥರ ಬಳಿಗೆ ಇವರು ಪೂರ್ವಾಶ್ರಮದಲ್ಲಿ ವಟುವಾಗಿದ್ದಾಗ ಬಂದು 'ನನಗೆ ಸಂನ್ಯಾಸಾಶ್ರಮವನ್ನು ನೀಡಬೇಕೆಂದು' ಪ್ರಾರ್ಥಿಸಿದಾಗ (ಶ್ರೀ ಅಚ್ಯುತ ಪ್ರೇಕ್ಷ ತೀರ್ಥರ ವಂಶಧರ ಶಿಷ್ಯರಾದ ಶ್ರೀ ಪುರುಷೋತ್ತಮತೀರ್ಥರು ಯಾರು ? ಎನ್ನುವ ಬಗ್ಗೆ ಅನೇಕರಲ್ಲಿ ಅಭಿಪ್ರಾಯ ಭೇದವಿದೆ. ಆದರ ಬಗ್ಗೆ ಏನನ್ನೂ ಖಚಿತವಾಗಿ ಹೇಳಲಿಕ್ಕೆ ಆಗದೇ ಇದ್ದುದರಿಂದ ಈ ಗ್ರಂಥದಲ್ಲಿ ಕಾಣುವಂತೆ ಅವರು ಜ್ಯೇಷ್ಠ ಯತಿಗಳೆಂದು ಒಪ್ಪಿಕೊಂಡು ಮುಂದೆ ಎಲ್ಲ ಕಡೆಗಳಲ್ಲಿ ನಿರೂಪಣೆ ಸಾಗಿದೆ ಎಂದು ತಿಳಿಯಬೇಕಾಗಿ ಸೂಚನೆ) ಗುರುಗಳ ಅನುಜ್ಞೆಯನ್ನು ಪಡೆದು ಇವರಿಗೆ ಸಂನ್ಯಾಸವನ್ನು ನೀಡಿದರು ಎ ನ್ನುವ ವಿಚಾರ ಈ ಮಧ್ವ ವಿಲಾಸ ಗ್ರಂಥದಿಂದ ತಿಳಿದು ಬರುತ್ತದೆ.ಮುಂದೆ ಶ್ರೀ ಸತ್ಯತೀರ್ಥರು ಶ್ರೀ ಮದಾಚಾರ್ಯರ ಬಳಿಯಲ್ಲಿ ಇದ್ದುಕೊಂಡು ಅವರಿಂದಲೇ ಪಾಠವನ್ನು ಕೇಳಿ ತತ್ವಜ್ಞಾನಿಗಳಾದರು. ಶ್ರೀ ಮದಾಚಾರ್ಯರು 'ನನ್ನ ಮೇಲೆ ಅನುಗ್ರಹಾತಿಶಯವನ್ನು ಮಾಡುತ್ತಾ ನನ್ನ ಕೈಯಿಂದಲೇ ಬ್ರಹ್ಮಸೂತ್ರ ಭಾಷ್ಯ ಗ್ರಂಥವನ್ನು ಬರೆಯಿಸಿದರು'. ಅಂತ ಅವರೇ ಈ ಗ್ರಂಥದಲ್ಲಿ ತಿಳಿಸಿದ್ದಾರೆ. ಅವರೇ ನಿರೂಪಿಸಿದಂತೆ ಬ್ರಹ್ಮಸೂತ್ರ ಭಾಷ್ಯದ ಒಂದೊಂದು ಅಕ್ಷರವನ್ನು ಬರೆದರೇನೆ ಗಂಗಾನದಿಯ ತೆರೆಗಳು ಅಪ್ಪಳಿಸುವ ಸ್ಥಳದಲ್ಲಿ ಶ್ರೀ ಹರಿಯ ಮಂದಿರವನ್ನು ಕಟ್ಟಿದ ಪುಣ್ಯಾತ್ಮನ ಸುಕೃತವಿದೆಯೆಂದ ಮೇಲೆ ಸಮಗ್ರ ಭಾಷ್ಯವನ್ನು ಬರೆದಿರುವ ಶ್ರೀ ಸತ್ಯತೀರ್ಥರು ಎಂತಹ ಪರಮ ಪುಣ್ಯಶಾಲಿಗಳೆಂದು ಊಹಿಸುವುದಕ್ಕೂ ಸಾಧ್ಯವಿಲ್ಲ.

ಶ್ರೀ ಮದಾಚಾರ್ಯರಿಗೆ ಅತ್ಯಂತ ಪ್ರಿಯವಾದುದು ಶ್ರೀಐತರೇಯ ಉಪನಿಷತ್ತು. ಅದನ್ನು ಅವರ ಮುಖದಿಂದಲೇ ಮೂರು ಬಾರಿ ಕೇಳಿ ಅರ್ಥೈಸಿಕೊಂಡ ಪರಮ ಭಾಗ್ಯಶಾಲಿಗಳು ಶ್ರೀ ಸತ್ಯತೀರ್ಥರು. ಗುರುಗಳ ಜೊತೆಯಲ್ಲಿ ಬದರಿ ಯಾತ್ರೆಯನ್ನು ಮಾಡಿದ ಇವರು ಯಾವಾಗಲೂ ಗುರುಗಳಿಂದ ಪೂಜಿಸಲ್ಪಡುವ ಪೆಟ್ಟಿಗೆಯನ್ನು ಹೊತ್ತುಕೊಂಡು ಎಲ್ಲರಿಗಿಂತಲೂ ಮುಂದೆ ಹೋಗುತ್ತಿದ್ದರು. ದಾರಿಯಲ್ಲಿ ವ್ಯಾಘ್ರರೂಪದ ದೈತ್ಯನ ಆಕ್ರಮಣಕ್ಕೆ ಒಳಗಾಗುವ ಸಂದರ್ಭ ಬಂದಾಗ ಗುರುಗಳಿಂದಲೇ ರಕ್ಷಿತರಾದರು.

ಗುರುಗಳು ಊರ್ಧ್ವ ಬದರಿಗೆ ಪ್ರಯಾಣ ಬೆಳೆಸಿದಾಗ ಗುರುಗಳ ವಿಯೋಗವನ್ನು ತಡೆಯಲಾಗದೆ ಅವರನ್ನು ಹಿಂಬಾಲಿಸಿದವರು ಈ ಸತ್ಯತೀರ್ಥರು. ಗುರುಗಳು ಬಂಡೆಯಿಂದ ಬಂಡೆಗೆ ನೆಗೆಯುತ್ತಾ ಪ್ರಯಾಣ ಮಾಡುವ ವೈಖರಿಯನ್ನು ಕಂಡ ಮಹಾತ್ಮರಿವರು. ಗುರುಗಳ ವಾತ್ಸಲ್ಯಕ್ಕೆ ಪಾತ್ರರಾಗಿ ಅವರ ಕೈಯ ಲೀಲಾರೂಪರಾದ ಪ್ರೇರಣೆಯಿಂದಲೇ ಸುರಕ್ಷಿತವಾಗಿ ನಿಮಿಷ ಮಾತ್ರದಲ್ಲಿ

ಹಿಂತಿರುಗಿ ಬಂದ ಮಹಾತ್ಮರಿವರು. ಈ ಘಟನೆಯನ್ನು ತಮ್ಮ ಸಹಪಾಠಿಗಳಿಗೆ ಹೇಳುತ್ತಾ ತಾವೇ ಬ
ಬಾರಿಗೂ ಮೆಲುಕು ಹಾಕುತ್ತಾ ಕೃತ್ಯ ಕೃತ್ಯರಾದವರು.

ಇವರು ಕುರುಕ್ಷೇತ್ರದಲ್ಲಿ ಭಾವೀ ಮಾರೀಚನನ್ನು ಗುರುಗಳ ನಿರ್ದೇಶದಂತೆ ನೋ
ಗುರುಗಳ ಜ್ಞಾನವನ್ನು ನೋಡಿ ಪುಳಕಿತರಾದವರು. ಹಿಂದಿನ ಜನ್ಮದಲ್ಲಿ ತಾವು ರಾಜ
ಆಯುಧವನ್ನು ಹಿಡಿದುಕೊಂಡಿದ್ದನ್ನು ಗುರುಗಳು ನೆನಪಿಸಿ ಆಯಧವನ್ನು ತೋರಿಸಿದಾಗ ಆ ಹಿಂ
ಜನ್ಮದ ಘಟನೆಯನ್ನು ತಮ್ಮ ಸ್ಮೃತಿ ಪಟಲಕ್ಕೆ ಇವರು ತಂದು ಕೊಂಡರು.

ಇಂತಹ ಮಹಾತ್ಮರ ಗ್ರಂಥ ಇದೊಂದೇ ಎಂದು ಭಾವಿಸಲಾಗಿತ್ತು. ಆದರೆ ಶ್ರೀ ವ್ಯಾಸನ
ಪ್ರಭಂಜನಾಚಾರ್ಯರು 'ಅಧಿಕರಣ ಸಂಗ್ರಹ' ಎನ್ನುವ ಇನ್ನೊಂದು ಕೃತಿ ಇದೆಯೆಂದು ಇತ್ತೀಚ
'ಸುಮಧ್ವವಿಜಯ' ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ. ಅಲ್ಲದೇ ಶ್ರೀ ಸಂಕರ್ಷಣ ಒಡೆಯರು
ಸತ್ಯತೀರ್ಥರ ಇನ್ನೊಂದು ಗ್ರಂಥವನ್ನು ತಮ್ಮ ಹರಿಕಥಾಮೃತ ಸಾರದ ವ್ಯಾಖ್ಯಾನ ಗ್ರಂಥ
ಉದಾಹರಿಸಿರುವರು ಎನ್ನುವ ಇನ್ನೊಂದು ಅಂಶವನ್ನು ಶ್ರೀ ಪ್ರಭಂಜನಾಚಾರ್ಯ
ಉಲ್ಲೇಖಿಸಿದ್ದಾರೆ. (ಸುಮಧ್ವ ವಿಜಯ - ಪು. ಸಂಖ್ಯೆ 502) ಇದಿಷ್ಟು ಈ ಗ್ರಂಥದ ಕರ್ತೃಗಳ
ವಿಚಾರವನ್ನು ನಾವು ವಿವಿಧ ಮೂಲಗಳಿಂದ ಸಂಗ್ರಹಿಸಬಹುದಾಗಿದೆ.

ಹಸ್ತಪ್ರತಿಯ ಕುರಿತು

ಶ್ರೀ ಸತ್ಯತೀರ್ಥರು ರಚಿಸಿದ ಈ ಮಧ್ವವಿಲಾಸಗ್ರಂಥವು ಇಷ್ಟರವರೆಗೂ ಹಸ್ತಪ್ರತಿಗಳಲ್ಲಿಯೇ ಇದ್ದ ಗ್ರಂಥವಾಗಿದೆ. ಇದರ ಒಂದು ಹಸ್ತಪ್ರತಿಯು ಪರಮಪೂಜ್ಯ ಶ್ರೀಸೋದಾಮಠಾಧೀಶರಾದ ಶ್ರೀ ಶ್ರೀವಿಶ್ವೋತ್ತಮತೀರ್ಥಶ್ರೀಪಾದಂಗಳವರ ಬಳಿಯಿದೆ. ಅದರ ಆಧಾರದಲ್ಲಿ ಸಿದ್ಧವಾದ ಪಾಠವನ್ನೂ ಕೆಲವೆಡೆ ಪರಿಷ್ಕಾರಗೊಳಿಸಲಾಗಿದೆ. ಪರಿಷ್ಕಾರಗೊಳಿಸಿದ ಭಾಗಗಳನ್ನು ಕೊನೆಯಲ್ಲಿ ಪ್ರತ್ಯೇಕವಾಗಿ ನೀಡಲಾಗಿದೆ.

ಡಾ। ವ್ಯಾಸನಕೆರೆ ಪ್ರಭಂಜನಾಚಾರ್ಯರು ಸಂಪಾದಿಸಿ, ಅನುವಾದಿಸಿದ 'ಸುಮಧ್ವವಿಜಯ'ಗ್ರಂಥದ (ಪ್ರಕಾಶನ - ಐತರೇಯ ಪ್ರಕಾಶನ ವ್ಯಾಸನಕೆರೆ) 279ನೆಯ ಪುಟದಲ್ಲಿ ಈ ಗ್ರಂಥದ ತೃತೀಯ ವಿಲಾಸದ 27ನೆಯ ಶ್ಲೋಕವೊಂದನ್ನು ಉಲ್ಲೇಖಿಸಿದ್ದರು. ಆ ಹಸ್ತಪ್ರತಿ ಅವರ ಬಳಿ ಸದ್ಯಕ್ಕೆ ಇಲ್ಲದಿರುವುದರಿಂದ ಅದರ ಸಹಾಯವನ್ನು ಪಡೆಯಲು ಸಾಧ್ಯವಾಗಲಿಲ್ಲ. ಆದರೂ ಅವರು ತಾವು ಅದರ ಆಧಾರದಲ್ಲಿ ಸಿದ್ಧಪಡಿಸಿಕೊಂಡಿದ್ದ ಪಾಠವನ್ನು ನೀಡಿದ್ದಾರೆ. ಅದನ್ನು ಸಹ ಪಾಠದಲ್ಲಿ ಬಳಸಿಕೊಳ್ಳಲಾಗಿದೆ.

ಉಳಿದ ಕಡೆಗಳಲ್ಲಿ ಈ ಗ್ರಂಥದ ಹಸ್ತಪ್ರತಿಗಳು ಇರುವುದರ ಬಗ್ಗೆ ಮಾಹಿತಿ ಸಿಗದ ಕಾರಣ ಸರಿಸುಮಾರಾಗಿ ಒಂದೇ ಒಂದು ಹಸ್ತಪ್ರತಿಯ ಸಹಾಯದಿಂದ ಪಾಠವನ್ನು ಪರಿಷ್ಕರಿಸಿ ಸಿದ್ಧಪಡಿಸಲಾಗಿದೆ.

ಒಟ್ಟಿಗೆ 149 ಶ್ಲೋಕಗಳಿರುವ ಈ ಗ್ರಂಥವು 8 ತಾಳೆಗರಿಗಳಲ್ಲಿ ತುಳು ಲಿಪಿಯಲ್ಲಿ ಲಿಪಿ ಸಿದ್ಧವಾಗಿದೆ. ಅದರ ಒಂದು ಪತ್ರದ ಛಾಯಾಚಿತ್ರವನ್ನು ಓದುಗರ ಗಮನಕ್ಕೆ ನೀಡಬೇಕೆನ್ನುವ ಆಸೆ ಇತ್ತು. ಆದರೆ ಅದು ಸ್ಪಷ್ಟವಾಗಿ ಮೂಡದ ಕಾರಣ ನೀಡಲು ಆಗುತ್ತಿಲ್ಲ.

- ಇವಿಷ್ಟು ಹಸ್ತಪ್ರತಿಯ ಕುರಿತು ಹೇಳಬೇಕಾದ ಮಾತುಗಳು.

ಶ್ರೀ ಸತ್ಯತೀರ್ಥಭಿಕ್ಷುವಿರಚಿತ:

ಶ್ರೀಮನ್ಮಧ್ವವಿಲಾಸ:

ಅಥ ಪ್ರಥಮೋ ವಿಲಾಸ:

ಸೀತಾಪತಿಮುಪಾಸೇಹಮ್ ಅಸಿತಾಭಂ ಧನುರ್ಧರಮ್।
ಸನಕಾದ್ಯೈ ರ್ಮುನಿವರ್ಯೈಃ ಪೂಜಿತಂ ಶಾಂತವಿಗ್ರಹಮ್ ॥೧॥

ಮೇಘದಂತೆ ನೀಲಬಣ್ಣವುಳ್ಳ, ಧನುಸ್ಸನ್ನು ಕೈಯಲ್ಲಿ ಹಿಡಿದಿರುವ, ಹಂಸನಾಮಕ ರಮಾತ್ಮನಿಂದ ಆರಂಭಗೊಂಡ ಯತಿಪೀಳಿಗೆಯಲ್ಲಿ ಬಂದ ಸನಕರೇ ಮೊದಲಾದ ಶ್ರೇಷ್ಠ ುತಿಗಳು ಆರಾಧಿಸಿದ, ಸೌಮ್ಯ ದೇಹವುಳ್ಳ (ಸುಖಪೂರ್ಣವಾದ ಶರೀರವುಳ್ಳ), ೀತಾಪತಿಯಾದ ಶ್ರೀರಾಮಚಂದ್ರದೇವರನ್ನು ನಾನು ಧ್ಯಾನಿಸುತ್ತೇನೆ.

ಯಸ್ಯ ಸ್ಮರಣಮಾತ್ರೇಣ ಜಾಯತೇ ಬುದ್ಧಿಮಾನ್ ನರ:।
ತಂ ಸ್ಮರಾಮಿ ಪ್ರಭುಂ ವಾಯುಂ ರೂಪತ್ರಯಸಮನ್ವಿತಮ್ ॥ ೨॥

ಯಾರನ್ನು ಕೇವಲ ಸ್ಮರಿಸುವುದರಿಂದಲೇ ಮನುಷ್ಯ ಶ್ರೇಷ್ಠಜ್ಞಾನಿಯಾಗಬಲ್ಲನೋ, ಂತಹ ಸರ್ವಸಮರ್ಥರಾದ, ಹನುಮಂತ-ಭೀಮಸೇನ ಹಾಗೂ ಶ್ರೀಮಧ್ವಾಚಾರ್ಯ- ನ್ನುವ ಮೂರು ಅವತಾರಗಳನ್ನು ತಳೆದಿರುವ ಶ್ರೀವಾಯುದೇವರನ್ನು ಸ್ಮರಿಸುತ್ತೇನೆ.

ಯೇ ಮಮಾಲೌಕಿಕಂ ಬ್ರಹ್ಮ ದದುಸ್ತಾನ್ ಪುರುಷೋತ್ತಮಾನ್।
ವಂದೇಹಮ್ ಅಚ್ಯುತಪ್ರೇಕ್ಷಕರ ಕಂಜಸಮುದ್ಭವಾನ್ ॥ ೩॥

ಶ್ರೀಅಚ್ಯುತಪ್ರೇಕ್ಷತೀರ್ಥರಿಂದ ಸಂನ್ಯಾಸಾಶ್ರಮದೀಕ್ಷೆಯನ್ನು ಪಡೆದು ಕಮಲಸಂಜಾತರೆನಿಸಿದ, ನನಗೆ ಸಂನ್ಯಾಸದೀಕ್ಷೆಯನ್ನಿತ್ತು, ಅಲೌಕಿಕವಿದ್ಯೆಯನ್ನು ನುಗ್ರಹಿಸಿದ ಶ್ರೀಪುರುಷೋತ್ತಮತೀರ್ಥರನ್ನು ನಾನು ಸ್ಮರಿಸುತ್ತೇನೆ.

ಸತ್ಯತೀರ್ಥಾಖ್ಯಭಿಕ್ಷುರ್ಹಿ ವಚ್ಮಿ ಮಧ್ವವಿಲಾಸಕಮ್।
ಯಂ ಶ್ರುತ್ವಾ ಮುಚ್ಯತೇ ಜೀವೋ ಬಂಧಾತ್ತಲ್ಲೋಕಸಿದ್ಧಯೇ ॥ ೪॥

'ಸತ್ಯತೀರ್ಥ' ಎನ್ನುವ ಹೆಸರುಳ್ಳ ನಾನು 'ಮಧ್ವವಿಲಾಸ' ಎನ್ನುವ ಗ್ರಂಥ
ಬರೆಯುತ್ತಿದ್ದೇನೆ. ಅದರಲ್ಲಿ ಹೇಳುವ ಶ್ರೀಮಧ್ವಾಚಾರ್ಯರ ಲೀಲಾವೈಭವಗಳನ್ನು ಯಾ
ಕೇಳುತ್ತಾರೋ, ಅವರು ಭಗವಂತನ ಲೋಕವನ್ನು ಸೇರಲು ಅಗತ್ಯವಾದ ಜ್ಞಾನವನ್ನು ಪಡೆ
ಸಂಸಾರ ಬಂಧದಿಂದ ಬಿಡುಗಡೆಯನ್ನು ಹೊಂದುತ್ತಾರೆ.

ಮಹಿಮಾನಂ ತಸ್ಯ ವಕ್ತುಂ ದೇವೈರಪಿ ನ ಶಕ್ಯತೇ।
ತಥಾಪಿ ತತ್ಪ್ರಸಾದೇನ ಯಥಾಶಕ್ತಿ ಯಥಾಮತಿ ॥೩॥
ಮನೋವಿಶುದ್ಧಿಸಿದ್ಧ್ಯರ್ಥಂ ವರ್ಣಯಾಮಿ ಯಥಾರ್ಥತಃ।
ಮಹಿಮಾನಂ ಲೋಕಗುರೋಃ ದಿವ್ಯಂ ಲೇಶೇನ ಪಾವನಮ್ ॥೪॥

ಶ್ರೀಮಧ್ವಾಚಾರ್ಯರ ಮಾಹಾತ್ಮ್ಯಗಳನ್ನು ದೇವತೆಗಳಿಗೂ ವರ್ಣಿಸ
ಸಾಧ್ಯವಾಗುವುದಿಲ್ಲ. ಹೀಗಿರುವಾಗ ನನಗಂತೂ ಸಾಧ್ಯವೇ ಇಲ್ಲ. ಹೀಗಿದ್ದರೂ
ಲೋಕಗುರುವೆನಿಸಿದ ಅವರ ಪಾವನವಾದ ಹಾಗೂ ಅಲೌಕಿಕವಾದ ಮಹಿಮೆಗಳ
ಮನಃಶುದ್ಧಿಗೋಸ್ಕರ, ಸ್ವಲ್ಪ ಮಟ್ಟಿಗೆ, ಅವರ ಅನುಗ್ರಹ ಬಲದಿಂದ, ಸಾಧ್ಯವಾದಷ್ಟು, ಬು
ನಿಲುಕಿದಷ್ಟು ಯಥಾವತ್ತಾಗಿ ವರ್ಣಿಸುತ್ತೇನೆ.

ಅಥ ಕೇಚಿದ್ಧತಾಃ ಪೂರ್ವಂ ಭೀಮೇನ ದಿತಿಜಾಃ ಖಲು ।
ತೇ ಪುನರ್ಭೂತಲಂ ಪ್ರಾಪ್ಯ ಮಂತ್ರಯಾಂಚಕ್ರುರುದ್ಯತಾಃ ॥೫॥

ಹಿಂದಿನ ದ್ವಾಪರಯುಗದಲ್ಲಿ ಶ್ರೀವಾಯುದೇವರು ಭೀಮಸೇನನಾಗಿ ಅವ
ಮಾಡಿದ್ದಾಗ ಮಣಿಮಂತ ಮೊದಲಾದ ದೈತ್ಯರನ್ನು ಕೊಂದಿದ್ದನಷ್ಟೆ. ಅದೇ ದೈ
ಮತ್ತೊಮ್ಮೆ ಭೂಮಿಯಲ್ಲಿ ಹುಟ್ಟಿಬಂದರು. ಹುಟ್ಟಿ ಅವರೆಲ್ಲರೂ ಮುಂದೆ ಆಗಬೇ
ಕಾರ್ಯಗಳ ಕುರಿತಾಗಿ ಮಂತ್ರಾಲೋಚನೆಯನ್ನು ಮಾಡಿದರು.

ಕೃಷ್ಣಭೀಮಾವು ಭೌಚಾಪಿ ಪ್ರಿಯೌ ನಾಸ್ಮಾಕಮೇವ ಹಿ।
ತಸ್ಮಾತ್ತಯೋರಪ್ರಿಯಂ ಸ್ಯಾತ್ ಕರ್ಮ ಕಾರ್ಯಂ ಸಮಂತತಃ ॥೬॥

"ಕೃಷ್ಣ ಮತ್ತು ಭೀಮಸೇನ - ಇವರಿಬ್ಬರೂ ನಮಗೆ ಪ್ರಿಯರು ಅಲ್ಲವೇ
ಆದ್ದರಿಂದ ಅವರೊಡನೆ ನಾವು ದ್ವೇಷವನ್ನು ಮತ್ತಷ್ಟು ಮುಂದುವರಿಸಬೇಕು. ಅದ
ಅವರಿಬ್ಬರಿಗೂ ಪ್ರಿಯವಲ್ಲದ ಕೆಲಸಗಳನ್ನು ಎಲ್ಲೆಡೆ, ಎಲ್ಲ ರೀತಿಯಿಂದಲೂ
ಕೈಗೊಳ್ಳಬೇಕಾಗಿದೆ.

ಜಗನ್ಮಿಥ್ಯಾ ಬಾಧಿತಂ ಚ ಬ್ರಹ್ಮ ನಿರ್ಗುಣಮೇವ ಚ।
ಅಪ್ರಾಮಾಣ್ಯಂ ಚ ವೇದಸ್ಯ ಸಾಧಯಂತು ಪ್ರಯತ್ನತಃ ॥೭॥

ಕಣ್ಣಿಗೆ ಕಾಣುವ ಈ ಪ್ರಪಂಚ ಸುಳ್ಳು; (ಯಾವ ಕಾಲದಲ್ಲೂ ಇಲ್ಲವೇ ಇಲ್ಲ.) ಈಗ ಕಾಣುತ್ತಿದ್ದರೂ ಬ್ರಹ್ಮನ ಜ್ಞಾನ ಬಂದಾಗ ಪ್ರಪಂಚ ಇಲ್ಲವೇ ಇಲ್ಲ ಎಂದು ತಿಳಿದು ಬಿಡುತ್ತದೆ. ಅರ್ಥಾತ್ ಬ್ರಹ್ಮನ ಜ್ಞಾನದಿಂದ ಈ ಪ್ರಪಂಚವು ಬಾಧಿತವಾಗಿದೆ;* ಆ ಬ್ರಹ್ಮನಲ್ಲಿ ಯಾವುದೇ ಗುಣಗಳೂ ಇಲ್ಲ; ವೇದಗಳೂ ಅಪ್ರಮಾಣವೇ. ಅಂದರೆ ಅವುಗಳು ಹೇಳುವ ವಿಷಯಗಳು ಸುಳ್ಳು- ಈ ವಿಚಾರಗಳನ್ನು ನಾವು ಬಹಳ ಪ್ರಯತ್ನ ಪಟ್ಟಾದರೂ ಸಾಧಿಸಬೇಕಾಗಿದೆ.

ಅಥ ತದ್ಭಕ್ತಪೀಡಾಂ ತು ಕೃತ್ವಾ ತಾನ್ ಬಲಿನೋಽಪಿ ನಃ।
ವಿವಿಧೋಪಾಯಮಂತ್ರಾಭ್ಯಾಂ ವಂಚಯಿತ್ವಾ ರಮಾಮಹೇ ॥೧೦॥

ಅಲ್ಲದೇ ಕೃಷ್ಣ ಮತ್ತು ಭೀಮಸೇನ - ಇವರಿಬ್ಬರಲ್ಲಿ ಯಾರು ಭಕ್ತಿಯನ್ನು ಮಾಡುತ್ತಾರೋ, ಅಂತಹವರಿಗೆ ಪೀಡೆಯನ್ನು ಕೊಡಬೇಕು. ಒಂದು ವೇಳೆ ಅಂತಹ ಭಕ್ತರು ನಮಗಿಂತ ಬಲಿಷ್ಠರಾಗಿದ್ದರೆ ಅವರನ್ನು ವಿವಿಧ ಉಪಾಯಗಳಿಂದ ಹಾಗೂ ದುರ್ಮಂತ್ರಗಳ ಪ್ರಯೋಗದಿಂದ ವಂಚಿಸಬೇಕು. ಈ ರೀತಿಯಾಗಿ ಕೃಷ್ಣ ಮತ್ತು ಭೀಮಸೇನ ಇವರಿಬ್ಬರಲ್ಲಿ ನಮಗಿರುವ ದ್ವೇಷವನ್ನು ತೀರಿಸಿಕೊಳ್ಳುತ್ತಾ ಸಂತೋಷ ಪಡೋಣ''

ಇತಿ ಸರ್ವೇ ತತೋ ದೈತ್ಯಾಃ ತಥಾಽಕುರ್ವನ್ ಬಲೇನ ಹಾ।

ಈ ರೀತಿಯಾಗಿ ಮಂತ್ರಾಲೋಚನೆಯನ್ನು ಮಾಡಿದ ಆ ಎಲ್ಲ ದೈತ್ಯರು ತಾವು ಣೆಸಿಕೊಂಡಂತೆ ತಮ್ಮ ಸಹಜ ಬಲದಿಂದ ಹಾಗೂ ಉಪಾಯ, ದುರ್ಮಂತ್ರಗಳ ಪ್ರಭಾವದಿಂದ ಕಾರ್ಯವನ್ನು ಸಾಧಿಸಿದರು. ಅಯ್ಯೋ ಸಜ್ಜನರಿಗೆ ಎಂತಹ ಕಷ್ಟ ಬಂತು!

ಕೇನ ಕಾಲೇನ ವಿಜ್ಞಾನಭಾನೌ ಲೀನೇ ಜನೇಽಪಿ ಚ ॥೧೧॥
ಅಂಧೀಕೃತೇ ದುರ್ಮತೇನ ತಿಮಿರೇಣ ಹಿ ದೇವತಾಃ ।
ವೀಕ್ಷ್ಯ ಬ್ರಹ್ಮಾದಯೋ ಮಾರ್ಗಾತ್ ಚ್ಯುತಂ ಲೋಕಂ ಕೃಪಾಲವಃ ॥೧೨॥

(ಬಿಸಿಲಿನಲ್ಲಿ ಸಮುದ್ರ ತೀರದಲ್ಲಿ ಚಿಪ್ಪನ್ನು ದೂರದಿಂದ ನೋಡಿದಾಗ ಅದು 'ಬೆಳ್ಳಿ' ಎಂದು ಣುವುದು. ಹತ್ತಿರ ಹೋಗಿ ನೋಡಿದಾಗ '' ಇದು ಬೆಳ್ಳಿಯಲ್ಲ; ಚಿಪ್ಪು '' ಎಂದು ನವರಿಕೆಯಾಗುತ್ತದೆ. ಇಲ್ಲಿ ಚಿಪ್ಪು 'ಬೆಳ್ಳಿ' ಎಂಬುದಾಗಿ ಕಂಡ ತಿಳುವಳಿಕೆಯು '' ಇದು ಬೆಳ್ಳಿಯಲ್ಲ ಚಿಪ್ಪು'' ಎನ್ನುವ ತಿಳುವಳಿಕೆಯಿಂದ ಹೊರಟು ಹೋಗುತ್ತದೆ. ಆದ್ದರಿಂದ ಚಿಪ್ಪು 'ಬೆಳ್ಳಿ' ಎಂದು ಕಂಡದ್ದು ಬಾಧಿತವೆಂದೂ, ಇದು ಬೆಳ್ಳಿಯಲ್ಲ; ಚಿಪ್ಪು ಎಂದು ಕಂಡದ್ದು ''ಬಾಧಕ''ವೆಂದೂ ಕರೆಯಲ್ಪಡುತ್ತದೆ. ಹಾಗೆಯೇ ಅದರಂತೆ 'ಪ್ರಪಂಚವು ಸತ್ಯವಾಗಿ ಇದೆ' ಎಂಬ ಜ್ಞಾನವು ''ಪ್ರಪಂಚ ಸತ್ಯವಾಗಿ ಇಲ್ಲ; ಸತ್ಯವಾಗಿ ಇರುವುದು ಬ್ರಹ್ಮನೊಬ್ಬನೆ'' ಎಂಬ ಜ್ಞಾನದಿಂದ ಹೊರಟು ಹೋಗುವುದರಿಂದ ಮೊದಲನೆಯ ಜ್ಞಾನವು 'ಬಾಧಿತ'ವೆಂದೂ, ಎರಡನೆಯ ಜ್ಞಾನವು 'ಬಾಧಕ'ವೆಂದೂ ಕರೆಯಲ್ಪಡುತ್ತದೆ.

ಹೀಗೆ ದೈತ್ಯರು ಮಾಡಿದ ಕಾರ್ಯಸಾಧನೆಯಿಂದಾಗಿ ಕಾಲ ಕಳೆದಂತೆ ತತ್ವಜ್ಞಾನ
ಸೂರ್ಯ ಮರೆಯಾದನು; ಜನರು ದುರ್ಮತಗಳೆನ್ನುವ ಕತ್ತಲೆಯಿಂದ ಪಾಮರರಂತ್ತಾದು
(ಸೂರ್ಯ ಉದಿಸಿದ್ದಾಗ ಮುಂದೆ ಪಯಣಿಸಬೇಕಾದ ದಾರಿ ಕಾಣಿಸುವಂತೆ ತತ್ವಗ್ರಂ
ಪ್ರಚುರವಾಗಿ ಪ್ರಚಾರದಲ್ಲಿದ್ದಾಗ, ಮಾಡಬೇಕಾದ ಸಾಧನೆಯ ದಾರಿಯಲ್ಲಿ ಪ್ರಯ
ಸಾಗುತ್ತಿದ್ದರು. ಸೂರ್ಯ ಮರೆಯಾದಾಗ ಕತ್ತಲೆ ಕವಿಯುತ್ತದೆ. ಅದೇ ರೀತಿಯಾಗಿ (ಮಾ
ಉಪಟಳದಿಂದ ತತ್ವಜ್ಞಾನ ನಶಿಸಿ ಹೋದಾಗ ದುರ್ಮತಗಳು ಎಲ್ಲೆಡೆ ಆವರಿಸಿ
ಕತ್ತಲೆಯಲ್ಲಿ ದಾರಿ ಹೋಕರಿಗೆ ದಾರಿಯನ್ನು ಕ್ರಮಿಸಲು ಸಾಧ್ಯವಾಗದಿರುವಂತೆ ದುರ್ಮ
ಅಬ್ಬರದಲ್ಲಿ ಸಜ್ಜನರು ದಾರಿ ತೋಚದೆ ಸಾಧನೆಯ ದಾರಿಯಲ್ಲಿ ಮುನ್ನಡೆಯದಂತಾ

ಅಂತಹ ಸನ್ನಿವೇಶದಲ್ಲಿ ಚತುರ್ಮುಖ ಮೊದಲಾದ ದೇವತೆಗಳು ಭೂಲೋ
ಸಜ್ಜನರಿಗೆ ಒದಗಿದ ಈ ಸ್ಥಿತಿಯನ್ನು ಅವಲೋಕಿಸಿದರು. ಕಷ್ಟಕ್ಕೊಳಗಾದ ಸಜ್ಜ
ವಿಷಯದಲ್ಲಿ ಆ ದೇವತೆಗಳಿಗೆ ಕರುಣೆ ಉಕ್ಕಿ ಬಂತು.

ಶರಣ್ಯಂ ಶರಣಂ ಜಗ್ಮುಃ ನಾರಾಯಣಮನಾಮಯಮ್।

ಹೀಗೆ ಸಜ್ಜನರಲ್ಲಿ ಕರುಣೆಯುಳ್ಳ ಆ ಬ್ರಹ್ಮಾದಿ ದೇವತೆಗಳು ಅವರನ್ನು ಉದ್ಧ
ತಮಗೆ ಸಾಧ್ಯವಿಲ್ಲ ಎಂದರಿತು, ಎಲ್ಲರಿಗೂ ಕೊನೆಯ ರಕ್ಷಕನಾದ, ದೋಷದೂ
ಶ್ರೀಮನ್ನಾರಾಯಣನಲ್ಲಿ ಶರಣು ಹೊಂದಿದರು.

ತ್ರೈರ್ವಿಜ್ಞಾಪಿತಕಾರ್ಯಸ್ತು ಭಗವಾನ್ ಪುರುಷೋತ್ತಮಃ ||೧
ಬಭಾಷೇ ಪವನಂ ದಕ್ಷಂ ಗಚ್ಛ ತಾತ ಭುವಂ ಪ್ರತಿ ।
ದೂರೀಕೃತ್ಯ ಮತಂ ದುಷ್ಟಂ ವಿಮಲೀಕೃತ್ಯ ಸಜ್ಜನಮ್ ||೧
ಸನ್ಮತಂ ಪ್ರಕಟೀಕೃತ್ಯ ಮಾಂ ಚ ಭಕ್ತೇಷು ಜ್ಞಾಪಯ।

ಶ್ರೀಮನ್ನಾರಾಯಣನಲ್ಲಿ ಶರಣು ಹೊಂದಿದ ಬ್ರಹ್ಮಾದಿ ದೇವತೆಗಳು ಭೂಲೋ
ಸಜ್ಜನರಿಗೆ ಆಗುತ್ತಿರುವ ತೊಂದರೆಯನ್ನು ನಿವೇದಿಸಿ, ಅವರನ್ನು ಉದ್ಧರಿಸ
ಪ್ರಾರ್ಥಿಸಿದರು. ಅವರ ಪ್ರಾರ್ಥನೆಗೆ ಅನುಗುಣವಾಗಿ ಎಲ್ಲರಿಗಿಂತಲೂ (ಕ್ಷರರೆನಿಸಿದ ಬ್ರ
ದೇವತೆಗಳಿಗಿಂತ ಮತ್ತು ಅಕ್ಷರಳೆನಿಸಿದ ಲಕ್ಷ್ಮೀ ದೇವಿಗಿಂತ) ಶ್ರೇಷ್ಠನಾದ
'ಪುರುಷೋತ್ತಮ' ಎನಿಸಿದ ಭಗವಂತನು ತನ್ನ ಭಕ್ತರಲ್ಲಿ ಶ್ರೇಷ್ಠರಾದ, ಮಾಡಬ
ಕಾರ್ಯವನ್ನು ಶೀಘ್ರದಲ್ಲಿ ಮಾಡುವ, ಶ್ರೀವಾಯುದೇವರೊಂದಿಗೆ ಮಾತನಾಡಿದನು

'' ಅಯ್ಯ, ವಾಯುದೇವ! ನೀನು ಭೂಮಿಯಲ್ಲಿ ಇನ್ನೊಂದು ರೂಪ
ಅವತಾರವನ್ನು ಮಾಡಬೇಕು. ಲೋಕದಲ್ಲೀಗ ವ್ಯಾಪಕವಾಗಿ ಪ್ರಚಾರದಲ್ಲಿ

ದುರ್ಮತವನ್ನು ಒದ್ದೋಡಿಸು; ಆ ಮೂಲಕ ಸಜ್ಜನರ ಮನಸ್ಸನ್ನು ಸ್ವಚ್ಛಗೊಳಿಸು; ಸನ್ಮತವನ್ನು ಗ್ರಂಥಗಳ ಮೂಲಕ ಸಜ್ಜನ ಪ್ರಪಂಚಕ್ಕೆ ತಿಳಿಯಪಡಿಸು; ಅಂತಹ ಭಕ್ತಜನರು ನನ್ನನ್ನು ಯಥಾರ್ಥವಾಗಿ ಅರಿತು, ಉಪಾಸನೆಗೈದು ಸಾಧನೆಯ ದಾರಿಯಲ್ಲಿ ಮುನ್ನಡೆಯುವಂತೆ ಮಾಡು.''

ತದ್ ಧೃತ್ವಾಸ್ತು ತಥಾಸ್ಮಾಹ ಜಗತ್ಪ್ರಾಣೋ ಮಹಾಬಲಃ ॥೧೫॥

ಹೀಗೆ ಭಗವಂತ ವಾಯುದೇವರಿಗೆ ಆಜ್ಞೆ ಮಾಡಿದಾಗ ಅದನ್ನು ವಾಯುದೇವರು ಶಿರಸಾ ವಹಿಸಿದರು. ಜಗತ್ತಿಗೆ ಚೇಷ್ಟಕರಾದ, ಬಲಿಷ್ಠರಾದ ಶ್ರೀವಾಯುದೇವರು ಹಾಗೆಯೇ ಮಾಡುತ್ತೇನೆ ಎಂದು ಹೇಳಿದರು. (ದೇವತೆಗಳೂ ವಾಯುದೇವರಲ್ಲಿ ವಿಶೇಷವಾಗಿ ಪ್ರಾರ್ಥಿಸಿದಾಗ ಆ ಪ್ರಾರ್ಥನೆಯನ್ನು ಗೌರವಿಸುತ್ತಾ ದೇವತೆಗಳಿಗೆ ಮಾಡುತ್ತೇನೆ ಎಂದು ಅಭಯವನ್ನು ನೀಡಿದರು.)

ಹರೇರಾಜ್ಞಾನುಸಾರೇಣ ಭೂತಲೇ ರಜತಾಸನೇ ।
ತತ್ರಾಪಿ ಮಧ್ಯಗೇಹಾಖ್ಯಗೇಹೇ ವ್ಯಕ್ತೋ ಬಭೂವ ಸಃ ॥೧೬॥

ಭಗವಂತನಾದ ಶ್ರೀಹರಿಯ ಆಜ್ಞೆಗೆ ಅನುಸಾರವಾಗಿ ಶ್ರೀವಾಯುದೇವರು ಭೂಲೋಕದಲ್ಲಿ, ಉಡುಪಿ ಕ್ಷೇತ್ರದಲ್ಲಿ, ಅದರಲ್ಲಿಯೂ ಸಮೀಪದಲ್ಲಿರುವ ಪಾಜಕ ಕ್ಷೇತ್ರದಲ್ಲಿರುವ ಶ್ರೀಮಧ್ಯಗೇಹ ಭಟ್ಟರ (ಶ್ರೀನಡಿಲ್ಲಾಯರ) ಮನೆಯಲ್ಲಿ (ಹೆಂಡತಿಯಲ್ಲಿ) ಅಭಿವ್ಯಕ್ತವಾಗಿ ಲೋಕಕ್ಕೆ ಕಾಣಿಸಿ ಕೊಂಡರು. (ಅವತಾರ ಮಾಡಿದರು).

ತತ್ಪಿತಾ ತು ಸುತಂ ವೀಕ್ಷ್ಯ ಹರ್ಷೇಣ ಪರಿಪೂರಿತಃ।
ಚಕಾರ ವಾಸುದೇವಾಖ್ಯಾಂ ತಸ್ಯ ಸೂನೋರ್ದ್ವಿಜೈಃ ಸಹ ॥ ೧೭॥

ಆ ಮಧ್ಯಗೇಹ ಭಟ್ಟರು ತನಗೆ ಪುತ್ರ ಹುಟ್ಟಿದುದನ್ನು ದೇವದುಂಧುಭಿಯ ಧ್ವನಿಯಿಂದ ತಿಳಿದು ಕೊಂಡರು. ಆವಾಗಲೇ ಸಂತೋಷಭರಿತರಾಗಿದ್ದ ಅವರಿಗೆ ಮನೆಗೆ ಬಂದು ಮಗನನ್ನು ನೋಡಿದಾಗ ಉಂಟಾದ ಸಂತೋಷಕ್ಕೆ ಪಾರವೇ ಇರಲಿಲ್ಲ.

ಮುಂದೆ ಕಾಲ ಕಳೆದಂತೆ ಅನೇಕ ಬ್ರಾಹ್ಮಣರ ಸಮ್ಮುಖದಲ್ಲಿ ಮಧ್ಯಗೇಹ ಭಟ್ಟರು ಶಿಶುವಿಗೆ 'ವಾಸುದೇವ' ಎನ್ನುವ ಹೆಸರನ್ನಿಟ್ಟು ನಾಮಕರಣ ಸಂಸ್ಕಾರವನ್ನು ನೆರವೇರಿಸಿದರು.

ವಾಸುದೇವ ಎಂದರೆ ಭಗವಂತನೇ. ಭಗವಂತನ ಭಕ್ತನಿಗೂ 'ವಾಸುದೇವ' ಅಂತ ಹೆಸರಿದೆ. ಅಥವಾ 'ವ' ಎಂದರೆ 'ಜ್ಞಾನ 'ಎಂದರ್ಥ. 'ಅಸುದೇವ' ಎಂದರೆ 'ಪ್ರಾಣದೇವ' ಎಂದರ್ಥ. ಹೀಗಾಗಿ 'ವಾಸುದೇವ' ಎಂದರೆ 'ಜ್ಞಾನಕ್ಕಾಗಿ ಅವತರಿಸಿದ ಪ್ರಾಣದೇವ'

ಎಂದರ್ಥ. ಈ ರೀತಿಯಾಗಿ ವಾಸುದೇವನ ಭಕ್ತ ಎನ್ನುವ ದೃಷ್ಟಿಯಿಂದ ಮು
ಜ್ಞಾನಕ್ಕಾಗಿ ಅವತರಿಸಿದ ಪ್ರಾಣದೇವರ ರೂಪ ಎನ್ನುವ ದೃಷ್ಟಿಯಿಂದ ವಾಸುದೇವ ಎನ್ನು
ಹೆಸರು ಬಂದಿದೆ.

ಉದಯತಿ ಸತಿ ಭಾನೌ ಪ್ರಾಣಸಂಜ್ಞೇ ತು ಲೋಕೇ
ಭುವಿ ಸುಜನಮನೋ ವೈ ಭಾಸಿತಂ ಪದ್ಮವಚ್ಚ ।
ಮುದಮಪಿ ಹೃದಿ ದೇವಾ ಲೇಭಿರೇ ದೇವದೇವೇ
ವಿವಿಧಕುಸುಮವೃಷ್ಟಿಂ ಭಕ್ತಿಪೂರ್ವಂ ಚ ಕೃತ್ವಾ ॥೧೮॥

ಭೂಲೋಕದಲ್ಲಿ ವಾಯುದೇವರೆನ್ನುವ ಸೂರ್ಯ ವಾಸುದೇವರೂಪದಿಂ ಉದಿಸಿದ್ದಾನೆ. ಸೂರ್ಯ ಉದಿಸಿದಾಗ ಪದ್ಮಗಳು ಅರಳುವಂತೆ ಈ ವಾಸುದೇವ ಎನ್ನು ಸೂರ್ಯನ ಉದಯವಾದಾಗ ಸಜ್ಜನರ ಮನಸ್ಸೆನ್ನುವ ಪದ್ಮವೂ ಅರಳಿತು. (ವಾಯುದೇವ ವಾಸುದೇವನಾಗಿ ಅವತಾರ ಮಾಡಿದಾಗ ಸಜ್ಜನರು ಸಂತೋಷಗೊಂಡರು ರುದ್ರಾದಿದೇವತೆಗಳಿಗಿಂತ ಶ್ರೇಷ್ಠರಾದ್ದರಿಂದ 'ದೇವದೇವ' ಎನಿಸಿದ ವಾಯುದೇವ ಅವತಾರದಿಂದ ದೇವತೆಗಳೂ ಸಂತೋಷಗೊಂಡು ಭಕ್ತಿಪೂರ್ವಕವಾಗಿ ಪುಷ್ಪವೃಷ್ಟಿಗೈದ

ಇತಿ ಶ್ರೀಮತ್‌ಕವಿಕುಲತಿಲಕ ಶ್ರೀಮತ್ ಪುರುಷೋತ್ತಮ ತೀರ್ಥ ಕರಕಮಲಸಂಜ
ಶ್ರೀಸತ್ಯತೀರ್ಥ ಭಿಕ್ಷುಣಾ ವಿರಚಿತೇ ಮಧ್ವವಿಲಾಸೇ ಪ್ರಥಮ ವಿಲಾಸಃ.

ಅಥ ದ್ವಿತೀಯೋ ವಿಲಾಸಃ

ಅಥ ಲೋಕಾನುಸಾರೇಣ ಕುರ್ವನ್ ಚೇಷ್ಟಾಂ ಚ ಬಾಲವತ್।
ಕ್ರಮೇಣ ವವೃಧೇ ಲೋಕಲೋಚನೈರೀಕ್ಷಿತೋ ಮುದಾ ॥೧॥

ದೇವತೆಗಳು ಭೂಲೋಕದಲ್ಲಿ ಅವತಾರ ಮಾಡಿದಾಗ ಸಾಮಾನ್ಯ ಮನುಷ್ಯರಂತೆ ನಡೆದುಕೊಳ್ಳಬೇಕೆಂದು ಶಾಸ್ತ್ರ ವಿಧಿಸಿದೆ. ಅದರಂತೆ ಶ್ರೀವಾಯುದೇವರ ಅವತಾರಿಯಾದ ವಾಸುದೇವನೂ ಸಾಮಾನ್ಯ ಬಾಲಕನಂತೆ ಅನೇಕ ರೀತಿಯ ಆಟಗಳನ್ನು ಆಡುತ್ತಿದ್ದನು. ಆ ಶಿಶುವನ್ನು ಜನರು ಬಹಳ ಸಂತೋಷದಿಂದ ನೋಡುತ್ತಾ ಆನಂದಿಸುತ್ತಿದ್ದರು. ಹೀಗೆ ಜನರ ಕಣ್ಣುಗಳಿಗೆ ಹಬ್ಬವನ್ನುಂಟುಮಾಡುತ್ತಾ ಆ ವಾಸುದೇವನು ಕ್ರಮೇಣ ಬೆಳೆದು ದೊಡ್ಡವನಾದನು.

(ವಾಸುದೇವ ಚಿಕ್ಕ ವಯಸ್ಸಿನಲ್ಲಿರುವಾಗಲೇ ಅಸಂಭಾವಿತವೇ ಎನ್ನುವಷ್ಟು ರೀತಿಯಲ್ಲಿರುವ ಹಲವು ಪ್ರವೃತ್ತಿಗಳನ್ನು ತೋರಿಸಿದನು. ಅವುಗಳಲ್ಲಿ ತೊದಲು ನುಡಿಗಳನ್ನು ನುಡಿಯುವುದು, ಅಂಬೆಗಾಲಿಕ್ಕುವುದು, ತಾನಾಗಿಯೇ ಎದ್ದು ನಿಲ್ಲುವುದು, ಮುಂದೆ ಸ್ವಲ್ಪ ದೊಡ್ಡವನಾದಾಗ ಅಕ್ಷರಾಭ್ಯಾಸವನ್ನು ನಡೆಸಿದ್ದು - ಇವುಗಳು ಸಾಮಾನ್ಯ ಮಕ್ಕಳೂ ಸಹ ನಡೆಸುವ ಪ್ರವೃತ್ತಿಗಳು. ಆದರೆ ಅಂತಹ ಪ್ರವೃತ್ತಿಗಳಲ್ಲಿ ತಾವು ವಾಯುದೇವರೆನ್ನುವ ಅಂಶವೂ ತೋರಿ ಬರುತ್ತಿತ್ತು. ಅಂತಹ ಪ್ರವೃತ್ತಿಗಳನ್ನು ವಾಸುದೇವನೂ ಸಹ ನಡೆಸಿದ್ದನು ಎಂದು "ಸುಮಧ್ವ ವಿಜಯ"ದಲ್ಲಿ ಉಲ್ಲೇಖಿಸಲಾಗಿದೆ.)

ತತಸ್ತು ತದ್ಗುಣಂ ವೀಕ್ಷ್ಯ ಸಂಸ್ಕಾರಂ ಕೃತವಾನ್ ವಿಭೋಃ।
ಶಿಕ್ಷಾಂ ಚಕಾರ ಸರ್ವಜ್ಞೋ ಜನಕೋ ಬಂಧುಭಿಃ ಸಹ ॥೨॥

ಕ್ರಮೇಣ ವಾಸುದೇವ ಬೆಳೆದಂತೆ ಅನೇಕ ಲೀಲೆಗಳಿಂದ ತಂದೆ-ತಾಯಿಯರಿಗೆ, ಬಂಧುಗಳಿಗೆ, ನೆರೆಹೊರೆಯವರಿಗೆ, ಅಷ್ಟೇ ಅಲ್ಲ; ದೇವತೆಗಳಿಗೂ ಸಹ ಆಶ್ಚರ್ಯ, ಆನಂದಗಳನ್ನು ಉಂಟು ಮಾಡುತ್ತಿದ್ದನು. ಎಂಟನೆಯ ವಯಸ್ಸಿನಲ್ಲಿ ವಾಸುದೇವನಿಗೆ ಮಧ್ಯಗೇಹ ಭಟ್ಟರು ಯೋಗ್ಯ ಮುಹೂರ್ತದಲ್ಲಿ ಉಪನಯನ ಸಂಸ್ಕಾರವನ್ನು ನೆರವೇರಿಸಿದರು. ಆ ಮಹೋತ್ಸವದಲ್ಲಿ ಅನೇಕ ಬಂಧುಗಳೂ ಪಾಲ್ಗೊಂಡಿದ್ದರು. ಮೂಲತಃ ವಾಸುದೇವ ಸರ್ವಜ್ಞನೇ ಆಗಿರುವವನು. ಆದರೆ ಇದರ ಬಗ್ಗೆ ತಿಳಿಯದ ಮಧ್ಯಗೇಹ ಭಟ್ಟರು ಯೋಗ್ಯ ಗುರುಗಳಿಂದ ಶಿಕ್ಷಣವನ್ನು ಕೊಡಿಸಿದರು.

ಅಧೀತ್ಯ ವೇದಾನ್ ಸರ್ವಾನ್ ಚ ಗುರವೇ ದಕ್ಷಿಣಾಂ ಚ ಸಃ ।
ದತ್ವಾಽಗಾತ್ ಭಕ್ತಿಮುಚಿತಾಂ ಮುದಾ ಜನಕಸನ್ನಿಧಿಮ್ ॥೩॥

ಉಪನೀತನಾದ ವಾಸುದೇವನು ಗುರುಗಳಾದ 'ತೋಟಂತಿಲ್ಲಾಯ' ಎನ್ನುವವರಿಂ ಸಕಲ ವೇದಗಳನ್ನು ಅಧ್ಯಯನ ಮಾಡಿದನು. ಸಕಲ ವೇದಜ್ಞನಾದ ವಾಸುದೇವ ವೇದಾಧ್ಯಯ ನಡೆಸಿದ್ದು ಲೋಕವಿಡಂಬನೆಗಾಗಿಯೇ ಎಂದು ತಿಳಿದುಕೊಳ್ಳಬೇಕು. ಗುರುಕುಲವಾಸ ಕೊನೆಯ ಹಂತದಲ್ಲಿ ಗುರುಗಳಿಗೆ ಗುರುದಕ್ಷಿಣೆಯನ್ನು ನೀಡಬೇಕಷ್ಟೆ. ಅದರಂ ವಾಸುದೇವನು ತನಗೆ ಪಾಠ ಹೇಳಿದ ಗುರುಗಳಿಗೆ ಏಕಾಂತದಲ್ಲಿ ಐತರೇಯ ಉಪನಿಷತ್ತ ಪಾಠ ಮಾಡಿ ಅದರ ಅರ್ಥವನ್ನು ತಿಳಿಸಿ ಕೊಟ್ಟನು. ಆ ಮೂಲಕ ಗುರುಗಳಿಗೆ ಯೋಗ್ಯತೆ ಅನುಗುಣವಾಗಿ ಭಕ್ತಿ ಉಂಟಾಗುವಂತೆ ಮಾಡಿ ದೊಡ್ಡ ಅನುಗ್ರಹವನ್ನೇ ವಾಸುದೇ ಮಾಡಿಬಿಟ್ಟನು.* ಹೀಗೆ ಗುರುಕುಲವಾಸವನ್ನು ಸಂತೋಷದಿಂದ ಮುಗಿಸಿ ವಾಸುದೇವ ತಂದೆಯ ಬಳಿಗೆ ಬಂದನು.

ಆಗತಂ ಸುತಮಾಲೋಕ್ಯ ಸಸ್ವಜೇ ಪ್ರಣಯಾನ್ವಿತ:।
ಏವಂ ಸುಖೇನ ಕಾಲೇ ತು ಗತೇ ಕಾರ್ಯಮಚಿಂತಯತ್ ।।೪।।

ಅಧ್ಯಯನ ಮುಗಿಸಿ ಮನೆಗೆ ಬಂದ ವಾಸುದೇವನನ್ನು ನೋಡಿ ತಂದೆಯಾ ಮಧ್ಯಗೇಹಭಟ್ಟರು ಸಂತೋಷದಿಂದ ಅವನನ್ನು ಆಲಿಂಗಿಸಿಕೊಂಡರು. ನಂತ ವಾಸುದೇವನೊಂದಿಗೆ ಸುಖವಾಗಿ ಕಾಲವನ್ನು ತಂದೆತಾಯಿಯಂದಿರು ಕಳೆಯಹತ್ತಿದರು. ಹೀ ಕಾಲ ಕಳೆಯುತ್ತಿರಲು ಒಮ್ಮೆ ವಾಸುದೇವನು ತಾನು ಮಾಡಬೇಕಾದ ಕಾರ್ಯದ ಬ ಯೋಚಿಸಿದನು.

ಅಸತ್ತು ದಂಡಧಾರಕೋ ಹರಿಸ್ವಸಾ ಕರಿಷ್ಯತಿ ।
ಭವಾಮಿ ನೇತ್ಯತೋ ಯತೋ ಹರೌ ವಿಶೇಷತಶ್ಚ ಸಃ ।।೫।।
ಸಮಸ್ತಕರ್ಮಣಾಂ ದಧೌ ಸಮರ್ಪಣಾಯ ವೈ ಮನಃ ।
ವಿಚಾರಯಂಶ್ಚ ಭೂತಲೇ ಚಚಾರ ಸದ್ಗುರುಂ ಮುದಾ ।।೬।।

ಈಗ ಲೋಕದಲ್ಲಿ ವ್ಯಾಪಕವಾಗಿ ಹರಡುತ್ತಿರುವ ದುರ್ಮತಗಳನ್ನು ಪ್ರಚಾ ಮಾಡುತ್ತಿರುವ ದುಷ್ಟರನ್ನು ದುರ್ಗಾದೇವಿ ಸದ್ಯದಲ್ಲಿಯೇ ಪಯಸ್ವಿನೀ ನದಿಯ ತೀರದಲ್ಲಿ ಅವತರಿಸಿ ಸಂಹರಿಸಲಿದ್ದಾಳೆ. ಆದ್ದರಿಂದ ನಾನೂ ಸಹ ಅದೇ ಕೆಲಸವನ್ನು ಮೊದಲ ಮುಗಿಸುವುದು ಸರಿಯಲ್ಲ. ಹೀಗಾಗಿ ಶ್ರೀಹರಿಯಲ್ಲಿ ಸರ್ವಕರ್ಮಗಳನ್ನು ಸಮರ್ಪಿಸು ಯತ್ಯಾಶ್ರಮವನ್ನು ನಾನು ಸ್ವೀಕರಿಸುತ್ತೇನೆ. ಸಂನ್ಯಾಸಿಯಾಗಿ ಸಂಚರಿಸುತ್ತಾ, ವಾದಿಗಳನ್ ನಿಗ್ರಹಿಸುತ್ತಾ, ಗ್ರಂಥಗಳ ರಚನೆಯ ಜೊತೆಯಲ್ಲಿ ಯೋಗ್ಯ ಸಜ್ಜನರಿಗೆ ತತ್ವವನ್

*ಅದೇ ರೀತಿಯಾಗಿ ತನ್ನ ಸ್ನೇಹಿತನಾಗಿರುವ ಗುರುಗಳ ಮಗನಿಗೆ ಹುಟ್ಟಿನಿಂದಲೇ ಇದ್ದಿ ಅಸಾಧ್ಯವಾದ ಶಿರೋವೇದನೆಯನ್ನು (ತಲೆ ನೋವನ್ನು) ಏಕಾಂತದಲ್ಲಿ ವಾಸುದೇವನು ಅವ ಕಿವಿಯಲ್ಲಿ ಗಾಳಿಯನ್ನು ಊದುವ ಮೂಲಕ ಇಲ್ಲದಂತೆ ಮಾಡಿದನು.

ಬೋಧಿಸುತ್ತೇನೆ - ಈ ರೀತಿಯಾಗಿ ಆಲೋಚಿಸಿ ವಾಸುದೇವ ಸಂನ್ಯಾಸಾಶ್ರಮವನ್ನು ನೀಡಲು ಯೋಗ್ಯರಾದ ಗುರುಗಳು ಯಾರಿರಬಹುದು? ಎಂದು ಹುಡುಕಲು ಆರಂಭಿಸಿದನು. (ಈ ಹುಡುಕಾಟವೂ ಲೋಕರೀತಿಯಿಂದ ಎಂದು ತಿಳಿದುಕೊಳ್ಳಬೇಕು.)

ಯಃ ಪುರಾ ದ್ರೌಪದೀಹಸ್ತಸ್ಪೃಷ್ಟಮನ್ನಮದನ್ ಕಿಲ।
ಆಸೀದ್ ಭೂಮೌ ಸ ಚೈವಾಭೂದ್ ಅಚ್ಯುತಪ್ರೇಕ್ಷಸಂಜ್ಞಿತಃ ।।೭।।
ತದಾಕರ್ಣ್ಯ ಮುನಿಶ್ರೇಷ್ಠಂ ಭಕ್ತಿವೈರಾಗ್ಯ ಸಂಪದಮ್।
ಸಮಾಸಾದ್ಯ ನನಾಮಾಸೌ ವಾಸುದೇವೋ ಜಗದ್ಗುರುಃ ।।೮।।

ಹಿಂದೆ ಪಾಂಡವರು ವನವಾಸದಲ್ಲಿ ಕಾಲಕಳೆಯುತ್ತಿದ್ದಾಗ ಯುಧಿಷ್ಠಿರನ ಪ್ರಾರ್ಥನೆಗೆ ಅನುಗುಣವಾಗಿ ಸೂರ್ಯನಾರಾಯಣ ಅಕ್ಷಯ ಪಾತ್ರವನ್ನು ಕರುಣಿಸಿದ್ದನು. ಅದರಲ್ಲಿ ಸೃಷ್ಟಿಯಾದ ಅನ್ನವನ್ನು ಮುಟ್ಟಿ ದ್ರೌಪದೀದೇವಿ ಪವಿತ್ರವನ್ನಾಗಿ ಮಾಡುತ್ತಿದ್ದಳು. ಅಂತಹ ಅನ್ನವನ್ನು ಯುಧಿಷ್ಠಿರನ ಬಳಿ ವಾಸ ಮಾಡುತ್ತಿದ್ದ ಅನೇಕ ಮಹಾತ್ಮರು ಸ್ವೀಕರಿಸುತ್ತಿದ್ದರು. ಅವರಲ್ಲಿ ಒಬ್ಬ ಮಹಾತ್ಮರು ವಾಯುದೇವರು ವಾಸುದೇವನಾಗಿ ಹುಟ್ಟಿದ ಸಮಯದಲ್ಲಿ ಅಚ್ಯುತಪ್ರೇಕ್ಷ ಎನ್ನುವ ಹೆಸರಿನ ಯತಿಗಳಾಗಿ ಹುಟ್ಟಿದರು. ಆ ಅಚ್ಯುತಪ್ರೇಕ್ಷತೀರ್ಥರಾದರೂ ಶ್ರೇಷ್ಠ ಸಂನ್ಯಾಸಜೀವನವನ್ನು ಸಾಗಿಸುತ್ತಾ ಭಕ್ತಿವೈರಾಗ್ಯಾದಿ ಗುಣಗಳಿಂದ ಸಂಪನ್ನರಾಗಿದ್ದರು. ದುರ್ಮತಗಳ ಪ್ರಭಾವದಿಂದಾಗಿ ಅವುಗಳನ್ನು ಅಧ್ಯಯನ ಮಾಡಿ ಬಹಳ ಪಾಂಡಿತ್ಯ ಪಡೆದಿದ್ದರೂ, ಮನಸ್ಸು ಮಾತ್ರ ಪೂರ್ಣವಾಗಿ ಅದನ್ನು ಸ್ವೀಕರಿಸಲಿಲ್ಲ. ಗುರುಗಳು ಕೊನೆಯ ಕಾಲದಲ್ಲಿ ಹೇಳಿದ ಉಪದೇಶದಿಂದಾಗಿ ಯಥಾರ್ಥವಾದ ತತ್ವಜ್ಞಾನವನ್ನು ಪಡೆಯುವ ಹಂಬಲದಿಂದ ಉಡುಪಿಯ ಶ್ರೀಅನಂತಾಸನದೇವರನ್ನು ವಿಶೇಷವಾಗಿ ಸೇವಿಸುತ್ತಾ ಉಡುಪಿಯಲ್ಲಿ ಕಾಲವನ್ನು ಕಳೆಯುತ್ತಿದ್ದರು.

ಇಂತಹ ಅಚ್ಯುತಪ್ರೇಕ್ಷತೀರ್ಥರ ಬಗ್ಗೆ ಕೇಳಿ ತಿಳಿದ ವಾಸುದೇವ ಇವರೇ ತನ್ನ ಯೋಗ್ಯ ಗುರುಗಳು ಎಂದು ನಿಶ್ಚಯಿಸಿದನು. ಅವರ ಬಳಿಗೆ ಬಂದು ವಾಸುದೇವನು ನಮಸ್ಕಾರವನ್ನು ಮಾಡಿದನು. ಜಗದ್ಗುರುವೆನಿಸಿದ ವಾಸುದೇವ ಲಕ್ಷ್ಮೀ- ನಾರಾಯಣರಿಬ್ಬರನ್ನು ಬಿಟ್ಟು ಯಾರಿಗೂ ನಮಸ್ಕರಿಸಬೇಕಾಗಿಲ್ಲ. ಆದರೂ ವಿಡಂಬನೆಯ ದೃಷ್ಟಿಯಿಂದ, ದೇವತಾಶಿಕ್ಷಣದ ಹಿನ್ನೆಲೆಯಲ್ಲಿ, ದೈತ್ಯಮೋಹನದ ಉದ್ದೇಶದಿಂದ ಗುರುಗಳಿಗೆ ವಾಸುದೇವನು ನಮಸ್ಕರಿಸಿದನು ಎಂದು ತಿಳಿದುಕೊಳ್ಳಬೇಕು.

ಆಗತಂ ತಂ ವಟುಂ ದೃಷ್ಟ್ವಾ ಗುಣಮಂಡಲಮಂಡಿತಮ್।
ವಿದಿತ್ವಾ ತನ್ಮತಂ ಚಾಸೌ ಕೃತ್ವಾ ಸಂನ್ಯಾಸಿನಂ ಮುದಾ ।।೯।।

ಉಪದಿಶ್ಯ ಪರಂ ಬ್ರಹ್ಮ ಚಕ್ರೇ ದ್ವಿಜಗಣೈ: ಸಹ।
ಅನ್ವರ್ಥಂ ತಸ್ಯ ವೈ ನಾಮ ಪೂರ್ಣಪ್ರಜ್ಞೇತಿ ಸದ್ಗುರು: ॥೧೦॥

ಶ್ರೀಅಚ್ಯುತಪ್ರೇಕ್ಷಾಚಾರ್ಯರು ತಮ್ಮ ಬಳಿಗೆ ಬಂದು ನಮಸ್ಕರಿ[ಸಿ]ದ ವಾಸುದೇವನನ್ನು ನೋಡಿದರು. ನೋಡಿದಾಗಲೇ ಆ ವಟುವಿನಲ್ಲಿ ಭಗವದ್ಭಕ್ತಿ ಮೊದಲಾದ ಗುಣಗಳಿವೆ ಎಂದು ಶ್ರೀಅಚ್ಯುತಪ್ರೇಕ್ಷತೀರ್ಥರಿಗೆ ತಿಳಿದು ಬಿಟ್ಟಿತು. ಆದ್ದರಿಂದಲೇ ಅವ[ರಿಗೆ] ಆ ವಟುವಿನ ಮೇಲೆ ವಿಶೇಷವಾದ ಮಮತೆ ಬೆಳೆಯಿತು. ವಾಸುದೇವನಿಗೂ ಅವರ ಮೇ[ಲೆ] ವಿಶೇಷವಾದ ಗೌರವ ಭಾವನೆ ಬೆಳೆದು, ಯಾವಾಗಲೂ ಅವರ ಅನುಚರನಾಗಿದ್ದುಕೊಂ[ಡು] ಕಾಲವನ್ನು ಕಳೆಯ ಲಾರಂಭಿಸಿದನು.

ದಿನ ಕಳೆದಂತೆ ವಾಸುದೇವ ಗುರುಗಳಲ್ಲಿ ತನಗೆ ಸಂನ್ಯಾಸದೀಕ್ಷೆಯನ್ನಿ[ತ್ತು] ಅನುಗ್ರಹಿಸಬೇಕೆಂದು ಪ್ರಾರ್ಥಿಸಿದನು. ಅದಕ್ಕೆ ಆ ಅಚ್ಯುತಪ್ರೇಕ್ಷತೀರ್ಥರು ತ[ಮ್ಮ] ಸಮ್ಮತಿಯನ್ನು ನೀಡಿ, ವಾಸುದೇವನಿಗೆ ಸಂತೋಷದಿಂದ ಸಂನ್ಯಾಸದೀಕ್ಷೆಯನ್ನಿ[ತ್ತು] ಪ್ರಣವಾದಿಮಂತ್ರಗಳನ್ನು ಉಪದೇಶಿಸಿದರು. ಸಂನ್ಯಾಸಾಶ್ರಮವನ್ನು ಸ್ವೀಕರಿಸಿ[ದ] ವಾಸುದೇವನಿಗೆ ಗುರುಗಳು ಆಶ್ರಮನಾಮವಾಗಿ ''ಪೂರ್ಣಪ್ರಜ್ಞ'' ಎಂ[ದು] ಅಭಿಧಾನವನ್ನಿತ್ತರು. ಆ ಹೆಸರು ವಾಸುದೇವನ ಪಾಲಿಗೆ ಪೂರ್ಣಪ್ರಮಾಣದ[ಲ್ಲಿ] ಅನ್ವರ್ಥಕವಾಯಿತು. ವಾಸುದೇವನ ಸಂನ್ಯಾಸದೀಕ್ಷಾಮಹೋತ್ಸವದಲ್ಲಿ ಅನೇಕ ಬ್ರಾಹ್ಮಣ[ರು] ಉಪಸ್ಥಿತರಿದ್ದು ಬಹಳ ಆನಂದವನ್ನು ಹೊಂದಿದರು.

ಅಥ ತತ್ರ ಸುಖೇನೈವ ಧ್ಯಾಯನ್ ಹೃದಿ ಹರಿಂ ಸದಾ।
ಉವಾಸ ಶಾಸ್ತ್ರಂ ಭಾಷ್ಯಾದಿ ಪಠನ್ ಗುರುಮುಖೇನ ಸ: ॥೧೧॥

ಸಂನ್ಯಾಸಾಶ್ರಮವನ್ನು ಸ್ವೀಕರಿಸಿದ ಬಳಿಕ ಶ್ರೀಪೂರ್ಣಪ್ರಜ್ಞರು ಯಾವಾಗಲ[ೂ] ಶ್ರೀಹರಿಯ ಧ್ಯಾನದಲ್ಲಿಯೇ ತತ್ಪರರಾಗಿದ್ದು ಉಡುಪಿಯಲ್ಲಿ ಗುರುಗಳ ಮುಖದಿಂದ ಭಾ[ಷ್ಯ] ಮೊದಲಾದ ಶಾಸ್ತ್ರ ಗ್ರಂಥಗಳನ್ನು ಅಭ್ಯಾಸ ಮಾಡುತ್ತಾ ಸುಖವಾಗಿ ಇದ್ದರು.

(ಶ್ರೀಪೂರ್ಣಪ್ರಜ್ಞರು ವಿಶೇಷವಾಗಿ ಗುರುಗಳ ಮುಖದಿಂದ ಅದ್ವೈತ ಮತದ ಮು[ಖ್ಯ] ಪ್ರಕರಣ ಗ್ರಂಥವಾದ 'ವಿಮುಕ್ತಾತ್ಮ' ಎನ್ನುವ ಮಾಯಾವಾದದ ಯತಿ ಬರೆದ 'ಇಷ್ಟಸಿದ್ಧಿ' ಎನ್ನುವ ಗ್ರಂಥವನ್ನು ಕೇಳಿದರು ಎಂದು '' ಸುಮಧ್ವವಿಜಯ''ದಲ್ಲಿ ಉಲ್ಲೇಖಿಸಲಾಗಿದೆ.)

ಕದಾಚಿತ್ ಪಾಠಕಾಲೇತು ಬಹ್ವೀಂ ಕೋಟೀಂ ಕೃತಾಂ ಚ ಸಃ।
ತಾಂ ಹರ್ತುಂ ನೈವ ಶಕ್ತೋಽಭೂತ್ ಜನಾ ಆಸನ್ ಸುವಿಸ್ಮಿತಾಃ ॥೧೨॥

ಒಮ್ಮೆ ಗುರುಗಳಾದ ಶ್ರೀಅಚ್ಯುತಪ್ರೇಕ್ಷತೀರ್ಥರು ತಮ್ಮ ಶಿಷ್ಯರಿಗೆ ಗ್ರಂಥವನ್ನು ಪಾಠ ಮಾಡುತ್ತಿರುವಾಗ ಶ್ರೀಪೂರ್ಣಪ್ರಜ್ಞರು ಒಂದು ವಿಷಯದ ಮೇಲೆ ಅನೇಕ ರೀತಿಯಾಗಿ ವಿಕಲ್ಪಗಳನ್ನು ಮಾಡಿ ಗುರುಗಳ ಮುಂದಿರಿಸಿದರು. ಆ ವಿಕಲ್ಪಗಳಿಗೆ ಯೋಗ್ಯವಾದ ಉತ್ತರವನ್ನು ನೀಡಿ ಅವುಗಳನ್ನು ಪರಿಹರಿಸಲು ಗುರುಗಳಿಗೆ ಸಾಧ್ಯವಾಗಲಿಲ್ಲ. ಇದನ್ನು ಗಮನಿಸಿದ ಜನರು ಮಾಯಾಶಾಸ್ತ್ರಗಳಲ್ಲಿ ಬಹಳ ಪಳಗಿದ ಗುರುಗಳಿಗೂ ಉತ್ತರ ನೀಡಲು ಆಗಲಿಲ್ಲ ಎಂದ ಮೇಲೆ ಈ ಶಿಷ್ಯರ ಶಾಸ್ತ್ರಪಾಂಡಿತ್ಯ ಎಷ್ಟಿರಬಹುದೆಂದು ಬಹಳ ಆಶ್ಚರ್ಯ ಚಕಿತರಾದರು.

ತದಾ ಪ್ರಭೃತಿ ಸರ್ವಜ್ಞಂ ಮೇನಿರೇ ವೈ ಬುಧಾ ಯತಿಮ್।
ಏವಂ ಕ್ರಮೇಣ ದೋಷಾಂಶ್ಚ ತನ್ಮತೇ ಪ್ರತ್ಯಪಾದಯತ್ ॥೧೩॥

ಈ ಒಂದು ಘಟನೆಯ ನಂತರ ಜನರು ಶ್ರೀಪೂರ್ಣಪ್ರಜ್ಞರನ್ನು ಸರ್ವಜ್ಞರೆಂದು ತಿಳಿದು ಅವರ ವಿಷಯದಲ್ಲಿ ವಿಶೇಷವಾದ ಗೌರವ ಭಾವನೆಯನ್ನು ತಾಳಿದರು. ಮುಂದೆ ಪಾಠ ನಡೆಯುವ ಸಂದರ್ಭದಲ್ಲಿ, ವಾಕ್ಯಾರ್ಥವಿಚಾರ ನಡೆಯುವ ಸಂದರ್ಭದಲ್ಲಿ ಮಾಯಾಮತದಲ್ಲಿರುವ ದೋಷಗಳನ್ನು ಶ್ರೀಪೂರ್ಣಪ್ರಜ್ಞರು ಎತ್ತಿ ತೋರಿಸುತ್ತಿದ್ದರು.

(ಗುರುಗಳ ಮೂಲಕ 'ಇಷ್ಟಸಿದ್ಧಿಗ್ರಂಥ'ದ ಪಾಠ ನಡೆಯುತ್ತಿರುವಾಗಲೇ ಆ ಗ್ರಂಥದ
ಮಂಗಳಾಚರಣ ಶ್ಲೋಕದಲ್ಲಿ 32 ದೋಷಗಳಿವೆ ಎಂದು ಶ್ರೀಪೂರ್ಣಪ್ರಜ್ಞರು ಎತ್ತಿ
ತೋರಿಸಿದ್ದರು. ಮುಂದೆ ಶ್ರೀಅಚ್ಯುತಪ್ರೇಕ್ಷತೀರ್ಥರ ಮಿತ್ರಯತಿಗಳ ಶಿಷ್ಯರೊಂದಿಗೆ ವಾದ
ನಡೆದಾಗಲೂ ಆ ಶಿಷ್ಯರನ್ನು ಶ್ರೀಪೂರ್ಣಪ್ರಜ್ಞರು ಸೋಲಿಸಿದರು. ಕೇವಲ
ಅನುಮಾನವೊಂದರಿಂದಲೇ ವಿಷಯ ಸಾಧನೆ ಸುಕರ ಎನ್ನುವ ವಿಷಯದಲ್ಲಿ
ಶ್ರೀಪೂರ್ಣಪ್ರಜ್ಞರು ಅನೇಕ ದೋಷಗಳನ್ನು ತೋರಿಸುತ್ತಾ, ಆ ಶಿಷ್ಯರನ್ನು ಗೆದ್ದು ಜನರಿಂದ
'ಶ್ರೀಅನುಮಾನತೀರ್ಥ' ಎನ್ನುವ ಹೆಸರಿಗೆ ಭಾಜನರಾದರು. 'ವಾದಿಸಿಂಹ' ಎನ್ನುವ ಬೌದ್ಧ
ವಿದ್ವಾಂಸನೊಂದಿಗೆ ನಡೆದ ವಿವಾದದಲ್ಲಿ ಮಿತವಾದ ಶಬ್ದಗಳುಳ್ಳ ಮಾತಿನಿಂದ ಅವನಿಗೆ
ಶ್ರೀಪೂರ್ಣಪ್ರಜ್ಞರು ಸೋಲನ್ನುಣಿಸಿದರು. ಆ ವಾದಿಸಿಂಹ ಮಾಡಿದ 18 ವಿಕಲ್ಪಗಳಿಗೂ
ಸರಿಯಾದ ಉತ್ತರವನ್ನು ನೀಡಿದ ಶ್ರೀಪೂರ್ಣಪ್ರಜ್ಞರು ಅಲ್ಲಿ ನೆರೆದಿದ್ದ ಜನರನ್ನು
ಆಶ್ಚರ್ಯಚಕಿತಗೊಳಿಸಿದರು. ಆ ವಾದಿಸಿಂಹ ವಿದ್ವಾಂಸನ ಗುರುವಾಗಿದ್ದ 'ಬುದ್ಧಿಸಾಗರ'
ಎನ್ನುವ ವಿದ್ವಾಂಸನನ್ನು ಶ್ರೀಪೂರ್ಣಪ್ರಜ್ಞರು ಅನಾಯಾಸವಾಗಿ ಗೆದ್ದು ಬಿಟ್ಟರು.
ತರ್ಕಶಾಸ್ತ್ರದಲ್ಲಿ ಅಗಾಧ ಪಾಂಡಿತ್ಯ ಸಂಪಾದಿಸಿದ ಜನರನ್ನು ಕುರಿತು ಶಾಂಕರಭಾಷ್ಯವನ್ನು
ಶ್ರೀಪೂರ್ಣಪ್ರಜ್ಞರು ಪಾಠ ಮಾಡುತ್ತಾ, ಅದಕ್ಕೂ ಬ್ರಹ್ಮಸೂತ್ರಗಳಿಗೂ ಇರುವ
ವಿಷಯಭೇದವನ್ನು ಸ್ಪಷ್ಟವಾಗಿ ತಿಳಿಯಪಡಿಸುತ್ತಾ ಆ ಮಾಯವಾದದಲ್ಲಿರುವ ಪ್ರಬಲ
ದೋಷಗಳನ್ನು ಜನರ ಮುಂದೆ ಇಡುತ್ತಿದ್ದರು.)

ಅಥ ವಿದ್ಯಾಪತಿಂ ಚಕ್ರೇ ಪೂರ್ಣಪ್ರಜ್ಞಂ ದದೌ ಗುರುಃ।
ಅನುರೂಪಂ ತು ತಸ್ಯೈವ ಸುಖತೀರ್ಥೇತಿ ನಾಮ ಚ ॥೧೪॥

ರಾಜನಿಗೆ ರಾಜ್ಯವಿರುವಂತೆ ಸಂನ್ಯಾಸಿಗಳಿಗೆ ವೇದಾಂತವಿದ್ಯೆ ಅಥವಾ ಬ್ರಹ್ಮಮೀಮಾಂಸಾ ಶಾಸ್ತ್ರವೆನ್ನುವ ರಾಜ್ಯವಿದೆ. ಅದನ್ನು ಅವರು ಪಾಲಿಸಬೇಕು. ಅದರ ಪಾಲನೆ ಎಂದರೆ ಅದನ್ನು ವ್ಯಾಖ್ಯಾನಿಸುತ್ತಾ ಶಿಷ್ಯ ಮೊದಲಾದವರನ್ನು ಆ ಮಾರ್ಗದಲ್ಲಿ ಮುಂದುವರಿಯುವಂತೆ ಮಾಡುವುದು ಎಂದರ್ಥ. ಅದರ ಜೊತೆಯಲ್ಲಿ ಅದಕ್ಕೆ ವಿರುದ್ಧವಾಗಿ ವಾದಿಸುವವರ ನಿರಾಕರಣೆಯನ್ನು ಮಾಡುವುದೂ ಪಾಲನೆಯಲ್ಲಿ ಸೇರಿದೆ. ಇಂತಹ ಸ್ವಪಕ್ಷಸ್ಥಾಪನದ ಮೂಲಕ ಸತ್ಸಂಪ್ರದಾಯದ ಮುಂದುವರಿಯುವಿಕೆ ಹಾಗೂ ಪರಮತ ನಿರಾಕರಣ ರೂಪವಾದ ವೇದಾಂತವಿದ್ಯೆಯ ಪಾಲನೆಯಲ್ಲಿ ಶ್ರೀಪೂರ್ಣಪ್ರಜ್ಞರು ಸರ್ವಜ್ಞರಾದುದರಿಂದ ಅತ್ಯಂತ ಸಮರ್ಥರು ಎಂದು ಗುರುಗಳಾದ ಶ್ರೀಅಚ್ಯುತಪ್ರೇಕ್ಷತೀರ್ಥರು ತೀರ್ಮಾನಿಸಿದರು.

ಒಳ್ಳೆಯ ಮುಹೂರ್ತದಲ್ಲಿ ಗುರುಗಳು ತಮ್ಮ ಶಿಷ್ಯನಿಗೆ ವೇದಾಂತಸಿಂಹಾಸನದಲ್ಲಿ ಕುಳ್ಳಿರಿಸಿ ಶಂಖದ ನೀರಿನಿಂದ ಅಭಿಷೇಕ ಮಾಡಿದರು. ಅದೇ ಸಂದರ್ಭದಲ್ಲಿ ಗುರುಗಳು ಶ್ರೀಪೂರ್ಣಪ್ರಜ್ಞರಿಗೆ 'ಸುಖತೀರ್ಥ' (ಆನಂದ ತೀರ್ಥ) ಎನ್ನುವ ಅಭಿಧಾನವನ್ನಿತ್ತರು.

('ಸುಖ' ಶಬ್ದಕ್ಕೆ ಸುಖರೂಪಿಯಾದ ಭಗವಂತ ಎಂದರ್ಥ. 'ತೀರ್ಥ' ಎಂದರೆ ಕ್ಷೇತ್ರ ಎನ್ನುವ ಅರ್ಥವಿದೆ. ಹೀಗಾಗಿ 'ಸುಖತೀರ್ಥ' ಎನ್ನುವುದಕ್ಕೆ ಸುಖರೂಪಿಯಾದ ಭಗವಂತನಿಗೆ ಕ್ಷೇತ್ರದಂತೆ ಯೋಗ್ಯ ಪಾತ್ರ (ಭೂಮಿ ಅಥವಾ ಅಧಿಷ್ಠಾನ) ಎನ್ನುವ ಅರ್ಥ ಸಿಗುವುದು. ಅದೇ ರೀತಿಯಲ್ಲಿ 'ಸುಖ' ಶಬ್ದಕ್ಕೆ 'ಸುಖಕರ' ಎಂದೂ, 'ತೀರ್ಥ' ಶಬ್ದಕ್ಕೆ 'ಶಾಸ್ತ್ರ' ಎಂದೂ ಅರ್ಥವಿರುವುದರಿಂದ 'ಸುಖತೀರ್ಥ' ಎನ್ನುವುದಕ್ಕೆ ಸುಖವನ್ನು ನೀಡುವ ಶಾಸ್ತ್ರಗಳನ್ನು ಮಾಡುವವರು ಎನ್ನುವ ಅರ್ಥವೂ ಸಿಗುವುದು. ಈ ಎರಡು ದೃಷ್ಟಿಯಿಂದಲೂ ಶ್ರೀಪೂರ್ಣಪ್ರಜ್ಞರಿಗೆ ಪಟ್ಟಾಭಿಷೇಕ ಸಮಯದಲ್ಲಿ ಇಟ್ಟ 'ಸುಖತೀರ್ಥ' ಎನ್ನುವ ಅಭಿಧಾನ ಸಾರ್ಥಕವೇ ಆಯಿತು.)

ಕದಾಚಿತ್ ಯಾಮ್ಯದೇಶಂ ತು ಗುರುಪೂರ್ವಯುತೋ ಯಯೌ।
ವಿಚಿತ್ರಂ ಕರ್ಮ ಕುರ್ವನ್ ಸ★ ಪೂರ್ಣಪ್ರಜ್ಞಃ ಪಥಿ ಪ್ರಭುಃ ॥೧೫॥
ತತ್ರ ತತ್ರ ವಿವಾದೋಽಭೂತ್ ಅನ್ಯೋನ್ಯಂ ಮಾಯಿನಾಂ ಪ್ರಭೋಃ।
ವಿಜಿತ್ಯ ತಾನ್ ವಿವಾದೇ ತು ತತೋ ದೇಶಾಂತರಂ ಯಯೌ ॥೧೬॥

ಒಮ್ಮೆ ಆನಂದತೀರ್ಥರು ಗುರುಗಳಾದ ಶ್ರೀಅಚ್ಯುತಪ್ರೇಕ್ಷತೀರ್ಥರು

★ವಾಸ್ತವವಾಗಿ ಸ ಅಂತಲೇ ಶ್ಲೋಕವನ್ನು ಪೂರ್ಣವಾಗಿ ಹೇಳುವಾಗ ಹೇಳಬೇಕು. ಒಂದು ವೇಳೆ ಪಾದದಲ್ಲಿ ನಿಲ್ಲಿಸುವುದಾದರೆ ಸಃ ಅಂತ ಹೇಳಬೇಕಾಗುತ್ತದೆ.

ೊದಲಾದವರೊಂದಿಗೆ ದಕ್ಷಿಣದಿಕ್ಕಿಗೆ ಪ್ರಯಾಣ ಹೊರಟರು. ಹೋದ ಕಡೆಗಳೆಲ್ಲೆಲ್ಲ ನಂದತೀರ್ಥರು ಆಶ್ಚರ್ಯಕರವಾದ ಕಾರ್ಯಗಳನ್ನು ಮಾಡುತ್ತಿದ್ದರು. ಒಮ್ಮೆ ದಾರಿಯಲ್ಲಿ ಾಯಾವಾದಿಗಳೊಂದಿಗೆ ವಿವಾದವೂ ಏರ್ಪಟ್ಟಿತು. ಆ ವಿವಾದದಲ್ಲಿ ಆನಂದತೀರ್ಥರು ಾಯಾವಾದಿಗಳನ್ನು ಗೆದ್ದು ಮತ್ತೊಂದು ಸ್ಥಳಕ್ಕೆ ಪ್ರಯಾಣ ಬೆಳೆಸಿದರು.

(ಉಡುಪಿಯಿಂದ ದಕ್ಷಿಣದಿಕ್ಕಿನಲ್ಲಿರುವ 'ವಿಷ್ಣುಮಂಗಳ' (ನಾರಾಯಣಮಂಗಳ) ಷ್ಣುವಕ್ಷೇತ್ರದಲ್ಲಿ ಶ್ರೀಮಧ್ವಾಚಾರ್ಯರು ತಂಗಿದ್ದರು. ಅಲ್ಲಿ ಆನಂದ ತೀರ್ಥರಿಗೆ ಮತ್ತು ರುಗಳಿಗೆ ಭಿಕ್ಷೆ ನೀಡಿದ ಗೃಹಸ್ಥನೊಬ್ಬನು ಆನಂದತೀರ್ಥರ ಭೋಜನಸಾಮರ್ಥ್ಯವನ್ನು ನು ಕೇಳಿದ್ದನ್ನು ಸ್ವತಃ ಪರೀಕ್ಷಿಸುವುದಕ್ಕೋಸ್ಕರ ಭಿಕ್ಷಾವಸಾನದಲ್ಲಿ (ಭಿಕ್ಷಾ ಸ್ವೀಕಾರದ ೊನೆಯ ಹಂತದಲ್ಲಿ) ಅವರ ಮುಂದೆ ಇನ್ನೂರಕ್ಕಿಂತಲೂ ಹೆಚ್ಚು ದೊಡ್ಡಗಾತ್ರದ ಳೆಹಣ್ಣುಗಳನ್ನು ಇರಿಸಿ ಸ್ವೀಕರಿಸಬೇಕೆಂದು ನಿವೇದಿಸಿಕೊಂಡನು. ಆನಂದ ತೀರ್ಥರು ಷ್ಟನ್ನೂ ಸ್ವೀಕರಿಸಿದರು. ಅದನ್ನು ಸ್ವೀಕರಿಸಿದರೂ ಅವರ ಹೊಟ್ಟೆ ಮೊದಲಿನಂತೆ ವಾಗಿಯೇ ಇತ್ತು. ಜೊತೆಯಲ್ಲಿ ಯಾವುದೇ ರೀತಿಯ ತೊಂದರೆಯೂ ಉಂಟಾಗಲಿಲ್ಲ. ವಿಷಯದ ಕುರಿತಂತೆ ಗುರುಗಳು ಏಕಾಂತದಲ್ಲಿ ಶ್ರೀ ಪೂರ್ಣಪ್ರಜ್ಞರಲ್ಲಿ ಪ್ರಶ್ನಿಸಿದಾಗ ನ್ನ ಹೊಟ್ಟೆಯಲ್ಲಿ ಹೆಬ್ಬೆರಳಷ್ಟು ಗಾತ್ರದ, ನನಗೆ ಹಿತವನ್ನೇ ಉಂಟುಮಾಡುವ, ಆದರೆ ಳಯಕಾಲದಲ್ಲಿ ಸಮಗ್ರ ಜಗತ್ತನ್ನೇ ಸುಡುವ ಬೆಂಕಿ ಇದೆ. ಅದರಿಂದ ಈ ವಿಚಿತ್ರ ಘಟನೆ ೆದಿದೆ, ಎಂದು ತಿಳಿಸಿದರು.

ಆ ವಿಷ್ಣುಮಂಗಲ ಕ್ಷೇತ್ರದಿಂದ ದಕ್ಷಿಣದಿಕ್ಕಿಗೆ ಪ್ರಯಾಣಮಾಡುತ್ತಿರುವಾಗ ಅನೇಕ ವಾದಿಗಳನ್ನು ಆನಂದತೀರ್ಥರು ಗೆಲ್ಲುತ್ತಲೇ ಇದ್ದರು.

ಂದೆ ಆನಂದತೀರ್ಥರು ಪ್ರಯಾಣ ಮಾಡುತ್ತಾ ಅನಂತಪುರವನ್ನು ಸೇರಿದರು. ಅಲ್ಲಿ ಬ್ರಹ್ಮ ಾತ್ರಗಳ ಅರ್ಥವನ್ನು ತಿಳಿಸುತ್ತಿರುವಾಗ ಯತಿವೇಷಧಾರಿಯಾಗಿ ಬಂದ ಣಿಮಂತನೊಂದಿಗೆ ವಾಗ್ವಾದವೂ ನಡೆಯಿತು. ಆದರೆ ಅವರ ಮುಂದೆ ಆ ಮಣಿಮಂತನ ಟ ನಡೆಯಲಿಲ್ಲ. ಅಲ್ಲಿಂದ ಮುಂದೆ ಆನಂದತೀರ್ಥರು ಶ್ರೀರಾಮೇಶ್ವರಕ್ಷೇತ್ರವನ್ನು ುಪಿದರು.

ತತ್ರಾಪಿ ಮಾಯಿನೋ ಜಿತ್ವಾ ವಾಸಂ ಚಕ್ರೇ ಮಹಾಮತಿಃ ।
ತತೋ ದೇಶಾದ್ ರೌಪ್ಯಪೀಠಂ ಪ್ರಾಪ್ಯ ತಂ ಶೇಷಶಾಯಿನಮ್ ।।೧೭।।
ನಮಸ್ಕೃತ್ಯ ಸ್ಥಿತಂ ತತ್ರ ವಾಸಂ ಚಕ್ರೇ ಜಗದ್ಗುರುಃ ।

ಆ ರಾಮೇಶ್ವರಕ್ಷೇತ್ರದಲ್ಲಿಯೂ ಮಾಯಾವಾದಿಗಳೊಂದಿಗೆ ವಾದ ವಿವಾದ ುಗಿತ್ತು. ಅಲ್ಲಿಯೂ ಜಯಶಾಲಿಗಳಾದ ಆನಂದತೀರ್ಥರು ಮಾಯಾವಾದಿಗಳ ಬೆದರಿಕೆಗೆ

ಸೊಪ್ಪು ಹಾಕದೇ ಚಾತುರ್ಮಾಸ್ಯವನ್ನು ಕಳೆದರು. ಚಾತುರ್ಮಾಸ್ಯವ್ರತವನ್ನು ಪೂರೈಸಿ ಉಡು ಬಂದು ಅಲ್ಲಿ ನೆಲಸಿರುವ ಶೇಷಶಾಯಿಯಾದ ಶ್ರೀಅನಂತಾಸನದೇವರಿಗೆ ನಮಸ್ಕ ಉಡುಪಿಯಲ್ಲಿ ವಾಸಮಾಡಲು ಆರಂಭಿಸಿದರು.

ತತೋ ವಿರಕ್ತೋ ಗತವಾನ್ ಅಚ್ಯುತಪ್ರೇಕ್ಷಸನ್ನಿಧಿಮ್ ॥೧೮
ತತ್ರ ದೃಷ್ಟ್ವಾ ಮುನಿವರಾನ್ ನಮನಂ ಕೃತವಾನಹಮ್ ।

ಆನಂದತೀರ್ಥರು ಗುರುಗಳೊಂದಿಗೆ ಉಡುಪಿಕ್ಷೇತ್ರದಲ್ಲಿ ಮಾಡಿಕೊಂಡಿರುವಾಗ, ಐಹಿಕ ವಿಷಯದಲ್ಲಿ ವೈರಾಗ್ಯ ತಾಳಿದ ನಾನು (ಸತ್ಯತೀರ್ಥ ಶ್ರೀಅಚ್ಯುತಪ್ರೇಕ್ಷತೀರ್ಥರ ಬಳಿಗೆ ಹೋದೆನು ಮತ್ತು ಅವರಿಗೆ ನಮಸ್ಕಾರ ಮಾಡಿದೆನು.

ಅಪೃಚ್ಛನ್ ತೇ ತು ಭವತಾ ವಟೋ ಕಿಂ ಗಮನಂ ಕೃತಮ್ ॥೧೯
ತದಾऽವದಂ ಹರೌ ಕರ್ಮ ಸಮರ್ಪಯಿತುಮಾಗತಃ ।

ಆ ಅಚ್ಯುತಪ್ರೇಕ್ಷತೀರ್ಥರು ತಮಗೆ ನಮಸ್ಕರಿಸಿದ ನನ್ನನ್ನು ಕುರಿತು 'ಏ ವಟು ಯಾವ ಉದ್ದೇಶದಿಂದ ಇಲ್ಲಿಗೆ ಬಂದಿ'? ಎಂದು ಪ್ರಶ್ನಿಸಿದರು. ಆಗ ನಾನು ಶ್ರೀಹರಿ ಸಕಲ ಕರ್ಮಗಳನ್ನು ಸಮರ್ಪಿಸುವ ಸಂನ್ಯಾಸಾಶ್ರಮವನ್ನು ಸ್ವೀಕರಿಸಲು ಬಂದಿರುವು ಹೇಳಿದೆನು.

ತಚ್ಛ್ರುತ್ವಾ ವಿಸ್ಮಿತಾಸ್ತೇ ತು ಬಾಢಮಿತ್ಯಬ್ರುವನ್ ಮುದಾ ॥ ೨೦
ಸ್ವಗುರುಂ ಪ್ರಾರ್ಥಯಾಂಚಕ್ರೇ ತದಾ ತಂ ಪುರುಷೋತ್ತಮಃ ।

ನನ್ನ ಮಾತನ್ನು ಕೇಳಿ ಆ ಅಚ್ಯುತಪ್ರೇಕ್ಷತೀರ್ಥರು ಬಹಳ ಆಶ್ಚರ್ಯಪಟ್ಟರು. ಅ ಆಸೆಯನ್ನು ನೆರವೇರಿಸುವುದಾಗಿ ಒಪ್ಪಿದರು. ಆವಾಗ ಅವರ ಶಿಷ್ಯ ಶ್ರೀಪುರುಷೋತ್ತಮತೀರ್ಥರು ಗುರುಗಳಾದ ಶ್ರೀಅಚ್ಯುತಪ್ರೇಕ್ಷತೀರ್ಥ ಪ್ರಾರ್ಥಿಸಿಕೊಂಡರು.

ಅಸ್ಯೋಪದೇಷ್ಟುಮಿಚ್ಛಾಮಿ ಭವತಾ ಕೃಪಯಾ ಮಯಿ ॥೨೧
ದತ್ತಾ ಚೇತ್ ಪರಮಾಜ್ಞಾ ಚ ದೇಹಿ ಬ್ರಹ್ಮೇತಿ ಸೋऽಬ್ರವೀತ್।
ಇತಿ ತದ್ವಚನಂ ಶ್ರುತ್ವಾ ತಥಾ ಕರ್ತುಂ ಮನೋ ದಧೌ ॥ ೨೨

''ಈ ವಟುವಿಗೆ ಸಂನ್ಯಾಸದೀಕ್ಷೆಯನ್ನು ನೀಡಲು ಬಯಸಿದ್ದೇನೆ. ತಾವು ತನ್ನ ಮೇ ಕರುಣೆಯಿಂದ ತನಗೆ ಆಜ್ಞೆಯನ್ನು ನೀಡಿದರೆ ಸಂನ್ಯಾಸಾಶ್ರಮವನ್ನು ಈ ವಟು ನೀಡುವೆನು''-ಈ ರೀತಿ ಶ್ರೀಪುರುಷೋತ್ತಮತೀರ್ಥರು ಗುರುಗಳಲ್ಲಿ ಪ್ರಾರ್ಥಿಸಿದರು.

ಅದಕ್ಕೆ ಅಚ್ಯುತಪ್ರೇಕ್ಷತೀರ್ಥರು ವಟುವಿಗೆ ಸಂನ್ಯಾಸಾಶ್ರಮವನ್ನೀಯಲು ಆಜ್ಞೆಯಿತ್ತರು. ಹೀಗೆ ಗುರುಗಳಿಂದ ಅನುಜ್ಞೆಯನ್ನು ಪಡೆದು ಶ್ರೀಪುರುಷೋತ್ತಮತೀರ್ಥರು ವಟುವಿಗೆ ಸಂನ್ಯಾಸಾಶ್ರಮವನ್ನು ನೀಡಲು ನಿಶ್ಚಯಿಸಿದರು.

ಅಥಾಸೌ ಬ್ರಾಹ್ಮಣೈಃ ಸಾರ್ಧಂ ಕಾರಯಿತ್ವಾ ಯಥಾವಿಧಿ।
ಸತ್ಯತೀರ್ಥಾಭಿಧಾನಂ ಚ ದದೌ ಮೇ ಮಂತ್ರಮುತ್ತಮಮ್ ॥೨೩॥

ಹೀಗೆ ನಿಶ್ಚಯಿಸಿದ ಶ್ರೀಪುರುಷೋತ್ತಮತೀರ್ಥರು ಶುಭಮುಹೂರ್ತದಲ್ಲಿ ಬ್ರಾಹ್ಮಣರಿಂದ ವಿಧಿವತ್ತಾಗಿ ಸಂನ್ಯಾಸಾಶ್ರಮಕ್ಕೆ ಸಂಬಂಧಿಸಿದ ಕ್ರಿಯೆಗಳನ್ನು ನೆರವೇರಿಸಿದರು. ನನಗೆ ಸಂನ್ಯಾಸದೀಕ್ಷೆಯನ್ನು ಅನುಗ್ರಹಿಸುತ್ತಾ 'ಸತ್ಯತೀರ್ಥ' ಎನ್ನುವ ಅಭಿಧಾನವಿತ್ತು, ಶ್ರೇಷ್ಠವಾದ ಪ್ರಣವಾದಿ ಮಂತ್ರಗಳನ್ನು ಉಪದೇಶಿಸಿದರು.

ಅಥಾಹಂ ಮುನಿಶಾರ್ದೂಲಸನ್ನಿಧಾವವಸಂ ಸುಖಮ್।
ಪೂರ್ಣಪ್ರಜ್ಞೋಽಪಿ ಸತತಂ ದಯಾಂ ಚಕ್ರೇಽಧಿಕಂ ಮಯಿ ॥೨೪॥

ಸಂನ್ಯಾಸಾಶ್ರಮವನ್ನು ಸ್ವೀಕರಿಸಿದ ಬಳಿಕ ನಾನು ಶ್ರೇಷ್ಠಮುನಿಗಳಾದ ಶ್ರೀ ಪೂರ್ಣಪ್ರಜ್ಞರ ಬಳಿಯಲ್ಲಿಯೇ ವಾಸ ಮಾಡಿದೆನು. ಶ್ರೀ ಪೂರ್ಣಪ್ರಜ್ಞರಾದರೂ ತನ್ನಲ್ಲಿ ಅತಿಶಯವಾದ ಕಾರುಣ್ಯವನ್ನು ನಿರಂತರವಾಗಿ ಹರಿಸಿದರು.

ಗೀತಾಭಾಷ್ಯಂ ತದಾ ಕೃತ್ವಾ ಗುರುಯುಕ್ತಗುರೋರದಾತ್ ।
ಗುರೋರನುಜ್ಞಾಮಾದಾತುಂ ಪ್ರಿಯಂ ವ್ಯಾಸಾಶ್ರಮಂ ಯಯೌ ॥ ೨೫॥

ಉಡುಪಿಯಲ್ಲಿ ಗುರುಗಳೊಂದಿಗೆ ಆನಂದತೀರ್ಥರು ವಾಸಮಾಡಿಕೊಂಡಿರುವಾಗಲೇ ಗೀತಾಭಾಷ್ಯದ ರಚನೆಯನ್ನು ಮಾಡಿದರು. ಅದನ್ನು ತಮಗಿಂತ ಆಶ್ರಮದಲ್ಲಿ ಜ್ಯೇಷ್ಠರಾಗಿರುವ ಶ್ರೀಪುರುಷೋತ್ತಮತೀರ್ಥರಿಗೆ ಹಾಗೂ ಅವರೊಂದಿಗೆ ಇರುವ ತನ್ನ ಗುರುಗಳಾದ ಶ್ರೀ ಅಚ್ಯುತಪ್ರೇಕ್ಷತೀರ್ಥರಿಗೆ ನೀಡಿದರು.

ಮುಂದೆ ಆನಂದತೀರ್ಥರು ಬ್ರಹ್ಮಸೂತ್ರಗಳಿಗೆ ಭಾಷ್ಯಗ್ರಂಥವನ್ನು ಬರೆಯಬೇಕೆಂದು ಸಂಕಲ್ಪಿಸಿದರು. ಅದಕ್ಕೆ ಮೊದಲು ಬ್ರಹ್ಮಸೂತ್ರಗಳನ್ನು ರಚಿಸಿದ ಶ್ರೀವೇದವ್ಯಾಸದೇವರ ಅನುಜ್ಞೆಯನ್ನು ಪಡೆಯಲು ಆನಂದತೀರ್ಥರು ಬಯಸಿದರು. ಅದಕ್ಕೋಸ್ಕರ ಶ್ರೀವೇದವ್ಯಾಸ ದೇವರು ಸನ್ನಿಹಿತರಾಗಿರುವ ಮತ್ತು ತನಗೆ ಬಹಳ ಪ್ರಿಯವಾಗಿರುವ ಊರ್ಧ್ವಬದರಿಗೆ ಪ್ರಯಾಣ ಮಾಡಲು ಆನಂದತೀರ್ಥರು ನಿಶ್ಚಯಿಸಿ ಪ್ರಯಾಣಕ್ಕೆ ಗುರುಗಳಾದ ಶ್ರೀ ಅಚ್ಯುತಪ್ರೇಕ್ಷರಲ್ಲಿ ಅನುಜ್ಞೆಯನ್ನು ಕೇಳಿದರು.

ಆನಂದತೀರ್ಥರು ತಾನು ಬದರಿಗೆ ಹೋದಾಗ ತನ್ನ ವಿರಹದ ವ್ಯಥೆ ಗುರುಗಳಿಬ್ಬರಿಗ
ಆಗಬಾರದೆಂದು ನಿಶ್ಚಯಿಸಿ, ಹೊರಡುವುದಕ್ಕಿಂತಲೂ ಮೊದಲು ಗೀತಾಭಾಷ್ಯವನ್ನು ಬರೆ
ಅವರಿಬ್ಬರಿಗೂ ನೀಡಿ, ಇದನ್ನು ಅವಲೋಕಿಸುವುದರ ಮೂಲಕ ವಿರಹವನ
ದೂರಮಾಡಿಕೊಳ್ಳಿ ಎಂದು ಹೇಳಿ ಊರ್ಧ್ವಬದರಿಗೆ ಪ್ರಯಾಣ ಬೆಳೆಸಿದರು.

ಅಹಂ ಚಾನುಗತಃ ತ್ಯಕ್ತುಮಶಕ್ತಃ ಸನ್ ಗುರೋರ್ವ್ರತಃ (ಗುರುಪ್ರಿಯಃ)।
ತತ್ರ ತತ್ರ ಸ್ಥಿತಂ ದೇವಂ ಬಹುಶಿಷ್ಯೈರಿತೋ ಮುನಿಃ ॥ ೨೬॥
ನಮಸ್ಕೃತ್ಯ ಹರಿಂ ಪ್ರಾಪ ನಾರಾಯಣಪದೋದಿತಮ್ ।

ಶ್ರೀಆನಂದತೀರ್ಥರ ಪ್ರೀತಿಗೆ ಪಾತ್ರನಾದ ನನಗೆ ಉಡುಪಿಯಿಂದ ಅವರು ಬದರಿ
ಪ್ರಯಾಣ ಹೊರಟಾಗ ಅವರನ್ನು ಬಿಟ್ಟಿರಲು ಸಾಧ್ಯವಾಗಲಿಲ್ಲ. ಅವರ ಜೊತೆಯಲ್ಲಿ ನಾನ
ಬದರಿಗೆ ಪ್ರಯಾಣ ಹೊರಟೆನು. ಅದೇ ರೀತಿಯಾಗಿ ಅನೇಕ ಮಂದಿ ಶಿಷ್ಯರೂ ಗುರುಗ
ಜೊತೆಯಲ್ಲಿ ಬದರಿಗೆ ಹೊರಟರು.

ಹೀಗೆ ಅನೇಕ ಶಿಷ್ಯರಿಂದೊಡಗೂಡಿ ಆನಂದತೀರ್ಥರು ಉಡುಪಿಯಿಂದ ಬದರಿ
ಪ್ರಯಾಣ ಬೆಳೆಸಿದರು. ದಾರಿಯಲ್ಲಿ ತೀರ್ಥಕ್ಷೇತ್ರಾದಿಗಳಲ್ಲಿ ಸನ್ನಿಹಿತನಾಗಿರುವ ಶ್ರೀಹರಿ
ನಮಸ್ಕಾರವನ್ನು ಮಾಡುತ್ತಾ, ಗುರುಗಳು 'ಅನಂತಮಠ' ಎಂದು ಕರೆಯಲ್ಪಡು
ಬದರಿಕಾಶ್ರಮವನ್ನು ತಲುಪಿದರು.

ನಮನಂ ತಸ್ಯ ಕೃತ್ವಾ ತು ಗೀತಾಭಾಷ್ಯಂ ಸಮಾರ್ಪಯತ್ ॥ ೨೭॥
ತಸ್ಯ ಪ್ರವಚನಂ ಕುರ್ವನ್ ಶಿಷ್ಯೇಭ್ಯಃ ಪೂರ್ಣಬುದ್ಧಿಮಾನ್ ।
ತಚ್ಛ್ರುತ್ವಾ ಪ್ರೀತಿಮಾಪನ್ನಃ ಕುರುಷ್ವೇತ್ಯಬ್ರವೀತ್ ಮುಹುಃ ॥ ೨೮॥
ಜ್ಞಾತ್ವಾ ತದಭಿಭಾವಂ ತು ವ್ಯಾಖ್ಯಾಂಚಕ್ರೇ ಮಹಾಮುನಿಃ ।

ಬದರಿಕಾಶ್ರಮದಲ್ಲಿ ಸನ್ನಿಹಿತನಾಗಿರುವ ಶ್ರೀನಾರಾಯಣದೇವರಿಗೆ ಆನಂದತೀರ್ಥ
ನಮಸ್ಕರಿಸಿ ತಾನು ಬರೆದ ಗೀತಾಭಾಷ್ಯವನ್ನು ಪಾದತಲದಲ್ಲಿ ಸಮರ್ಪಿಸಿದರು.
ನಾರಾಯಣದೇವರ ಪ್ರೀತಿಗಾಗಿ ಅಲ್ಲಿರುವ ಶಿಷ್ಯರಿಗೆ ಗೀತಾಭಾಷ್ಯದ ಪ್ರವಚನವನ
ಆನಂದತೀರ್ಥರು ಮಾಡಿದರು. ಅದನ್ನು ಕೇಳಿ ನಾರಾಯಣ ದೇವರಿಗೆ ಬಹಳ ಸಂತೋ
ಉಂಟಾಯಿತು. ರಾತ್ರಿಯ ಸಮಯದಲ್ಲಿ ಶಿಷ್ಯರೆಲ್ಲರೂ ಮಲಗಿದ್ದಾಗ, ನಾರಾಯಣದೇವ
ಆನಂದತೀರ್ಥರ ಬಳಿಗೆ ಬಂದು ತಮ್ಮ ಕೈಯಿಂದ ನೆಲಕ್ಕೆ ಬಡಿದು ಮತ್ತೊಮ್ಮೆ ಪ್ರವಚನವನ
ಮಾಡು ಎಂದು ಹೇಳಿದರು. ನೆಲಕ್ಕೆ ಬಡಿದ ಶಬ್ದ ಮಲಗಿದ್ದ ಶಿಷ್ಯರಿಗೂ ಕೇಳಿಸಿತ್ತು. ಅದನ
ಕೇಳಿದ ಆನಂದತೀರ್ಥರು ನಾರಾಯಣದೇವರ ಅಭಿಪ್ರಾಯವನ್ನು ಅರಿತು ಮತ್ತೊಮ

ಅವರ ಸಮ್ಮುಖದಲ್ಲಿ ಶಿಷ್ಯರಿಗೆ ಗೀತಾಭಾಷ್ಯದ ಪ್ರವಚನವನ್ನು ಮಾಡಿದರು.

ಏವಂ ಯೋಗ್ಯಾನಿ ಕರ್ಮಾಣಿ ಕುರ್ವನ್ ಹೃದಿ ಸ್ಮರನ್ ಹರಿಮ್ || ೨೯ ||
ಉಪವಾಸ ಕಾಲಂ ಕಂಚಿಚ್ಚ ಬಹುಶಿಷ್ಯೈಃ ಸಮನ್ವಿತಃ ।

ಹೀಗೆ ಬದರಿಕಾಶ್ರಮದಲ್ಲಿ ಭಗವಂತನಿಗೆ ಪ್ರೀತಿಯನ್ನುಂಟುಮಾಡುವ ಪಾಠಪ್ರವಚನಾದಿಗಳನ್ನು ಹಾಗೂ ಕಾಷ್ಠಮೌನ, ಉಪವಾಸಾದಿ ವ್ರತಾದಿಗಳನ್ನು ಕೈಗೊಳ್ಳುತ್ತಾ, ಮನಸ್ಸಿನಲ್ಲಿ ಸತತವೂ ಶ್ರೀಹರಿಯನ್ನು ಧ್ಯಾನಿಸುತ್ತಾ ತಮ್ಮ ಶಿಷ್ಯರೊಂದಿಗೆ ಸ್ವಲ್ಪದಿನಗಳವರೆಗೆ ವಾಸ ಮಾಡಿದರು.

ಕದಾಚಿದ್ರಾತ್ರಿಕಾಲೇ ತು ವ್ಯಾಸೇನ ಪ್ರತಿಬೋಧಿತಃ || ೩೦ ||
ಸ್ವಾಭಿಪ್ರಾಯಯುತಂ ಪತ್ರಂ ಲಿಖಿತ್ವಾ ರವಿಮಂಡಲೇ ।
ಉದಯೇ ಸ್ಥಾಪಯಾಮಾಸ ಮೌನವಾನ್ ಜನಸನ್ನಿಧೌ || ೩೧ ||

ಆನಂದತೀರ್ಥರು ಆ ಬದರಿಕಾಶ್ರಮದ ಅನಂತಮಠ ಎಂಬಲ್ಲಿ ೪೮ ದಿನಗಳ ಪರ್ಯಂತ ಕಾಷ್ಠಮೌನವ್ರತವನ್ನು ಆಚರಿಸುತ್ತಾ ಶ್ರೀವೇದವ್ಯಾಸದೇವರನ್ನು ವಿಶೇಷವಾಗಿ ಆರಾಧಿಸಿದರು. ಅದರಿಂದ ಸುಪ್ರೀತರಾದ ಶ್ರೀವೇದವ್ಯಾಸದೇವರು ರಾತ್ರಿಯ ಸಮಯದಲ್ಲಿ ಆನಂದತೀರ್ಥರ ಬಳಿಗೆ ಬಂದರು. 'ನಾಳೆ ದಿವಸ ತಾನಿರುವ ಉತ್ತರಬದರಿಗೆ (ಊರ್ಧ್ವ ಬದರಿಗೆ) ಬಾ' ಎಂದುಶ್ರೀವೇದವ್ಯಾಸದೇವರು ಅಪ್ಪಣೆ ಮಾಡಿ, ತಕ್ಷಣ ರಾತ್ರಿಯ ಸಮಯದಲ್ಲಿಯೇ ಅದೃಶ್ಯರಾದರು.

ಮೌನವ್ರತದಲ್ಲಿದ್ದ ಆನಂದತೀರ್ಥರು ತಾವು ಶ್ರೀವೇದವ್ಯಾಸರ ದರ್ಶನಕ್ಕಾಗಿ ಊರ್ಧ್ವಬದರಿಗೆ ಹೋಗುವುದನ್ನು ಶಿಷ್ಯರಿಗೆ ತಿಳಿಸುವುದಕ್ಕೋಸ್ಕರ ಹೇಳಬೇಕಾದ ಸಂಗತಿಗಳನ್ನು ಮಾರನೆಯ ದಿವಸ ಸೂರ್ಯೋದಯವಾದಾಗ ಒಂದು ಪತ್ರದಲ್ಲಿ ಬರೆದರು. (ಅನಂತಮಠದಲ್ಲಿ ಆನಂದ ತೀರ್ಥರ ಬಳಿಯಲ್ಲಿ ಅನೇಕ ಶಿಷ್ಯರಿದ್ದರೂ ಅವರಾರಿಗೂ ಶ್ರೀವೇದವ್ಯಾಸರು ಬಂದದ್ದು ಗೊತ್ತಾಗಲಿಲ್ಲ. ಬರೇ ಶ್ರೀವೇದವ್ಯಾಸದೇವರ ಪ್ರಕಾಶ ಎಲ್ಲೆಡೆ ವ್ಯಾಪಿಸಿದ್ದನ್ನು ಶಿಷ್ಯರು ಗಮನಿಸಿದರು. ಆದ್ದರಿಂದಲೇ ಅವರಾರಿಗೂ ವೇದವ್ಯಾಸರು ಆನಂದತೀರ್ಥರಿಗೆ ಹೇಳಿದ ವಿಷಯವೂ ತಿಳಿಯಲಿಲ್ಲ.)

ವೇದಶಾಸ್ತ್ರಾತ್ ಪರಂ ನಾಸ್ತಿ ನ ದೈವಂ ಕೇಶವಾತ್ ಪರಮ್ ।
ಗಂಗಾತೋಯಸಮಂ ತೋಯಂ ನಾಸ್ತಿ ನೈತಾದೃಶಂ ಸ್ಥಲಮ್ || ೩೨ ||
ಇತಿ ಜಾನೀತ ಸರ್ವೇಽಪಿ ಮಾ ವಿಸ್ಮರತ ಕುತ್ರಚಿತ್ ।
ದ್ರಷ್ಟುಕಾಮೋ ವ್ಯಾಸರೂಪಮಧುನಾ ಯಾಮಿ ಸ್ವಸ್ತಿ ವಃ || ೩೩ ||
ಭೂಯಾದಿತ್ಯೇವ ಮಧ್ವಸ್ತು ಯಯೌ ವ್ಯಾಸಾಶ್ರಮಂ ಪ್ರತಿ।

''ವೇದಶಾಸ್ತ್ರಕ್ಕಿಂತ ಮಿಗಿಲಾದ ಶಾಸ್ತ್ರಗ್ರಂಥ ಇನ್ನೊಂದಿಲ್ಲ. 'ಕ' ಎನಿಸಿದ ಬ್ರಹ್ಮದೇವರನ್ನೂ, ಈಶ ಎನಿಸಿದ ರುದ್ರದೇವರನ್ನು ನಿಯಮಿಸುವುದರಿಂದ 'ಕೇಶವ' ನೆನಿಸಿದ ಶ್ರೀಹರಿಗಿಂತ ಉತ್ತಮನಾದ ದೇವನಿಲ್ಲ. ಗಂಗಾತೀರ್ಥಕ್ಕೆ ಸಮಾನವಾದ ಇನ್ನೊಂದು ತೀರ್ಥವಿಲ್ಲ. ಈ ಬದರೀಕ್ಷೇತ್ರದಷ್ಟು ಪಾಪ ಪರಿಹಾರಕವಾದ ಇನ್ನೊಂದು ಕ್ಷೇತ್ರವಿಲ್ಲ. ಇವಿಷ್ಟನ್ನು ನೀವೆಲ್ಲರೂ ಚೆನ್ನಾಗಿ ಮನದಟ್ಟು ಮಾಡಿಕೊಳ್ಳಿ, ಎಂದೂ ಇವುಗಳನ್ನು ಮರೆಯಬೇಡಿ. ಈಗ ನಾನು ಶ್ರೀ ವೇದವ್ಯಾಸರ ದರ್ಶನವನ್ನು ಪಡೆಯಲು ಊರ್ಧ್ವಬದರಿಗೆ ಹೋಗುತ್ತಿದ್ದೇನೆ. ನಿಮಗೆಲ್ಲ ಮಂಗಳವಾಗಲಿ'' - ಇವಿಷ್ಟು ವಿಷಯಗಳನ್ನು ಗುರುಗಳು ಪತ್ರದಲ್ಲಿ ಬರೆದಿದ್ದರು. ಸೂರ್ಯೋದಯವಾದ ಕೂಡಲೇ ಪತ್ರದಲ್ಲಿ ಅಷ್ಟು ವಿಷಯಗಳನ್ನು ಬರೆದು ಅವನ್ನು ಶಿಷ್ಯರ ಮುಂದಿರಿಸಿ ಊರ್ಧ್ವಬದರಿಯ ಕಡೆಗೆ ಹೆಜ್ಜೆ ಹಾಕಲಾರಂಭಿಸಿದರು.

ತತೋ ದೃಷ್ಟ್ವಾ ವಯಂ ಪತ್ರಂ ಖಿನ್ನಸ್ವಾಂತಾ ಅಭೂಮ ಹ **।೩೪॥**
ಅಪೃಚ್ಛನ್ ನೈವ ತಂ ಮಧ್ವಂ ಜ್ಞಾತ್ವಾ ತತ್ರ ಸ್ಥಿತಾಶ್ಚ ತೇ॥

ಊರ್ಧ್ವಬದರಿಗೆ ಗುರುಗಳು ಹೊರಟ ನಂತರ ನಾವೆಲ್ಲರೂ ಅವರು ಬರೆದಿಟ್ಟ ಪತ್ರವನ್ನು ಓದಿದೆವು. ವಿಷಯ ತಿಳಿದಾಗ ನಮ್ಮ ಮನಸ್ಸಿಗೆ ಬಹಳ ಖೇದವಾಯಿತು. ವ್ಯಾಸಾಶ್ರಮಕ್ಕೆ ಹೊರಟ ಗುರುಗಳು ಮರಳಿ ಬರುತ್ತಾರೆ ಎನ್ನುವುದು ಸರಿಯಾಗಿ ಗೊತ್ತಿಲ್ಲದ ಕಾರಣ ಗುರುಗಳ ವಿಯೋಗವನ್ನು ತಡೆದುಕೊಳ್ಳಲಾಗದೆ ನಾವೆಲ್ಲರೂ ಬಹಳ ದುಃಖಪಟ್ಟೆವು. ಗುರುಗಳ ಹತ್ತಿರ ವ್ಯಾಸಾಶ್ರಮಕ್ಕೆ ಹೋಗುವ ಉದ್ದೇಶದ ಕುರಿತಾಗಲೀ ಅಥವಾ ನಾವು ತಮ್ಮ ಜೊತೆ ಬರುತ್ತೇವೆ ಎಂದು ಹೇಳುವ ವಿಷಯದ ಕುರಿತಾಗಲೀ ಯಾರೂ ಸಹ ವಿಚಾರಿಸಲಿಲ್ಲ. ಒಂದು ವೇಳೆ ವಿಚಾರಿಸಿದೆವು ಅಂತಾದರೆ ಗುರುಗಳಿಗೆ ಬೇಸರ ಆದೀತು ಎನ್ನುವ ಭಯ ನಮ್ಮಲ್ಲಿತ್ತು. ಹಾಗಾಗಿ ಗುರುಗಳ ಜೊತೆಯಲ್ಲಿ ಯಾರೂ ಹೊರಡಲಿಲ್ಲ. ನಾವೆಲ್ಲರೂ ಆ ಅನಂತ ಮಠದಲ್ಲಿಯೇ ಇದ್ದು ಬಿಟ್ಟೆವು.

ತಥಾಽಪ್ಯಹಂ ತದ್ವಿಯೋಗಾತ್ ಅನ್ವಗಚ್ಛಂ ಹೃದಿ ಸ್ಮರನ್ **।೩೫॥**
ಸುದುರ್ಗಮಾರ್ಗೇ ಧಾವಂತಂ ಪೂರ್ಣಪ್ರಜ್ಞಂ ಮನೋಜವಮ್।

ಎಲ್ಲ ಶಿಷ್ಯರೂ ಅನಂತ ಮಠದಲ್ಲಿಯೇ ಇದ್ದರೂ ನನಗೆ ಮಾತ್ರ ಗುರುಗಳ ವಿಯೋಗದ ದುಃಖವನ್ನು ತಡೆದುಕೊಳ್ಳಲು ಸಾಧ್ಯವಾಗಲೇ ಇಲ್ಲ. ಹಾಗಾಗಿ ಅವರನ್ನು ಹಿಂಬಾಲಿಸಿ ಹೋಗಲು ಮನಸ್ಸು ಮಾಡಿದೆನು.

ಊರ್ಧ್ವಬದರಿಶ್ರಾಮಕ್ಕೆ ಹೋಗುವ ದಾರಿಯಾದರೂ ಬಹಳ ದುರ್ಗಮವಾದುದು. ದಾರಿಯಲ್ಲಿ ಬರೇ ದೊಡ್ಡ ದೊಡ್ಡ ಬಂಡೆಗಳ ಸಾಲೇ ಸಾಲು ಕಾಣಿಸುತ್ತಿತ್ತು. ಅಂತಹ

ರಿಯಲ್ಲಿಯೂ ಸಹ ಗುರುಗಳು ದೂರದೂರದಲ್ಲಿರುವ ಬಂಡೆಗಳ ಮೇಲೆ ಜ್ಜೆಯನ್ನಿಡುತ್ತಾ ಸಾಗುತ್ತಿದ್ದರು. ಅವರ ವೇಗ ಮನಸ್ಸಿನ ವೇಗವನ್ನೂ ಮೀರಿಸುವಂತಿತ್ತು. ರೀತಿ ಪ್ರಯಾಣ ಮಾಡುತ್ತಿದ್ದ ಗುರುಗಳನ್ನು ಮನಸ್ಸಿನಲ್ಲಿ ಧ್ಯಾನಿಸುತ್ತಾ ನಾನು ಬಹಳ ರದಲ್ಲಿ ಅವರನ್ನು ಹಿಂಬಾಲಿಸಿ ಸಾಗಿದೆನು.

ಅನುಗಂತುಮಶಕ್ತ: ಸನ್ ಅತಿಷ್ಠಂ ಗಿರಿಮೂರ್ಧನಿ ।೩೬॥
ತದಾ ಭಾನುಂ ಗತಂ ದೃಷ್ಟ್ವಾ ಭಯಗ್ರಸ್ತಂ ಸುದೂರತಃ ।
ಮಾಂ ವೀಕ್ಷ್ಯ ಪಾಣಿನಾ ಮಧ್ವೋಽನುದನ್ನಿಮಿಷಮಾತ್ರತಃ ।೩೭॥

ನಾನು ಎಷ್ಟು ಶೀಘ್ರವಾಗಿ ಗುರುಗಳನ್ನು ಹಿಂಬಾಲಿಸಿದರೂ ಅವರ ವೇಗದಷ್ಟು ೇಗಲು ಸಾಧ್ಯವಾಗಲಿಲ್ಲ. ಅಶಕ್ತನಾದ ನಾನು ಒಂದು ಪರ್ವತದ ಶಿಖರದಲ್ಲಿ ನಿಂತುಬಿಟ್ಟೆ. ಷ್ಟು ಹೊತ್ತಿಗೆ ಸೂರ್ಯನೂ ಮುಳುಗಲಾರಂಭಿಸಿದನು. ನನಗಂತೂ ಬಹಳ ಭಯವಾಯಿತು. ಾಕೆಂದರೆ ಗುರುಗಳನ್ನು ಹಿಂಬಾಲಿಸುವುದಕ್ಕೆ ಸಾಧ್ಯವಿಲ್ಲ. ಹಿಂತಿರುಗಿ ಹೋಗುವಷ್ಟರಲ್ಲಿ ೂರ್ಯ ಮುಳುಗಿ ಕತ್ತಲು ಕವಿಯುತ್ತದೆ.

ಆ ಸಂದರ್ಭದಲ್ಲಿ ಗುರುಗಳು ನಾನು ಹಿಂಬಾಲಿಸುತ್ತಾ ಬರುತ್ತಿರುವುದನ್ನು ೂರದಿಂದಲೇ ನೋಡಿ ಒಮ್ಮೆ ಕೈಯಿಂದ ಹಿಂತಿರುಗಿ ಹೋಗುವಂತೆ ಸನ್ನೆಯನ್ನು ೇರಿಸುತ್ತಾ ನನ್ನನ್ನು ನೂಕುವಂತೆ ಮಾಡಿದರು.

ತದ್ದಿನೇ ತು ಗತಂ ಮಾರ್ಗಮ್ ಅತಿಕ್ರಮ್ಯಾಽಗತೋ ಮಠಮ್।
ತದ್ದೃಷ್ಟ್ವಾ ಸ್ವಜನಾಃ ಸರ್ವೇ ವಿಸ್ಮಿತಾ ಅಭವನ್ ನನು ।೩೮॥

ಗುರುಗಳು ಒಮ್ಮೆ ಕೈಯಿಂದ ದೂರದಿಂದಲೇ ನೂಕಿದ್ದರಿಂದಲೇ, ಬೆಳಿಗ್ಗೆಯಿಂದ ರಂಭಿಸಿ ಸಾಯಂಕಾಲದವರೆಗೆ ಎಷ್ಟು ದೂರವನ್ನು ಕ್ರಮಿಸಿದ್ದೆನೋ, ಅಷ್ಟು ದೂರವನ್ನು ಂದೇ ನಿಮಿಷದಲ್ಲಿ ಕ್ರಮಿಸಿ ಸುರಕ್ಷಿತವಾಗಿ ಅನಂತಮಠವನ್ನು ಸೇರಿದೆ. ಗುರುಗಳ ಹಸ್ತದ ೂಕುವಿಕೆಯಿಂದ ಉಂಟಾದ ಗಾಳಿಯ ಪ್ರೇರಣೆ ಆ ರೀತಿ ನಾನು ಸುರಕ್ಷಿತವಾಗಿ ಂತಿರುಗುವಂತೆ ಮಾಡಿತು. ನಾನು ಬಂದದ್ದನ್ನು ನೋಡಿ ನಮ್ಮವರೆಲ್ಲ ಬಹಳ ಶ್ಚರ್ಯಪಟ್ಟರು.

ತೈಃ ಪೃಷ್ಟಶ್ಚಾಬ್ರುವಂ ಸರ್ವಂ ಶ್ರುತ್ವಾ ಸರ್ವೇಽಸ್ಮರನ್ ಮುನಿಮ್।
ಅಹಂ ತು ವಿಸ್ಮಿತೋ ಭೂತ್ವಾ ಸ್ಮಾರಂ ಸ್ಮಾರಂ ತು ತದ್ಗುಣಾನ್ ।೩೯॥
ಅವಸಂ ಸ್ವಜನೈಃ ಸಾರ್ಧಂ ತತ್ರಾನಂತಮಠೇ ಪಠನ್ ।
ತದುಕ್ತಶಾಸ್ತ್ರಂ ಶೃಣ್ವನ್ ತು ತತ್ಕಥಾಶ್ಚ ಹರಿಂ ಸ್ಮರನ್ ।೪೦॥

ಬಹಳ ಆಶ್ಚರ್ಯಕರವಾದ ರೀತಿಯಲ್ಲಿ ಮಠಕ್ಕೆ ಬಂದಿಳಿದ ನನ್ನನ್ನು ನ
ನಮ್ಮವರೆಲ್ಲರೂ ನಡೆದ ಘಟನೆಯ ಕುರಿತಾಗಿ ಪ್ರಶ್ನಿಸಿದರು. ಆಗ ಅವರೆಲ್ಲರಿಗೂ ಗುರು
ಬಂಡೆಗಳ ಮೇಲೆ ಹಾರುತ್ತಾ ಸಾಗುವುದನ್ನು, ಅವರು ನನ್ನ ಮೇಲೆ ಮಾಡಿದ ಅನುಗ
ರೀತಿಯನ್ನು - ಮೊದಲಾದ ಗುರುಗಳ ಗುಣಗಳನ್ನು ವಿವರಿಸಿದೆನು. ಅವುಗಳನ್ನು
ಅವರೆಲ್ಲರೂ ಬಹಳ ಆಶ್ಚರ್ಯಗೊಂಡು ಗುರುಗಳ ಮಹಿಮೆಯನ್ನು ಅನುಸಂ
ಮಾಡಿದರು.

ನಾನಂತೂ ಗುರುಗಳು ನನ್ನ ಮೇಲೆ ಮಾಡಿದ ಅನುಗ್ರಹವನ್ನು, ಅವರು ಬಂಡೆಗ
ಬಂಡೆಗಳಿಗೆ ಹನುಮಂತನಂತೆ ಹಾರಿಕೊಂಡು ಹೋಗುವುದನ್ನು, ಅವರ ಶಿಷ್ಯವಾ
ಮೊದಲಾದ ಗುಣಗಳನ್ನು ಬಾರಿಬಾರಿಗೂ ನೆನಪಿಸಿಕೊಂಡು ಮೆಲುಕು ಹಾಕುತ್ತಾ ಆಶ್ಚ
ಹಾಗೂ ಸಂತೋಷ ಪಡುತ್ತಿದ್ದೆನು. ಉಳಿದ ಸಹಪಾಠಿಗಳೊಂದಿಗೆ ಆ ಅನಂತಮಠ
ಗುರುಗಳು ಬೋಧಿಸಿದ ಶಾಸ್ತ್ರಗಳನ್ನು ಅಧ್ಯಯನ ಮಾಡುತ್ತಾ, ಅವರ ಮಾಹಾತ್ಮ್ಯಗಳ
ಕಥೆಗಳನ್ನು ಕೇಳುತ್ತಾ, ನಿರಂತರ ಶ್ರೀ ಹರಿಯ ಸ್ಮರಣೆಯನ್ನು ಮಾಡುತ್ತಾ ವಾಸ ಮಾಡಿದ

ನಾನಾಪ್ರಾಣಗಣೈರ್ಯುತಂ ನಗವರಂ ಶ್ರೀಮಧ್ವಸಿಂಹೋ ವ್ರಜನ್
ದುರ್ವಾದೀಭವಿದಾರಣೇ ತ್ವತಿಪಟುಃ ನಾರಾಯಣಂ ಸುಂದರಮ್ ।
ನಾನಾಧಾತುವಿಮಿಶ್ರಿತಂ ಹಿಮಮಯಂ ದೃಷ್ಟ್ವಾ ಸ್ಮರನ್ ಮಾನಸೇ
ಶ್ರೀಸೇವ್ಯಂ ವಿಮಲಾಂಬರಂ ಸುಖಕರಂ ಶೇಷಾಂಗಸಂಶಾಯಿನಮ್ ॥ ೪೧

ಸಿಂಹ ಆನೆಗಳನ್ನು ಸಂಹಾರ ಮಾಡುವುದರಲ್ಲಿ ಅತ್ಯಂತ ಸಮರ್ಥವಾದುದು. ಅದ
ಶ್ರೀ ಮಧ್ವಾಚಾರ್ಯರೆನ್ನುವ ಸಿಂಹವೂ ದುರ್ವಾದಿಗಳೆಂಬ ಆನೆಗಳನ್ನು ಸೋಲಿಸುವುದ
ಅತ್ಯಂತ ಸಮರ್ಥರಾಗಿರುವರು. ಹಿಮವತ್ಪರ್ವತದಲ್ಲಿ ಸಿಂಹ, ಹುಲಿ ಮೊದಲಾದ ಪ್ರಾಣಿಗಳ
ಗೈರಿಕ ಮೊದಲಾದ ಧಾತುಗಳಿವೆ. ಅಂತಹ ಪರ್ವತಶ್ರೇಷ್ಠವನ್ನು ನೋಡುತ
ಶ್ರೀಮಧ್ವಾಚಾರ್ಯರು ಊರ್ಧ್ವಬದರಿಗೆ ಪ್ರಯಾಣ ಮಾಡುತ್ತಿದ್ದಾರೆ. ಅವರು ಮನಸ್ಸಿನ
ಶ್ರೀ ಲಕ್ಷ್ಮೀದೇವಿಯಿಂದ ಪೂಜಿತನಾದ, ಪೀತಾಂಬರಧಾರಿಯಾದ, ಸುಂದರನಾದ, ಸುಖವ
ಕರುಣಿಸುವ, ಶೇಷಶಾಯಿಯಾದ, ನಾರಾಯಣನನ್ನು ಸ್ಮರಿಸುತ್ತಿದ್ದಾರೆ.

ಈ ರೀತಿಯಲ್ಲಿ ಶ್ರೀ ಮಧ್ವಾಚಾರ್ಯರ ಊರ್ಧ್ವಬದರಿಯ ಪ್ರಯಾಣದ ಕ್ರಮವನ್
ಅವರ ಅನುಸಂಧಾನದ ರೀತಿಯನ್ನು ಮನಸ್ಸಿನಲ್ಲಿ ಮೆಲುಕುಹಾಕುತ್ತಾ, ಶಾಸ್ತ್ರಪ
ಮೊದಲಾದವುಗಳೊಂದಿಗೆ ನಾನು ಸಹಪಾಠಿಗಳೊಂದಿಗೆ ಅನಂತಮಠದಲ್ಲಿ ವಾಸಮಾಡಿದೆ

ಇತಿ ಶ್ರೀಮತ್ಕವಿಕುಲತಿಲಕ ಶ್ರೀಮತ್ ಪುರುಷೋತ್ತಮ ತೀರ್ಥ ಕರಕಮ
ಸಂಜಾತೇನ ಶ್ರೀಸತ್ಯತೀರ್ಥಯತಿನಾ ವಿರಚಿತೇ ಮಧ್ವವಿಲಾಸೇ ದ್ವಿತೀಯವಿಲಾಸಃ

ತೃತೀಯೋ ವಿಲಾಸ:

ಅಥ ವ್ಯಾಸಾಶ್ರಮಂ ಮಧ್ವೋ ಮುನಿಮಂಡಲಮಂಡಿತಮ್।
ದದರ್ಶ ಫುಲ್ಲನೇತ್ರಾಭ್ಯಾಂ ಹರ್ಷೇಣ ಪರಿಪೂರಿತ: ॥೧॥

ಅನಂತಮಠದಿಂದ ಹೊರಟ ಶ್ರೀಮಧ್ವಾಚಾರ್ಯರು ಊರ್ಧ್ವಬದರಿಯಲ್ಲಿರುವ ವೇದವ್ಯಾಸದೇವರ ಆಶ್ರಮವನ್ನು ತಲುಪಿದರು. ಆ ವ್ಯಾಸಾಶ್ರಮವು ಅನೇಕ ಮುನಿಗಳ ಮೂಹದಿಂದ ಶೋಭಿಸುತ್ತಿತ್ತು. ಅಂತಹ ಆಶ್ರಮವನ್ನು ಶ್ರೀಮಧ್ವಾಚಾರ್ಯರು ಅರಳಿದ ಣ್ಣುಗಳಿಂದ ನೋಡಿದರು. ನೋಡಿ ಆನಂದದಿಂದ ಅವರು ತುಂಬಿ ಹೋದರು.

ಮತ್ತಭ್ರಮರಸಂಘುಷ್ಟಂ ಕೂಜದ್ವಿಹಗಶೋಭಿತಮ್।
ಫಲಪ್ರಸೂನನಿಬಿಡವೃಕ್ಷರಾಜ್ಯೈ: ಸಮನ್ವಿತಮ್ ॥೨॥
ನಾನಾಪ್ರಾಣಿಗಣಾಕೀರ್ಣಂ ನಾನಾಶಬ್ದೋಪಬೃಂಹಿತಮ್।
ವೈಕುಂಠಬುದ್ಧಿಜನಕಂ ಶ್ರೀಮೂರ್ತಿಮಿವ ಚ ಸ್ಥಿತಮ್ ॥೩॥

ಆ ವ್ಯಾಸಾಶ್ರಮದ ಸುತ್ತಲೂ ಅನೇಕ ವಿಧವಾದ ಶ್ರೇಷ್ಠ ಮರಗಳು ಬೆಳೆದು ನಿಂತಿದ್ದವು. ಲವು ಮರಗಳು ಫಲವನ್ನು ಹೊಂದಿದ್ದರೆ; ಕೆಲವು ಮರಗಳು ಹೂವನ್ನು ಹೊಂದಿದ್ದವು. ಆ ರಗಳಲ್ಲಿ ಕುಳಿತ ಹಕ್ಕಿಗಳ ಇಂಚರ ಕೇಳಿ ಬರುತ್ತಿತ್ತು. ಹೂಗಳ ಮಕರಂದವನ್ನು ಆಸ್ವಾದಿಸಲು ದ ದುಂಬಿಗಳ ಝೇಂಕಾರವೂ ಅಲ್ಲಿ ಅನುರಣಿಸುತ್ತಿತ್ತು. ಸಾಕ್ಷಾತ್ ಲಕ್ಷ್ಮೀದೇವಿಯೇ ದು ರೂಪದಿಂದ ಸನ್ನಿಹಿತಳಾಗಿರುವಳೋ ಎಂಬಂತೆ ಇದ್ದ ಆ ಆಶ್ರಮ ಪ್ರದೇಶ ಕುಂಠವೇ ಎನ್ನುವುದಾಗಿ ಜ್ಞಾನವನ್ನುಂಟು ಮಾಡುತ್ತಿತ್ತು. ಇಂತಹ ಶೋಭೆಯಿಂದ ಕೂಡಿದ ವ್ಯಾಸಾಶ್ರಮವನ್ನು ಶ್ರೀಮಧ್ವಾಚಾರ್ಯರು ನೋಡಿ ಬಹಳ ಸಂತೋಷಪಟ್ಟರು.

ತತಸ್ತು, ತ್ವರಯಾ, ಗತ್ವಾ ತು ವ್ಯಾಸಂ ಕೃಷ್ಣಾಜಿನಾಸನೇ ।
ಸಂಸ್ಥಿತಂ ಪ್ರಣನಾಮಾಸೌ ಬಾಷ್ಪಪೂರಿತಲೋಚನಃ ॥೪॥

ಆ ಆಶ್ರಮದ ಎತ್ತರದ ಪ್ರದೇಶದಲ್ಲಿ ಶ್ರೀವೇದವ್ಯಾಸದೇವರು ಕೃಷ್ಣಾಜಿನದ ಮೇಲೆ ಪವಿಶಿತುಕೊಂಡಿದ್ದರು. ಅಂತಹ ವ್ಯಾಸರನ್ನು ಕಂಡ ತಕ್ಷಣ ಶೀಘ್ರವಾಗಿ ಅವರ ಬಳಿಗೆ ಹೋಗಿ ಡಿದ ೀಮಧ್ವಾಚಾರ್ಯರು ಸಾಷ್ಟಾಂಗ ನಮಸ್ಕಾರವನ್ನು ಮಾಡಿದರು. ಆ ಸಮಯದಲ್ಲಿ ರಕಪ ೀಮಧ್ವಾಚಾರ್ಯರ ಕಣ್ಣುಗಳಲ್ಲಿ ಆನಂದಾಶ್ರು ತುಂಬಿಹೋಗಿತ್ತು.

ತಮಾಲಿಂಗ್ಯ ಮುದಾ ವ್ಯಾಸ ಉಪವಿಶ್ಯಾಸನೇ ಪರೇ।
ಗೃಹೀತ್ವಾ ಪಾಣಿನಾ ಪಾಣಿಂ ಚಕ್ರತುರ್ಭಾಷಣಂ ಮಿಥಃ ॥

ತಮ್ಮ ಬಳಿಗೆ ಬಂದು ನಮಸ್ಕರಿಸಿದ ಶ್ರೀ ಮಧ್ವಾಚಾರ್ಯರನ್ನು ಶ್ರೀ ವೇ ದೇವರು ವಾತ್ಸಲ್ಯದಿಂದ ಮಂದಹಾಸ ಬೀರುತ್ತಾ ತನ್ನ ಕೈಯಿಂದ ಅವರ ಕೈಯನ್ನು ಮೇಲಕ್ಕೆ ಎಬ್ಬಿಸಿ ಗಾಢವಾಗಿ ಆಲಿಂಗಿಸಿದರು. ತಾನು ಶ್ರೇಷ್ಠವಾದ ಆಸನದಲ್ಲಿ ಕುಳಿತು ತಮ್ಮ ಪಕ್ಕದಲ್ಲಿಯೇ ಇನ್ನೊಂದು ಆಸನದಲ್ಲಿ ಕುಳಿತುಕೊಳ್ಳಲು ಶ್ರೀಮಧ್ವಾಚಾ ಶ್ರೀವೇದವ್ಯಾಸರು ಹೇಳಿದರು. ಅವರ ಆಜ್ಞೆಯಂತೆ ಶ್ರೀಮಧ್ವಾಚಾ ಕುಳಿತುಕೊಂಡರು. ನಂತರ ಅವರಿಬ್ಬರೂ ಪರಸ್ಪರ ಸಂಭಾಷಣೆಯನ್ನು ನಡೆಸಿದರು.

(ಶ್ರೀಮಧ್ವಾಚಾರ್ಯರು ಊರ್ಧ್ವಬದರಿಯಲ್ಲಿ ಶ್ರೀವೇದವ್ಯಾಸರ ವಾಸಮಾಡಿರುವಾಗ ಇತಿಹಾಸ, ಪುರಾಣ, ಪಂಚರಾತ್ರ, ವೇದ ಇವುಗಳ ಅರ್ಥವನ್ನು ಅವರಿಂದ ಶ್ರವಣಮಾಡಿದರು. ಶ್ರೀಮಧ್ವಾಚಾರ್ಯರು ಮೊದಲೇ ಜ್ಞಾನಪೂ ರಾಗಿದ್ದರೂ ಮತ್ತಷ್ಟು ಜ್ಞಾನವಿಶೇಷವನ್ನು ಶ್ರೀ ವೇದವ್ಯಾಸರಿಂದ ಸ್ವೀಕರಿಸಿದರು.)

ಆಗತಂ ಮುನಿಮಾಲೋಕ್ಯ ಮೇನಿರೇ ಚತುರಾನನಮ್।
ತದ್ಗುಣಂ ಚ ಮುನಿಶ್ರೇಷ್ಠಾಃ ಪ್ರೀತಾ ಆಸನ್ ಸುವಿಸ್ಮಿತಾಃ ॥

ಆ ಬದರಿಕಾಶ್ರಮದಲ್ಲಿ ಶ್ರೀವೇದವ್ಯಾಸರ ಬಳಿಯಲ್ಲಿ ಅನೇಕ ಶಿಷ್ಯರು ಮಾಡಿಕೊಂಡಿದ್ದರಷ್ಟೇ, ಅವರೆಲ್ಲರೂ ಆ ಆಶ್ರಮಕ್ಕೆ ಆಗಮಿಸಿದ ಶ್ರೀ ಮಧ್ವಾಚಾ 32 ಲಕ್ಷಣಭರಿತವಾದ ದೇಹವನ್ನು ನೋಡಿ ಸಾಕ್ಷಾತ್ ಬ್ರಹ್ಮ ದೇವರೇ ಆಶ್ರ ಬಂದಿರಬೇಕೆಂದು ತಿಳಿದುಕೊಂಡರು. ಅವರು ತೋರಿಸಿದ ಗುರುಭಕ್ತಿ ಮೊದ ಗುಣಗಳನ್ನು ಮತ್ತು ಅವರಲ್ಲಿ ಶ್ರೀ ವೇದವ್ಯಾಸರು ತೋರಿಸಿದ ವಾತ್ಸಲ್ಯಾದಿ ಗುಣಗ ನೋಡಿ ಬಹಳ ಆಶ್ಚರ್ಯಗೊಂಡರು.

ಕದಾಚಿತ್ ವ್ಯಾಸ ಸಹಿತಃ ಪ್ರಾಪ್ಯ ನಾರಾಯಣಾಶ್ರಮಮ್।
ನಮಸ್ಕೃತ್ಯೋಪವಿಶ್ಯಾಥ ಭಾಷಣಂ ಚಕ್ರಿರೇ ಮುದಾ ॥ ೭

ಒಮ್ಮೆ ಶ್ರೀಮಧ್ವಾಚಾರ್ಯರು ಶ್ರೀವೇದವ್ಯಾಸದೇವರೊಡನೆ ಇನ್ನೊಂದು ಬ ಕ್ಷೇತ್ರಕ್ಕೆ ಪ್ರಯಾಣ ಮಾಡಿದರು. ಅಲ್ಲಿ ವೇದವ್ಯಾಸರ ಇನ್ನೊಂದು ರೂಪವ ನಾರಾಯಣರೂಪ ಸನ್ನಿಹಿತವಾಗಿರುವುದು. ಅಂತಹ ಕ್ಷೇತ್ರವನ್ನು ತಲುಪಿ ಅಲ್ಲಿ ನಾರಾಯಣನಿಗೆ ನಮಸ್ಕರಿಸಿದರು. ನಾರಾಯಣ ದೇವರ ಆಜ್ಞೆಯಂತೆ ಆಸನದಲ್ಲಿ ಕುಳಿ

ಏಕಾಂತದಲ್ಲಿ ಶ್ರೀ ವೇದವ್ಯಾಸರು, ಶ್ರೀ ನಾರಾಯಣ ದೇವರು ಮತ್ತು ಮಧ್ವಾಚಾರ್ಯರು ಪರಸ್ಪರ ಸಂಭಾಷಣೆಗಳನ್ನು ನಡೆಸಿದರು.

ವ್ಯಾಸಂ ವೀಕ್ಷ್ಯಾಬ್ರವೀತ್ ಮಧ್ವಂ ದೇವೋ ನಾರಾಯಣೋ ವಿಭುಃ।
ಕುರು ಭಾಷ್ಯಂ ಚ ಸೂತ್ರಾಣಾಂ ವಿಮಲೀ ಕುರು ಸಜ್ಜನಮ್ ॥೮॥

ಸರ್ವಸಮರ್ಥರಾದ ನಾರಾಯಣದೇವರು ವೇದವ್ಯಾಸರ ಮುಖವನ್ನು ಒಮ್ಮೆ ನೋಡಿ ಮಧ್ವಾಚಾರ್ಯರಿಗೆ ಆಜ್ಞೆ ಮಾಡಿದರು. ''ಮಧ್ವಾಚಾರ್ಯರೇ! ಶ್ರುತಿಸ್ಮೃತಿಗಳ ನಿಜವಾದ ಅಭಿಪ್ರಾಯವನ್ನು ದೂಷಿಸುವ ರೀತಿಯಲ್ಲಿ ದುರ್ವಾದಿಗಳು ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ಬರೆದಿದ್ದಾರೆ. ಇದರಿಂದಾಗಿ ಸಜ್ಜನರಿಗೆ ವೇದವ್ಯಾಸರ ಅಭಿಪ್ರಾಯ ತಿಳಿಯದಂತಾಗಿದೆ. ಆದ್ದರಿಂದ ನೀವು ಮೊದಲಿಗೆ ವೇದವ್ಯಾಸರು ರಚಿಸಿದ ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ಬರೆಯಿರಿ. ಈ ಕಾರ್ಯ ವೇದವ್ಯಾಸರಿಗೂ ಸಮ್ಮತವಾದುದೇ. ನಾನೂ ಸಹ ನಿರ್ಣಯಿಸಿಯೇ ಈ ಮಾತನ್ನು ಹೇಳುತ್ತಿದ್ದೇನೆ. ಅದನ್ನು ಮಾಡುವುದರಿಂದ ಜನರಿಗೆ ಬ್ರಹ್ಮಸೂತ್ರಗಳ ನಿಜವಾದ ಅಭಿಪ್ರಾಯ ತಿಳಿಯುವಂತಾಗಿ ಅವರ ಮನಸ್ಸು ಕಲಿಮಲದಿಂದ ರಹಿತವಾಗುವುದು. ಆದ್ದರಿಂದ ಭಾಷ್ಯಗ್ರಂಥವನ್ನು ಅವಶ್ಯವಾಗಿ ನೀವು ಬರೆಯಬೇಕು.''

ತಚ್ಛ್ರುತ್ವಾ ವ್ಯಾಸದೇವೋಽಪಿ ಯಥಾಕಾರ್ಯಮಿತಿ ಪ್ರಭುಮ್।
ತಥಾ ಬಾಢಮಿತಿ ಸ್ಮಾಹ ಪೂರ್ಣಪ್ರಜ್ಞಃ ಸ್ಮಯನ್ ಸ್ವಯಮ್ ॥೯॥
ಇತಿ ಸಂಭಾಷಣಂ ಕೃತ್ವಾ ರೇಜಿರೇ ಭೂತಲೇ ತದಾ।
ವ್ಯಾಸನಾರಾಯಣೌ ಮಧ್ವಸ್ತ್ರಯೋ ವಹ್ನಿಪ್ರಭಾ ಅಪಿ ॥೧೦॥

ನಾರಾಯಣದೇವರ ಮಾತನ್ನು ಕೇಳಿ ಶ್ರೀವೇದವ್ಯಾಸದೇವರೂ ಸಹ ಭಾಷ್ಯ ಗ್ರಂಥ ರಚನೆಯಲ್ಲಿ ಅತ್ಯಂತ ಸಮರ್ಥರಾದ ಶ್ರೀಮಧ್ವಾಚಾರ್ಯರನ್ನು ಕುರಿತು '' ನಾರಾಯಣ ದೇವರು ಆಜ್ಞೆಯನ್ನು ಮಾಡಿದಂತೆ ನೀವು ಅವಶ್ಯವಾಗಿ ಭಾಷ್ಯಗ್ರಂಥವನ್ನು ರಚಿಸಿ' ಎಂದು ಆಜ್ಞೆಯಿತ್ತರು.

ಅದಕ್ಕೆ ಶ್ರೀಮಧ್ವಾಚಾರ್ಯರು ದುರ್ಜನ ಮೋಹದ ದೃಷ್ಟಿಯಿಂದ 'ತಾನು ಹೋಗುವುದಿಲ್ಲವೆಂದೂ ಇಲ್ಲೇ ಇರುತ್ತೇನೆ' ಎಂದೂ ಹೇಳಿದರು. ಹೀಗೆ ಪೂರ್ಣಪ್ರಜ್ಞರು ನಾರಾಯಣ ವೇದವ್ಯಾಸದೇವರೊಂದಿಗೆ ಸಂಭಾಷಣೆಯನ್ನು ನಡೆಸುತ್ತಾ ಭಾಷ್ಯಗ್ರಂಥದ ರಚನೆಗೆ ಒಪ್ಪಿಕೊಂಡರು. ಹೀಗೆ ಆ ಬದರಿಕಾಶ್ರಮದಲ್ಲಿ ಮೂವರೂ ಆಹವನೀಯ, ದಕ್ಷಿಣಾಗ್ನಿ, ಗಾರ್ಹಪತ್ಯ - ಈ ಮೂರು ಅಗ್ನಿಯ ಪ್ರಭೆಗಳಂತೆ ಶೋಭಿಸಿದರು. ಆ ರೀತಿಯಲ್ಲಿ ಸಂಭಾಷಣೆಯನ್ನು ನಡೆಸಿ ಸಂತೋಷಪಟ್ಟರು.

ಅಥ ಗಂತುಂ ಚೋದಯಂತಂ ನಾರಾಯಣಮ್ ಅಮಂದಧೀಃ ।
ಪ್ರಣಮ್ಯ ಭಕ್ತ್ಯಾ ತದ್ಯುಕ್ತೋ ಯಯೌ ವ್ಯಾಸಾಶ್ರಮಂ ಪ್ರತಿ ॥೧

ನಂತರ ಶ್ರೀನಾರಾಯಣ ದೇವರು ಆನಂದ ತೀರ್ಥರಿಗೆ ನಾರಾಯಣಾಶ್ರ ಮರಳಲು ಪ್ರೇರೇಪಿಸಿದರು. ಅವರ ಆಜ್ಞೆಯಂತೆ ಶ್ರೀಮಧ್ವಾಚಾರ್ಯರು ಅವರಿಗೆ ನಮ ಶ್ರೀ ವೇದವ್ಯಾಸದೇವರೊಂದಿಗೆ ಅಲ್ಲಿಂದ ಹೊರಟರು.

ತತ್ರಾಪಿ ತತ್ಸಕಾಶಾಚ್ಚ ಶ್ರಾವ್ಯಂ ಶ್ರುತ್ವಾ ತು ಭಕ್ತಿತಃ ।
ನಮಸ್ಕೃತ್ಯ ಮುಹುರ್ಮೂರ್ಧ್ನಾ ಪ್ರಾಪ್ಯಾನುಜ್ಞಾಂ ಜಗಾಮ ಸಃ ॥೧

ವೇದವ್ಯಾಸರ ಆಶ್ರಮವನ್ನು ತಲುಪಿ ಶ್ರೀಮಧ್ವಾಚಾರ್ಯರು ಅವರ ಬಳಿ ಭಕ್ತಿಪರವಶರಾಗಿ ಕೇಳಬೇಕಾದ್ದುದೆಲ್ಲವನ್ನು ಕೇಳಿದರು. ಶ್ರೀವೇದವ್ಯಾಸರ ಮನೋಗ ಅರಿತು, ಅವರಿಗೆ ಮತ್ತೊಮ್ಮೆ ನಮಸ್ಕರಿಸಿ, ಅವರ ಅನುಜ್ಞೆಯನ್ನು ಪಡೆದು ಅ ಅನಂತಮಠಕ್ಕೆ ಪ್ರಯಾಣ ಬೆಳೆಸಿದರು.

ತತ ಆಗತ್ಯ ತದ್ದೇಶಾತ್ ನತ್ವಾ ನಾರಾಯಣಂ ಮುನಿಃ।
ಅನಂತಾಖ್ಯಮಠೇ ವೀಕ್ಷ್ಯ ಸ್ವಜನಾನ್ ತೈರ್ನಮಸ್ಕೃತಃ ॥೧

ವ್ಯಾಸಾಶ್ರಮದಿಂದ ಹೊರಟ ಶ್ರೀಮಧ್ವಾಚಾರ್ಯರು ನಾರಾಯಣನನ್ನು ಧ್ಯಾನಿ ಅನಂತಮಠದಲ್ಲಿದ್ದ ತನ್ನ ಶಿಷ್ಯರನ್ನು ಕಂಡರು. ಗುರುಗಳನ್ನು ಕಂಡ ತಕ್ಷಣ ಶಿಷ್ಯರ ಗುರುಗಳಿಗೆ ನಮಸ್ಕಾರವನ್ನು ಮಾಡಿದರು.

ತತ ಆಪೃಚ್ಛ್ಯ ಕುಶಲಂ ಸ್ವಜನಾನಾಂ ಕೃಪಾನಿಧಿಃ।
ಅಬ್ರವೀಚ್ಚ ಸ್ವಯಂ ಸರ್ವಂ ಸ್ವವೃತ್ತಾಂತಂ ಹರಿಂ ಸ್ಮರನ್ ॥೧

ದಯಾನಿಧಿಗಳಾದ ಶ್ರೀಮಧ್ವಾಚಾರ್ಯರು ತನಗೆ ನಮಸ್ಕರಿಸಿದ ಶಿಷ್ಯರ ಕುಶಲ ವಿಚಾರಿಸಿದರು. ತಾವೇ ವ್ಯಾಸಾಶ್ರಮಕ್ಕೆ ತೆರಳಿದ್ದು; ಅಲ್ಲಿಂದ ನಾರಾಯಣಾಶ್ರ ಹೋದದ್ದು; ಅಲ್ಲಿ ಸಂಭಾಷಣೆಯನ್ನು ನಡೆಸಿದ್ದು- ಇತ್ಯಾದಿ ನಡೆದ ಎಲ್ಲಾ ವೃತ್ತಾಂತ ಭಗವಂತನನ್ನು ಸ್ಮರಿಸುತ್ತಾ ಶಿಷ್ಯರಿಗೆ ವಿವರಿಸಿದರು.

ತಚ್ಛ್ರುತ್ವಾ ಸ್ಮ ವಯಂ ಸರ್ವೇ ಪತಿತಾಃ ಸುಖವಾರಿಧೌ।
ತನ್ಮುಖಾಂಭೋಜನಿರ್ವೃತ್ತಂ ಪಿಬಂತೋ ವಾಗ್ರಸಂ ಸದಾ ॥೧

ಗುರುಗಳು ವರ್ಣಿಸಿದ ವೃತ್ತಾಂತವನ್ನು ನಾವೆಲ್ಲ ಮೈಯೆಲ್ಲ ಕಿವಿಯಾಗಿ

ಆನಂದಸಾಗರದಲ್ಲಿ ಮುಳುಗಿಬಿಟ್ಟೆವು. (ಅಪಾರವಾದ ಆನಂದ ನಮಗೆ ಉಂಟಾಯಿತು.) ಗುರುಗಳ ಮುಖವೆಂಬ ಕಮಲದಿಂದ ಹೊರಬರುತ್ತಿದ್ದ ಮಾತೆನ್ನುವ ಪುಷ್ಪರಸವನ್ನು ಯಾವಾಗಲೂ ಸೇವಿಸುತ್ತಾ ನಾವು ಆ ಅನಂತಮಠದಲ್ಲಿ ಕಾಲವನ್ನು ಕಳೆದೆವು.

ನಿವಸನ್ ತತ್ರ ಮಧ್ವೋಽಪಿ ಹರೇರಾಜ್ಞಾನುಸಾರತಃ ।
ಶ್ರುತ್ಯಾದಿವಚನೈರ್ಯುಕ್ತಂ ನಿರ್ದುಷ್ಟಂ ಸಕಲಾರ್ಥದಮ್ ॥ ೧೭ ॥
ದುರ್ವಾದಿಕೃತಭಾಷ್ಯಾಣಾಂ ದೂಷಕಂ ಗುಣಸಾಧಕಮ್ ।
ಅದೂಷ್ಯಂ ಬ್ರಹ್ಮಸೂತ್ರಾಣಾಂ ಭಾಷ್ಯಂ ಕೃತ್ವಾ ಮಹಾಮತಿಃ ॥ ೧೭ ॥
ಗಂಗಾದಿಸ್ನಾನಜಾತ್ ಪುಣ್ಯಾದ್ ಅಧಿಕಂ ಫಲದಂ ಚ ತತ್ ।
ದಯಾಂ ಕುರ್ವನ್ ಮಯಿ ಪ್ರೇಮ್ಣಾ (ಪ್ರೀತ್ಯಾ) ಮಯ್ಯೆವಾಲೇಖಯತ್‌ಖಲು ॥ ೧೮ ॥

ಆ ಅನಂತಮಠದಲ್ಲಿ ಶ್ರೀಮಧ್ವಾಚಾರ್ಯರು ವಾಸಮಾಡುತ್ತಾ ನಾರಾಯಣ ರೂಪಿಯಾದ ಶ್ರೀಹರಿಯ ಆಜ್ಞೆಗೆ ಅನುಸಾರವಾಗಿ ಶ್ರೀವೇದವ್ಯಾಸರ ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ರಚಿಸಿದರು. ಆ ಬ್ರಹ್ಮಸೂತ್ರಭಾಷ್ಯಗ್ರಂಥವಾದರೂ ಅನೇಕ ಶ್ರುತಿ ಮೊದಲಾದ ಪ್ರಮಾಣವಾಕ್ಯಗಳಿಂದ ಕೂಡಿದೆ; ಯಾವುದೇ ದೋಷಗಳಿಂದ ರಹಿತವಾಗಿದೆ; ಅನೇಕ ಅರ್ಥಗಳನ್ನು ಒಳಗೊಂಡಿರುವಂತಹದ್ದು; ಬ್ರಹ್ಮಸೂತ್ರಗಳಿಗೆ ದುರ್ವಾದಿಗಳು ಮಾಡಿದ ಭಾಷ್ಯಗ್ರಂಥವನ್ನು ಖಂಡಿಸುವಂತಹದ್ದು; ಭಗವಂತನಲ್ಲಿ ಅನಂತ ಗುಣಗಳಿವೆ ಎಂದು ಪ್ರತಿಪಾದಿಸುವುದರ ಮೂಲಕ ನಿರ್ದೋಷತ್ವಾದಿಗಳನ್ನು ಸಾಧಿಸಿ ಭಗವಂತನ ಸ್ವರೂಪವನ್ನು ತೋರಿಸಿಕೊಡುವಂತಹದು; ಯಾರೂ ಸಹ ಯಾವಾಗಲೂ ದೂಷಿಸಲು ಸಾಧ್ಯವಿಲ್ಲದೇ ಇರುವಂತಹದ್ದು ಆಗಿದೆ.

ಗಂಗಾನದಿಯ ಸ್ನಾನವೇ ಬಹಳ ಪುಣ್ಯಜನಕವಾದುದು. ಆದರೆ ಅದಕ್ಕಿಂತಲೂ ಹೆಚ್ಚಿನ ಪುಣ್ಯವನ್ನು ಈ ಭಾಷ್ಯಗ್ರಂಥದ ಲೇಖನ ಮೊದಲಾದವು ತಂದುಕೊಡುವಂತಹದ್ದಾಗಿದೆ. ಅಂತಹ ಭಾಷ್ಯಗ್ರಂಥವನ್ನು ನನ್ನ ಮೇಲಿನ ವಿಶೇಷ ಕರುಣೆಯಿಂದ ಗುರುಗಳು ನನ್ನ ಕೈಯಿಂದಲೇ ಬರೆಯಿಸಿದರು.

(ಶ್ರೀಮಧ್ವಾಚಾರ್ಯರ ಭಾಷ್ಯಗ್ರಂಥದ ಒಂದೊಂದು ಅಕ್ಷರವನ್ನು ಶ್ರದ್ಧೆಯಿಂದ ಬರೆಯುವವನು ಗಂಗಾನದಿಯ ತರಂಗಗಳು ಅಪ್ಪಳಿಸುವ ತೀರ ಪ್ರದೇಶದಲ್ಲಿ ಶ್ರೀ ಹರಿಯ ಮಂದಿರವನ್ನು ನಿರ್ಮಿಸುವ ಪುಣ್ಯಶಾಲಿಗೆ ಸಮನಾಗುವನು-ಎಂಬುದಾಗಿ ಭಾಷ್ಯಗ್ರಂಥದ ಲೇಖನದ ಹಿರಿಮೆ 'ಸುಮಧ್ವವಿಜಯ'ದಲ್ಲಿ ಬಂದಿದೆ.)

ತತೋ ಜ್ಯೇಷ್ಠಯತೇರ್ಭಾಷ್ಯಂ ಗುರುಯುಕ್ತಸ್ಯ ಚೈವ ತತ್ ।
ಪ್ರೇಷಯಿತ್ವಾಥ ಸರ್ವೇಷಾಂ ಶ್ರಾವಯಾಮಾಸ ನೋ ಮುದಾ ॥ ೧೯

ನನ್ನ ಕೈಯಿಂದ ಬರೆಯಿಸಿದ ಮೇಲೆ ಭಾಷ್ಯಗ್ರಂಥವನ್ನು (ಗ್ರಂಥದ ಒಂದ ಪ್ರತಿಯನ್ನು) ಉಡುಪಿಕ್ಷೇತ್ರಕ್ಕೆ ಗುರುಗಳು ಕಳುಹಿಸಿದರು. ಯಾಕೆಂದರೆ ಉಡುಪಿಯಲ್ಲಿ ಆವಾಗ ಗುರುಗಳ ಗುರುಗಳಾದ ಶ್ರೀ ಅಚ್ಯುತಪ್ರೇಕ್ಷತೀರ್ಥರು ಮತ್ತು ಆಶ್ರಮಜ್ಯೇಷ್ಠ ಯತಿಗಳಾದ ಶ್ರೀಪುರುಷೋತ್ತಮತೀರ್ಥರು ಇದ್ದರು. ಅವರಿಬ್ಬರೂ ಸಹ ಗ್ರಂಥವನ್ನು ಅವಲೋಕಿಸಬೇಕೆಂಬ ಉದ್ದೇಶದಿಂದ ಗುರುಗಳು ಕಳುಹಿಸಿಕೊಟ್ಟರು. ಅನಂತಮಠದಲ್ಲಿಯೇ ಇರುವಾಗ ನಮಗೆಲ್ಲರಿಗೂ ಸಹ ಗುರುಗಳೇ ಬ್ರಹ್ಮಸೂತ್ರಭಾಷ್ಯ ಗ್ರಂಥದ ಪಾಠವನ್ನೂ ಮಾಡಿದರು.

ಉತ ದೇವಂ ನಮಸ್ಕೃತ್ಯ ತತೋ ದೇಶಾಂತರಂ ಯಯೌ ।
ಸರ್ವಶಿಷ್ಯೈಃ ಪರಿವೃತಃ ಪೂರ್ಣಪ್ರಜ್ಞೋ ದಯಾನಿಧಿಃ ॥ ೨೦ ॥

ದಯಾನಿಧಿಗಳಾದ ಶ್ರೀಮಧ್ವಾಚಾರ್ಯರು ಅನಂತಮಠದಲ್ಲಿ ಶ್ರೀ ವೇದವ್ಯಾಸದೇವರನ್ನು ನಮಸ್ಕರಿಸಿ, ಅಲ್ಲಿಂದ ತಮ್ಮ ಶಿಷ್ಯರ ಜೊತೆಯಲ್ಲಿ ಮತ್ತೊಂದು ಪ್ರದೇಶಕ್ಕೆ ಹೊರಟು ಹೋದರು.

ಬಹುದೇಶಾನ್ ಚರನ್ ಮರ್ತ್ಯಾನ್ ಭಕ್ತಿವೈರಾಗ್ಯಸಂಯುತಾನ್ ।
ವೀಕ್ಷ್ಯ ಮಧ್ವಃ ಶ್ರಾವಯಿತ್ವಾ ಭಾಷ್ಯಂ ಯೋಗ್ಯಾನ್ ಸ್ವಭಾವತಃ ॥ ೨೧ ॥
ಗೋದಾತೀರೇ ವಿನಿರ್ಜಿತ್ಯ ತತ್ರತ್ಯಾನ್ ಪಂಡಿತಾನ್ ಬಹೂನ್ ।
ಸ್ಥಿತಂ ಮಧ್ವಂ ದ್ವಿಜಃ ಕಶ್ಚಿದ್‌ಆಯಯೌ ಶೋಭನಾಹ್ವಯಃ ॥ ೨೨ ॥

ಶಿಷ್ಯರ ಜೊತೆಯಲ್ಲಿ ಗುರುಗಳು ಅನೇಕ ದೇಶಗಳಲ್ಲಿ ಸಂಚಾರ ಮಾಡಿದರು. ತಾವು ಹೋದಲ್ಲೆಲ್ಲಾ ಯಾರು ಭಗವಂತನಲ್ಲಿ ಭಕ್ತಿ ಉಳ್ಳವರೋ; ಲೌಕಿಕ ವಿಷಯದಲ್ಲಿ ವೈರಾಗ್ಯ ತಾಳಿರುವವರೋ; ಅಂತಹ ಸ್ವಭಾವತಃ ಯೋಗ್ಯಮನುಷ್ಯರಿಗೆ ಬ್ರಹ್ಮಸೂತ್ರಭಾಷ್ಯಗ್ರಂಥದ ಪಾಠವನ್ನು ಮಾಡುತ್ತಿದ್ದರು. ಹೀಗೆ ಯೋಗ್ಯಜನರನ್ನು ಶ್ರೀ ಮಧ್ವಾಚಾರ್ಯರು ತತ್ವಜ್ಞಾನಿಗಳನ್ನಾಗಿ ಮಾಡಿದರು.

ಹೀಗೆ ಪ್ರಯಾಣ ಮಾಡುತ್ತಾ ಶ್ರೀ ಮಧ್ವಾಚಾರ್ಯರು ಗೋದಾವರೀನದಿಯ ತೀರಕ್ಕೆ ಆಗಮಿಸಿದರು. ಅಲ್ಲಿ ನಡೆಯುತ್ತಿದ್ದ ಸಭೆಗೆ ಋಗ್ವೇದ ಮೊದಲಾದ ವೇದಗಳಲ್ಲಿರುವ ಹದಿನೆಂಟು ಶಾಖೆಗಳಲ್ಲಿ ನಿಷ್ಣಾತರಾದ ಪಂಡಿತರು ಸಂಭಾವನೆಯನ್ನು ಪಡೆಯಲು ಬಂದಿದ್ದರು. ಆ ಸಭೆಗೆ ಶ್ರೀ ಮಧ್ವಾಚಾರ್ಯರೂ ಪ್ರವೇಶ ಮಾಡಿದರು. ಅಲ್ಲಿದ್ದ ಆ ಪಂಡಿತರು ಅನೇಕ

ಗಳಲ್ಲಿರುವ ಅನೇಕ ಶ್ರುತಿಗಳ ವಿಷಯದಲ್ಲಿ ಮಧ್ವಾಚಾರ್ಯರಿಗೆ ಪ್ರಶ್ನೆಗಳನ್ನು ದರು. ಅವರು ಕೇಳಿದ ಶ್ರುತಿಗಳನ್ನು ಶ್ರೀಮಧ್ವಾಚಾರ್ಯರು ಶಬ್ದತಃ ಮತ್ತು ಅರ್ಥತಃ ಸಿದರು. ಅಲ್ಲದೆಯೇ ಭಾಟ್ಟ, ಪ್ರಾಭಾಕರ, ವೈಶೇಷಿಕ, ನೈಯಾಯಿಕ, ಬೌದ್ಧ, ಚಾರ್ವಾಕ ವ ಆರು ದರ್ಶನಗಳ ಸಿದ್ಧಾಂತವನ್ನು ಶ್ರೀಮಧ್ವಾಚಾರ್ಯರು ಖಂಡಿಸಿದರು. ವಿವಿಧ ಗಳಲ್ಲಿ ಎಲ್ಲ ಪಂಡಿತರು ಒಟ್ಟಾಗಿ ಪ್ರಶ್ನಿಸಿದಾಗಲೂ ಮಧ್ವಾಚಾರ್ಯರು ಉತ್ತರವನ್ನು ತಮ್ಮ ಸರ್ವಜ್ಞತೆಯನ್ನು ಅಲ್ಲಿ ಪ್ರಕಟಪಡಿಸಿದರು.

ಹೀಗೆ ಎಲ್ಲದರಲ್ಲೂ ಜಯಶಾಲಿಗಳಾಗಿದ್ದ ಮಧ್ವಾಚಾರ್ಯರ ಬಳಿಗೆ 'ಶೋಭನ' ವ ಹೆಸರುಳ್ಳ ಒಬ್ಬ ಬ್ರಾಹ್ಮಣ ವಿದ್ವಾಂಸರು ಬಂದರು.

(ಈ ಶೋಭನಭಟ್ಟರು ಸಾಮಾನ್ಯ ಪಂಡಿತರಾಗಿರಲಿಲ್ಲ. ವೇದಗಳಿಗೆ ಸಂಬಂಧಿಸಿದ ಸಿದ್ಧಾಂತಗಳನ್ನು ನಿರ್ಣಯಿಸಿ ಹೇಳುವ ಸಾಮರ್ಥ್ಯ ಇವರಲ್ಲಿತ್ತು. ಆ ಕಾಲದಲ್ಲಿ ಲಿತವಾಗಿದ್ದ ಭಾಟ್ಟ ಮೊದಲಾದ ಮತಗಳನ್ನು ಖಂಡಿಸುವ ತರ್ಕಕೋವಿದರಾಗಿದ್ದರು. ದ, ಮಹಾಭಾರತ ಗ್ರಂಥಗಳಲ್ಲಿ ಹೇಳಲ್ಪಟ್ಟ ಆಚಾರ ಮತ್ತು ಉಪಾಸನೆಗಳಲ್ಲಿ ರಾಗಿದ್ದರು. ಆದ್ದರಿಂದಲೇ 'ಸರ್ವಶ್ರೇಷ್ಠ' ಎನ್ನುವ ಬಿರುದಿಗೆ ಪಾತ್ರರಾಗಿದ್ದರು. ಅಂತಹ ೀಭನಭಟ್ಟರು ಶ್ರೀ ಮಧ್ವಾಚಾರ್ಯರ ಪಾಂಡಿತ್ಯಕ್ಕೆ ತಲೆದೂಗಿ ಅವರ ಬಳಿಗೆ ಬಂದರು.

ನಮಸ್ಕೃತಸ್ತಂ ದೃಷ್ಟ್ವಾತು ಯೋಗ್ಯಂ ಮತ್ವಾ ಮಹಾಮತಿಃ ।
ಭಾಷ್ಯಂ ದದೌ ತಸ್ಯ ಸೋಽಪಿ ಭಕ್ತ್ಯಾ ವವ್ರೇ ಸುಬುದ್ಧಿಮಾನ್ ॥ ೨೩ ॥

ಶ್ರೀ ಮಧ್ವಾಚಾರ್ಯರ ಬಳಿಗೆ ಬಂದ ಆ ಶೋಭನಭಟ್ಟರು ಅವರಿಗೆ ಸಾಷ್ಟಾಂಗ ಾಮಗಳನ್ನು ಮಾಡಿದರು. ಇವರು ಸ್ವಭಾವತಃ ಯೋಗ್ಯರು ಎಂದು ಗುರುಗಳು ಆಲೋಚಿಸಿ ರಿಗೆ ತಾವು ಬರೆದ ಭಾಷ್ಯಗ್ರಂಥವನ್ನು ನೀಡಿದರು. ಗುರುಗಳ ವಿಷಯದಲ್ಲಿ ಒಳ್ಳೆಯ ಗೌರವ ವನೆಯುಳ್ಳ ಆ ಶೋಭನಭಟ್ಟರು ಮಹಾನುಗ್ರಹವೆಂದು ಅದನ್ನು ಭಕ್ತಿಯಿಂದ ಸ್ವೀಕರಿಸಿದರು.

(ಶೋಭನಭಟ್ಟರು ಉಳಿದ ಗ್ರಂಥಗಳನ್ನೂ ಅವಲೋಕಿಸಿದ ಪಂಡಿತರಾಗಿದ್ದರು. ರುಗಳ ಮುಖದಿಂದಲೇ ಭಾಷ್ಯದ ಶ್ರವಣವನ್ನು ಮಾಡಿಸಿಕೊಂಡ ನಂತರ ಅವರಿಗೆ ಉಳಿದ ಷ್ಯಗ್ರಂಥಗಳು ಸ್ವಲ್ಪವೂ ಹಿಡಿಸಲಿಲ್ಲ. ಮುಂದೆ ಅಲ್ಲಲ್ಲಿ ನಡೆಯುತ್ತಿದ್ದ ವಿದ್ವತ್ ಸಭೆಗಳಲ್ಲಿ ೀ ಮಧ್ವಾಚಾರ್ಯರ ಸಿದ್ಧಾಂತದಲ್ಲಿರುವ ಯುಕ್ತಿಗಳ ಆಧಾರದಿಂದ ದುರ್ವಾದಗಳನ್ನು ಂಡಿಸುತ್ತಾ, ತತ್ವವಾದವನ್ನು ಆ ಪ್ರದೇಶದ ಸುತ್ತಮುತ್ತ ವಿಶೇಷವಾಗಿ ಪ್ರಚಾರ ಮಾಡಿದರು.)

ಏವಂ ಕಾಂಶ್ಚಿದ್ ದ್ವಿಜಾನ್ ಅಜ್ಞಾನ್ ಚಕ್ರೇ ಸುಜ್ಞಾನ್ ಅಮಂದಧೀಃ ।
ನಮಂತಂ ಲೋಕಶಿಕ್ಷಾರ್ಥಂ ಪೂರ್ಣಪ್ರಜ್ಞಂ ಮುನೀಶ್ವರೌ ॥ ೨೪ ॥

ದೃಷ್ಟ್ವಾಽಲಿಂಗ್ಯಾಥ ತದ್ವಾರ್ತಾಂ ಶ್ರುತ್ವಾ ಚ ಮುದಮಾಪತುಃ ।
ತತೋ ಭಾಷ್ಯಾದಿಕಂ ಶ್ರುತ್ವಾ ತೌ ಮೋಹಂ ಜಹತುರ್ಮುನೇಃ ॥ ೨೫ ॥

ಶೋಭನಭಟ್ಟರಂತೆಯೇ ಅಲ್ಲಲ್ಲಿ ಅನೇಕ ಬ್ರಾಹ್ಮಣರು ತತ್ವಜ್ಞಾನರಹಿತರಾಗಿದ್ದರು. ಅಲ್ಲೆಲ್ಲ ಪ್ರದೇಶಗಳಿಗೂ ಶ್ರೀಮಧ್ವಾಚಾರ್ಯರು ಪ್ರಯಾಣದ ಸಮಯದಲ್ಲಿ ಹೋ ಅವರಿಗೆ ತತ್ವಜ್ಞಾನವನ್ನು ಬೋಧಿಸಿ ಜ್ಞಾನಿಗಳನ್ನಾಗಿ ಮಾಡಿ ಉದ್ಧರಿಸಿದರು.

ಈ ರೀತಿಯಾಗಿ ಸಜ್ಜನರನ್ನು ಉದ್ಧರಿಸುತ್ತಾ ಶ್ರೀಮಧ್ವಾಚಾರ್ಯರು ಶಿಷ್ಯರೊಂದಿ ಉಡುಪಿಗೆ ಬಂದರು. ಅಲ್ಲಿ ಅವರ ಗುರುಗಳಾದ ಶ್ರೀಅಚ್ಯುತಪ್ರೇಕ್ಷತೀರ್ಥರು ಮತ್ತು ಆಶ್ರಮಜ್ಯೇಷ್ಠಯತಿಗಳಾದ ಶ್ರೀಪುರುಷೋತ್ತಮ ತೀರ್ಥರಿದ್ದರು. ಅವರಿಬ್ಬರಿಗಿಂತಲೂ ಸ್ವರೂಪತಃ ಶ್ರೀಮಧ್ವಾಚಾರ್ಯರು ಉತ್ತಮರಾಗಿರುವುದರಿಂದ ಅವರಿಬ್ಬರಿಗೆ ನಮಸ್ಕಾ ಮಾಡಬೇಕಾಗಿಲ್ಲ. ಆದರೂ ಲೋಕಶಿಕ್ಷಣದ ದೃಷ್ಟಿಯಿಂದ ಶ್ರೀ ಮಧ್ವಾಚಾರ್ಯ ಅವರಿಬ್ಬರಿಗೂ ನಮಸ್ಕಾರವನ್ನು ಮಾಡಿದರು.

ಹೀಗೆ ನಮಸ್ಕರಿಸಿದ ಶ್ರೀಮಧ್ವಾಚಾರ್ಯರನ್ನು ನೋಡಿ, ಅವರನ್ನು ಆಲಿಂಗಿ ಅವರಿಬ್ಬರು ತುಂಬಾ ಸಂತೋಷಪಟ್ಟರು. ಅವರು ಹೊಂದಿದ ಆನಂದಕ್ಕೆ ಪಾರವೇ ಇರಲಿಲ್ಲ ಅವರಿಬ್ಬರೂ ಸಹ ಶ್ರೀಮಧ್ವಾಚಾರ್ಯರ ಮುಖದಿಂದಲೇ ಪ್ರಯಾಣ ಕಾಲದಲ್ಲಿ ನಡೆ ಘಟನೆಗಳೆಲ್ಲವನ್ನು ಕೇಳಿ ಇನ್ನಷ್ಟು ಸಂತೋಷಪಟ್ಟರು.

ಉಡುಪಿಗೆ ಬರುವುದಕ್ಕಿಂತ ಮೊದಲೇ ತಾವು ಬರೆದ ಭಾಷ್ಯಗ್ರಂಥವನ್ನು ಗುರುಗಳಿಬ್ಬರಿಗೂ ಶ್ರೀಮಧ್ವಾಚಾರ್ಯರು ಕಳುಹಿಸಿಕೊಟ್ಟಿದ್ದರಷ್ಟೆ. ಆ ಗ್ರಂಥವನ್ನು ನೋಡಿಯೇ ಅವರಿಬ್ಬರಿಗೂ ತುಂಬಾ ಸಂತೋಷವಾಗಿತ್ತು. ಆದರೂ ಅವರ ಮುಖದಿಂದಲೇ ಭಾಷ್ಯಗ್ರಂಥವನ್ನು ಅವರಿಬ್ಬರೂ ಕೇಳಿದರು. ಆ ಮೂಲಕ ಕಲಿಕೃತಮೋಹದಿಂದ ಅವರಿಬ್ಬರೂ ಬಿಡುಗಡೆಯನ್ನು ಹೊಂದಿದರು.

(ಜ್ಯೇಷ್ಠಯತಿಗಳು ಶ್ರೀ ಮಧ್ವಾಚಾರ್ಯರ ಭಾಷ್ಯಗ್ರಂಥವನ್ನು ತಮ್ಮ ಶಿಷ್ಯರಿಗೆ ಪಾಠ ಮಾಡುತ್ತಿದ್ದರು. ಮೊದಲೇ ಆ ಗ್ರಂಥದಲ್ಲಿ ಆಸಕ್ತಿ ತೋರಿಸಿದ್ದ ಅವರು ಮಧ್ವಾಚಾರ್ಯರ ಮುಖದಿಂದ ಭಾಷ್ಯಗ್ರಂಥವನ್ನು ಕೇಳಿದಾಗ ಇನ್ನಷ್ಟು ಆಸಕ್ತಿ ಮೂಡಿತು. ಮುಂದೆ ಆ ಗ್ರಂಥವನ್ನು ಎಂದೂ ಬಿಡಲೇ ಇಲ್ಲ.)

ಶ್ರೀಅಚ್ಯುತಪ್ರೇಕ್ಷತೀರ್ಥರು ವಿಶೇಷವಾಗಿ ಮಾಯಾವಾದಗ್ರಂಥಗಳಲ್ಲಿ ಬಹಳ ಅಭಿನಿವೇಶ ಉಳ್ಳವರಾಗಿದ್ದರು. ಅದಕ್ಕೆ ಕಲಿಕಾಲವೂ ಕಾರಣವಾಗಿತ್ತು. ಅವರಿಗೆ

ಶ್ರೀಮಧ್ವಾಚಾರ್ಯರು ವಿಶೇಷವಾಗಿ ತಮ್ಮ ಭಾಷ್ಯಗ್ರಂಥದಲ್ಲಿರುವ ಗುಣಗಳನ್ನೂ, ರ ಗ್ರಂಥಗಳಲ್ಲಿರುವ ದೋಷಗಳನ್ನೂ ಎತ್ತಿ ತೋರಿಸುತ್ತಾ ಅವರ ಮನಸ್ಸಿನಲ್ಲಿ ಹುದುಗಿ ಗಿದ್ದ ಕಲಿಮಲವನ್ನು ಕಿತ್ತು ಹಾಕಿದರು. ಅದರಿಂದಾಗಿ ಅವರೂ ಸಹ ವಿಶೇಷವಾಗಿ ಶ್ರೀ ಚಾರ್ಯರ ಸಿದ್ಧಾಂತದಲ್ಲಿ ಆಸಕ್ತಿಯನ್ನು ಹೊಂದಿದರು.

ಮುಂದೆ ಶ್ರೀಅಚ್ಯುತಪೇಕ್ಷತೀರ್ಥರು ಮತ್ತು ಶ್ರೀಪುರುಷೋತ್ತಮತೀರ್ಥರು ರೂ ಸಹ ತಮ್ಮ ಹೆಚ್ಚಿನ ಸಮಯಗಳನ್ನು ಸತ್ಸಿದ್ಧಾಂತವನ್ನು ಯೋಗ್ಯಜನರಲ್ಲಿ ದೇಶಿಸುವುದರಲ್ಲಿ ಕಳೆದರು.)

ಏವಂ ಕೃತೇಽಪಿ ಸರ್ವಜ್ಞಃ ಸಜ್ಜನಾನಾಂ ಸುಖಾಪ್ತಯೇ ।
ನಾವಾಽಗತಾಂ ದ್ವಾರಕಾಯಾಃ ತಾಂ ಕೃಷ್ಣಪ್ರತಿಮಾಂ ಮುದಾ ॥ ೨೬ ॥
ನೀತ್ವಾ ಪ್ರತಿಷ್ಠಾಮ್ ಅಕರೋತ್* ವಿಧಿವತ್ ರಜತಾಸನೇ ।
ಪೂಜಾದಿವಿಭವಂ ಚಾಸೌ ಕಾರಯಾಮಾಸ ಸಾನುಜಃ ।
(ಚಕ್ರೇ ಸಾನುಜೋ ಮಾಧವಪ್ರಿಯಃ) ॥ ೨೭ ॥

ಈ ರೀತಿಯಾಗಿ ಅನೇಕ ಕಾರ್ಯಗಳನ್ನು ಮಾಡಿದರೂ ಸಹ ಶ್ರೀಮಧ್ವಾಚಾರ್ಯರು ತನ್ನನ್ನೇ ನಂಬಿರುವ ಸಜ್ಜನರಿಗೆ ಮೋಕ್ಷ ಸಾಧನೆಗೆ ಬರುವಂತಹ ವಿಘ್ನಗಳನ್ನು ರಿಹರಿಸುವುದಕ್ಕಾಗಿ, ಆ ಮೂಲಕ ಅವರಿಗೆ ಶ್ರೇಯಸ್ಸನ್ನು ಅನುಗ್ರಹಿಸಬೇಕು; ಅದಕ್ಕಾಗಿ ಯೋಗ್ಯ ಕೆಲಸವೊಂದನ್ನು ಕೈಗೊಳ್ಳಬೇಕು'' ಎಂದು ನಿರ್ವ್ಯಾಜಕರುಣೆಯಿಂದ ಆಲೋಚಿಸಿದರು.

ಅದೇ ಸಂದರ್ಭದಲ್ಲಿ ದ್ವಾರಕೆಯಿಂದ ನಾವೆಯ ಮೂಲಕ ಗೋಪಿಚಂದನದ ಗಡ್ಡೆಯಲ್ಲಿ ಹುದುಗಿ ಹೋಗಿದ್ದ ಶ್ರೀಕೃಷ್ಣನ ಪ್ರತಿಮೆಯು ಉಡುಪಿಯ ಸಮೀಪದ ಡಭಾಂಡೇಶ್ವರ ಪ್ರದೇಶವನ್ನು ಸೇರಿತ್ತು. ಅದನ್ನು ತಂದು ಶ್ರೀಮಧ್ವಸರೋವರದಲ್ಲಿ ಶಿಷ್ಯರಿಂದ ಆ ಪ್ರತಿಮೆಯನ್ನು ಶ್ರೀ ಮಧ್ವಾಚಾರ್ಯರು ಶುದ್ಧಗೊಳಿಸಿದರು.

ನಂತರ ತನ್ನ ಕರಸ್ಪರ್ಶದಿಂದ ಆ ಪ್ರತಿಮೆಯಲ್ಲಿ ಭಗವಂತನ ಸನ್ನಿಧಾನಾತಿಶಯ ಉಂಟಾಗುವಂತೆ ಮಾಡಿದರು. ಆವಾಗ ಬರೇ ಒಬ್ಬರಿಂದ ಎತ್ತಿಕೊಳ್ಳಲು ಸಾಧ್ಯವಿರುವಂತಹ ಆ ಪ್ರತಿಮೆಯನ್ನು ಮೂವತ್ತು ಜನರು ಏಕಕಾಲದಲ್ಲಿ ಬಹಳ ಪ್ರಯತ್ನಪಟ್ಟರೂ ಎತ್ತಲು ಸಾಧ್ಯವಾಗಲಿಲ್ಲ. ಹೀಗಿದ್ದರೂ ತಾವು ಮಾತ್ರ ಬಹಳ ಅನಾಯಾಸವಾಗಿ ಎತ್ತಿ ತಂದು ಉಡುಪಿಕ್ಷೇತ್ರದಲ್ಲಿ ವಿಧಿವತ್ತಾಗಿ ಪಶ್ಚಿಮ ದಿಕ್ಕಿಗೆ ಅಭಿಮುಖವಾಗಿ ಶ್ರೀ ಕೃಷ್ಣನ ಪ್ರತಿಮೆಯನ್ನು ಪ್ರತಿಷ್ಠಾಪಿಸಿದರು.

*ಶ್ಲೋಕವನ್ನು ಒಟ್ಟಿಗೆ ಹೇಳುವಾಗ ಅಕರೋದ್ವಿಧಿವತ್ ಎಂದಾಗುತ್ತದೆ.

ಅಲ್ಲದೆ ಅಲ್ಲಿ ವೈಭವದ ಪೂಜೆ ಮೊದಲಾದವುಗಳನ್ನು ನಡೆಯು
ಶ್ರೀಮಧ್ವಾಚಾರ್ಯರು ತಮ್ಮ ತಮ್ಮ ಮಂದಿರ ಜೊತೆಯಲ್ಲಿ ಸಕಲ ವ್ಯವಸ್ಥೆಗಳನ್ನು ಮಾಡಿಸಿ

ಏತಾದೃಶಾನಿ ಕರ್ಮಾಣಿ ಕೃತ್ವಾ ವ್ಯಾಸಮನೋನುಗಃ ।
ಸಜ್ಜನಾನ್ ಕೃಪಯಾ ಮಧ್ವೋ ಭವಬಂಧಾದ್ ಅಮೂಮುಚತ್ ॥ ೧೮

ಶ್ರೀವೇದವ್ಯಾಸದೇವರ ಸಂಕಲ್ಪಕ್ಕೆ ಅನುಗುಣವಾಗಿ ನಡೆಯುವ ಮಧ್ವಾಚಾರ್ಯರು ಉಡುಪಿಯಲ್ಲಿ ಶ್ರೀಕೃಷ್ಣನನ್ನು ಪ್ರತಿಷ್ಠಾಪಿಸಿದರು. ಆ ಮೂಲಕ ಸಜ್ಜ ಶ್ರೀ ಕೃಷ್ಣನನ್ನು ಸಂದರ್ಶಿಸುವುದು; ಆರಾಧಿಸುವುದು ಇತ್ಯಾದಿ ಯೋಗ್ಯ ಕರ್ಮಗಳ ಭವಬಂಧದಿಂದ ಮುಕ್ತರಾಗುವಂತೆ ಶ್ರೀ ಮಧ್ವಾಚಾರ್ಯರು ಅನುಗ್ರಹಿಸಿದರು.

ಪುನರ್ವ್ಯಾಸಂ ದಿದೃಕ್ಷುಃ ಸನ್ ಸಾನುಗಃ ಪ್ರಯಯೌ ಕಿಲ ।
ಪ್ರಣಮ್ಯ ಚರಣೌ ವಿಷ್ಣೋಃ ರೌಪ್ಯಪೀಠಗತಸ್ಯ ಸಃ ॥ ೧೯

ಮತ್ತೊಮ್ಮೆ ಶ್ರೀವೇದವ್ಯಾಸದೇವರನ್ನು ನೋಡಬೇಕೆನ್ನುವ ಬಯಕೆ ಮಧ್ವಾಚಾರ್ಯರಿಗೆ ಉಂಟಾಯಿತು. ಉಡುಪಿಯಲ್ಲಿರುವ ಶ್ರೀ ಕೃಷ್ಣನಿಗೆ ನಮಸ್ಕರಿಸಿ ಕೆ ಮಂದಿ ಶಿಷ್ಯರೊಂದಿಗೆ ಶ್ರೀ ಮಧ್ವಾಚಾರ್ಯರು ಬದರಿಗೆ ಪ್ರಯಾಣ ಹೊರಟರು.

(ಮೊದಲ ಬಾರಿ ಬದರಿಗೆ ಹೋಗಿದ್ದಾಗ ಶ್ರೀನಾರಾಯಣದೇವರಿ ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ಬರೆಯಲು ಅಪ್ಪಣೆಯನ್ನು ಶ್ರೀಮಧ್ವಾಚಾರ್ಯ ಪಡೆದಿದ್ದರು. ಆ ಗ್ರಂಥವನ್ನು ಪುನಃ ಶ್ರೀ ವೇದವ್ಯಾಸರಿಗೆ ಸಮರ್ಪಿಸಲು ಎರಡನೆ ಬಾರಿ ಮಧ್ವಾಚಾರ್ಯರು ಬದರೀ ಯಾತ್ರೆಯನ್ನು ಕೈಗೊಂಡರು.)

ನಾನಾ ವಿಚಿತ್ರಕರ್ಮಾಣಿ ಪಥಿ ಕುರ್ವನ್ ಚ ಜಾಹ್ನವೀಮ್ ।
ಅನ್ಯೋನ್ಯಮಾಶ್ರಯೇಣೈವ ತೀರ್ತ್ವಾ ಮಧ್ವಸ್ತು ಸಾನುಗಃ ॥ ೨೦
ಹಿಂಸಾರ್ಥಮಾಗತಾನ್ ಮ್ಲೇಂಛಾನ್ ತಾನ್ ದೃಷ್ಟ್ವಾ ಮೃದುಭಾಷಣೈಃ ।
ವಂಚಯಿತ್ವಾ ವ್ರಜನ್ ರಾಜ್ಞಾ ದೃಷ್ಟಃ ತತ್ಪತಿನಾ ಸ್ವಯಮ್ ॥ ೨೧

ಬದರಿಕಾಶ್ರಮಕ್ಕೆ ಹೋಗುವ ದಾರಿಯಲ್ಲಿ ಶ್ರೀಮಧ್ವಾಚಾರ್ಯರು ಅನೆ ಆಶ್ಚರ್ಯಕರವಾದ ಘಟನೆಗಳನ್ನು ಮಾಡಿದರು. ಗಂಗಾನದಿಯನ್ನು ದೋಣಿಯಿಲ್ಲದೆ ದಾಟಬೇಕಾದ ಸಂದರ್ಭ ಅಲ್ಲಿ ಒದಗಿ ಬಂದಿತ್ತು. ಆ ಸಮಯದಲ್ಲಿ ಶ್ರೀಮಧ್ವಾಚಾರ್ಯರ ಒಬ್ಬ ಶಿಷ್ಯ ಹಿಡಿದುಕೊಂಡನು. ಅವನನ್ನು ಮತ್ತೊಬ್ಬ ಶಿಷ್ಯನು ಹಿಡಿದುಕೊಂಡನು. ಹಿ ಅನ್ಯೋನ್ಯವಾಗಿ ಆಶ್ರಯಿಸಿಕೊಂಡು ಗಂಗಾನದಿಯನ್ನು ದಾಟಿದರು.

ಆವಾಗ ಇವರೆಲ್ಲ ಶತ್ರುರಾಜನ ಗೂಢಚಾರರು ಎಂದು ತಿಳಿದು ಇವರನ್ನು ಕೊಲ್ಲಲು ತುರುಷ್ಕರಾಜನ ಸೈನಿಕರು ಶ್ರೀಮಧ್ವಾಚಾರ್ಯರ ಬಳಿಗೆ ನುಗ್ಗಿದರು. ಆಗ ಶ್ರೀಮಧ್ವಾಚಾರ್ಯರು 'ಹೇ ಅವಿವೇಕಿಗಳೇ ! ಸಾಹಸ ಮಾಡುತ್ತಾ ನೀರಿಗೆ ಬಿದ್ದು ಪ್ರಾಣ ಬಿಡುಕೊಳ್ಳಬೇಡಿ; ಸ್ವಲ್ಪಸಂಖ್ಯೆಯಲ್ಲಿರುವ ನಮ್ಮಿಂದ ಬಹಳ ಸಂಖ್ಯೆಯಲ್ಲಿರುವ ನಿಮಗೆ ಯಾವುದೇ ರೀತಿಯ ಹೆದರಿಕೆಯೂ ಬೇಡ. ನಿಮ್ಮ ರಾಜನನ್ನು ನೋಡಬೇಕೆಂದೇ ನಾವು ಇಲ್ಲಿಗೆ ಬಂದದ್ದು. ಹೀಗಿರುವಾಗ ಯಾಕೆ ಸುಮ್ಮನೆ ನಮ್ಮೊಂದಿಗೆ ಕಲಹ ಮಾಡಲು ಬಯಸುತ್ತಿರುವಿರಿ'' ಈ ರೀತಿಯಾಗಿ ಮೃದುವಾಗಿ ಮಾತನಾಡುತ್ತಾ ಸ್ವಲ್ಪವೂ ಹೆದರದೆ ಅವರ ಮಧ್ಯದಲ್ಲೇ ನಡೆದು ಮುಂದೆ ಹೋದರು. ಹಾಗೆ ಮುಂದೆ ಸಾಗುತ್ತಿರುವಾಗ ತುರುಷ್ಕರಾಜನೇ ಶ್ರೀ ಮಧ್ವಾಚಾರ್ಯರಿಗೆ ಕಾಣಸಿಕ್ಕನು.

ತದ್ಭಾಷಯಾऽವದತ್ ಸರ್ವಂ ಪೃಷ್ಟಶ್ಚಾಸೌ ಯಥೋಚಿತಮ್ ।
ತದಾ ಸುವಿಸ್ಮಯೋ ಭೂತ್ವಾ ರಾಜಾ ರಾಜ್ಯಾರ್ಧಮಾರ್ಪಯತ್ ॥ ೩೨॥

ಆ ತುರುಷ್ಕರಾಜನ ಸೈನಿಕರು ಬಹಳ ಕ್ರೂರಿಯಾಗಿದ್ದರು. ಅಂತಹವರಿಂದಲೂ ಯಾವುದೇ ರೀತಿಯ ಹಿಂಸೆಗೆ ಒಳಗಾಗದೇ ಇರುವಂತಹ ಶ್ರೀಮಧ್ವಾಚಾರ್ಯರನ್ನು, ಅವರ ಶಿಷ್ಯರನ್ನು ನೋಡಿ ರಾಜನಿಗೆ ಬಹಳ ಆಶ್ಚರ್ಯವಾಯಿತು. ಅದನ್ನು ತಡೆಯಲಾರದೆ ಆ ರಾಜನು ಶ್ರೀಮಧ್ವಾಚಾರ್ಯರಲ್ಲಿ ಯಮಭಟರಂತೆ ಇರುವ ನನ್ನ ಕಡೆಯ ಸೈನಿಕರಿಂದ ಹಿಂಸೆಗೆ ಒಳಗಾಗದೆ ಹೇಗೆ ಸುರಕ್ಷಿತವಾಗಿ ಬಂದಿರಿ? ನಾವೆಗಳೇ ಇಲ್ಲದ ಗಂಗಾನದಿಯನ್ನು ಹೇಗೆ ದಾಟಿದಿರಿ ? ಮುಂದೆ ಏನನ್ನು ನೀವು ಮಾಡಲು ಬಯಸಿದ್ದೀರಿ ? ಎಂದು ಪ್ರಶ್ನಿಸಿದನು.

ಅದಕ್ಕೆ ಶ್ರೀಮಧ್ವಾಚಾರ್ಯರು ಆ ತುರುಷ್ಕರಾಜ ಮಾತನಾಡಿದ ತುರುಷ್ಕಭಾಷೆಯಲ್ಲೇ ಮಾತನಾಡುತ್ತಾ, 'ಜಗತ್ತನ್ನು ಬೆಳಗುತ್ತಿರುವ ಸೂರ್ಯನಾರಾಯಣನ ಅನುಗ್ರಹದಿಂದ ನಾವು ಇಂತಹ ಅಸಾಧ್ಯ ಕರ್ಮಗಳನ್ನು ಮಾಡುತ್ತಿರುವೆವು. ನಾವು ಶೀಘ್ರವಾಗಿ ಉತ್ತರದಿಕ್ಕಿಗೆ ಪ್ರಯಾಣ ಮಾಡಬೇಕಾಗಿದೆ' ಎಂದು ಉತ್ತರಿಸಿದರು.

ಶ್ರೀಮಧ್ವಾಚಾರ್ಯರ ಗಾಂಭೀರ್ಯ, ಧೈರ್ಯ, ವಿದ್ವತ್ತು ಮೊದಲಾದವುಗಳನ್ನು ನೋಡಿ ಮೊದಲೇ ಆಶ್ಚರ್ಯಚಕಿತನಾಗಿದ್ದ ಆ ತುರುಷ್ಕ ರಾಜ ಇನ್ನಷ್ಟು ಆಶ್ಚರ್ಯಚಕಿತನಾಗಿ ಅವರ ಮಹಿಮೆಗೆ ಶರಣಾಗಿ ಕೂಡಲೇ ತನ್ನ ಅರ್ಧರಾಜ್ಯವನ್ನು ಸಮರ್ಪಿಸಿಬಿಟ್ಟನು.

ತತೋ ನಿಹತ್ಯ ಚೋರಾದೀನ್ ಗತ್ವಾ ಬದರಿಕಾಶ್ರಮಮ್ ।
ಪ್ರಾಪ್ಯ ನಾರಾಯಣಾತ್ ತತ್ರ ಶಿಲಾತ್ಮಪ್ರತಿಮಾ ಹರೇಃ ॥ ೩೩॥

ಸನ್ನಿಧಾನಯುತಾಃ ಸಾಕ್ಷಾತ್ ಪೂರ್ಣಪ್ರಜ್ಞಃ ಪ್ರಭುಃ ಸ್ವಯಮ್ ।
ಗೂಢಭಾರತತಾತ್ಪರ್ಯಂ ಕರ್ತುಂ ವ್ಯಾಸೇನ ಚೋದಿತಃ ॥ ೩॥

ಮುಂದೆ ದಾರಿಯಲ್ಲಿ ಮುಂದಕ್ಕೆ ಸಾಗುತ್ತಿದ್ದಾಗ ಕಳ್ಳರು ಅಡ್ಡಗಟ್ಟಿದರು. ಅವ... ಬುದ್ಧಿ ಕಲಿಸಿ ಅಲ್ಲಿಂದ ಬದರಿಕಾಶ್ರಮವನ್ನು ತಲುಪಿದರು. ಅಲ್ಲಿಯ ನಾರಾಯಣಾಶ್ರಮ... ಸನ್ನಿಹಿತರಾಗಿರುವ ಶ್ರೀನಾರಾಯಣದೇವರು ಸಾಕ್ಷಾತ್ತಾಗಿ ತನ್ನ ಸನ್ನಿಧಾನವುಳ್ಳ, ತನ್ನ ಪ್ರತಿ... ರೂಪದಲ್ಲಿರುವ ಎಂಟು ಶಿಲೆಗಳನ್ನು ಶ್ರೀ ಮಧ್ವಾಚಾರ್ಯರಿಗೆ ನೀಡಿ ಅನುಗ್ರಹಿಸಿದರು.

ಅಲ್ಲದೆ ಅಲ್ಲಿಯೇ ಶ್ರೀವೇದವ್ಯಾಸದೇವರೂ ಸಹ ಕ್ಲಿಷ್ಟವಾದ ಶ್ರೀಮಹಾಭಾರ... ತಾತ್ಪರ್ಯವನ್ನು ನಿರ್ಣಯಿಸುವ ಗ್ರಂಥವೊಂದನ್ನು ಬರೆಯಬೇಕು ಎಂ... ಶ್ರೀಮಧ್ವಾಚಾರ್ಯರಿಗೆ ಆದೇಶ ನೀಡಿದರು.

(ದಾರಿಯಲ್ಲಿ ಶ್ರೀಮಧ್ವಾಚಾರ್ಯರು ಬದರಿಗೆ ಪ್ರಯಾಣಮಾಡು... ಸಂದರ್ಭದಲ್ಲಿ ದೊಡ್ಡ ಕಳ್ಳರ ಗುಂಪೊಂದು ಇವರನ್ನು ಅಡ್ಡಗಟ್ಟಿತು. ಶ್ರೀಮಧ್ವಾಚಾರ್ಯರು ಶಿಷ್ಯರನ್ನು ಒಂದೆಡೆ ನಿಲ್ಲಿಸಿ, ವಸ್ತ್ರಗಳಿಂದ ಒಂದು ಗಂಟನ್ನು ತಯ... ಮಾಡಿ, ಅದರಲ್ಲಿ ಧನವಿದೆ ಎಂಬ ಬುದ್ಧಿ ಕಳ್ಳರಿಗೆ ಹುಟ್ಟುವಂತೆ ಮಾಡಿದರು. ಅದನ್ನು ಹಿ... ಕಳ್ಳರ ಮಧ್ಯೆ ಓಡಾಡುತ್ತಾ, ಮೋಹ ಕವಿಯುವಂತೆ ಮಾಡಿ ಆ ಕಳ್ಳರೇ ಪರಸ್ಪರ ಹೊಡೆ... ಕೊಳ್ಳುವಂತೆ ಮಾಡಿದರು.

ಮತ್ತೊಮ್ಮೆ ಶ್ರೀಮಧ್ವಾಚಾರ್ಯರನ್ನು ಕೊಲ್ಲಲು ನೂರಾರು ಸಂಖ್ಯೆಯಲ್ಲಿ ಕ... ಕೈಯಲ್ಲಿ ಕೊಡಲಿಯನ್ನು ಹಿಡಿದುಕೊಂಡು ಅವರತ್ತ ನುಗ್ಗಿದರು. ಆಗ ಅವರೊ... ಹೋರಾಡಲು ತಮ್ಮ ಶಿಷ್ಯರಲ್ಲಿ ಕಾಳಗದಲ್ಲಿ ಬಹಳ ಪಳಗಿರುವ ಶ್ರೀಉಪೇಂದ್ರತೀರ್ಥ... ಅನುಮತಿಯನ್ನು ನೀಡಿದರು. ಶ್ರೀ ಉಪೇಂದ್ರತೀರ್ಥರು ಆ ಕಳ್ಳರ ಬಳಿಯಿದ್ದ ಕೊಡಲಿಯ... ಸೆಳೆದು, ಅವರ ಗುಂಪನ್ನು ಹೊಡೆದು ಅಲ್ಲಿಂದ ಓಡಿಸಿಬಿಟ್ಟರು.

ಇನ್ನೊಮ್ಮೆ ಕಳ್ಳರು ಇವರನ್ನು ಅಡ್ಡಗಟ್ಟಿದಾಗ ತಮ್ಮ ಶಿಷ್ಯರಿಗೆ ಕಲ್ಲಿನಂತೆ ನಿಲ್ಲ... ಹೇಳಿ ತಾವೂ ಸಹ ಕಲ್ಲಿನಂತೆ ಅಚಲರಾಗಿ ನಿಂತರು. ಹಾಗೆ ನಿಂತ ಅವರನ್ನು ನೋಡಿ ಕ... ಶಿಲೆಗಳು ಅಂತ ತಿಳಿದು ಅಲ್ಲಿಂದ ಹೊರಟು ಹೋದರು. ಈ ರೀತಿಯ... ಶ್ರೀಮಧ್ವಾಚಾರ್ಯರು ಕಳ್ಳರನ್ನು ವಂಚಿಸಿದರು. ಮತ್ತೆ ಪುನಃ ಕುತೂಹಲದಿಂದ ನೋಡ... ಬಂದಾಗ ಅಲ್ಲಿ ಯಾವ ಶಿಲೆಯನ್ನು ಕಳ್ಳರು ನೋಡಲಿಲ್ಲ. ಶ್ರೀಮಧ್ವಾಚಾರ್ಯರನ್ನು ಮ... ಅವರ ಶಿಷ್ಯರನ್ನು ನೋಡಿ, ಇವರು ಸಾಮಾನ್ಯರಲ್ಲ ಅಂತ ತಿಳಿದು ಅವರಿಗೆ ನಮಸ್ಕರಿಸಿದ... ಈ ರೀತಿಯಾಗಿ ಮೂರು ಘಟನೆಗಳನ್ನು 'ಸುಮಧ್ವವಿಜಯ'ದಲ್ಲಿ ಉಲ್ಲೇಖಿಸಲಾಗಿದೆ.

ನಾರಾಯಣಾಶ್ರಮದಲ್ಲಿ ಶ್ರೀನಾರಾಯಣದೇವರ ಸನ್ನಿಧಾನವನ್ನು ಮತ್ತು ಗಂಗಾದಿತೀರ್ಥವನ್ನು ಬಿಟ್ಟು ಹೋಗಲು ಶ್ರೀಮಧ್ವಾಚಾರ್ಯರು ಒಪ್ಪದಿದ್ದಾಗ ''ನೀವು ಸ್ನಾನಮಾಡುವ ನೀರಿನಲ್ಲಿ ಹಾಗೂ ನಾನು ಕೊಡುವ ಈ ಎಂಟು ಶಿಲೆಗಳಲ್ಲಿ ಯಾವಾಗಲೂ ಸನ್ನಿಹಿತನಾಗಿರುವೆನು'' ಎಂದು ಸಮಾಧಾನಪಡಿಸಿ ಅವರಿಗೆ ಎಂಟು ಶಿಲೆಗಳನ್ನು ನೀಡಿದರು. ಅವುಗಳಲ್ಲಿ ಯಾವಾಗಲೂ ಲಕ್ಷ್ಮೀನಾರಾಯಣ ದೇವರ ಸನ್ನಿಧಾನವಿದೆ. ಅವುಗಳನ್ನು ವೇದವ್ಯಾಸರೇ ನಾರಾಯಣರೂಪದಿಂದ ಕೊಟ್ಟದ್ದರಿಂದ ಅವುಗಳನ್ನು ವ್ಯಾಸಮುಷ್ಟಿಗಳೆಂದು ಹೇಳುವ ರೂಢಿ ಬಂದಿದೆ.

ಮಹಾಭಾರತ ಬಹಳ ಕ್ಲಿಷ್ಟವಾದುದು. ಅದರಲ್ಲಿ ಸಮಾಧಿಭಾಷೆ, ದರ್ಶನಭಾಷೆ ಹಾಗೂ ಗುಹ್ಯಭಾಷೆಗಳೆನ್ನುವ ಮೂರು ಭಾಷೆಗಳು ವೇದವ್ಯಾಸರಿಂದ ಬಳಸಲ್ಪಟ್ಟಿವೆ. ಹೀಗಾಗಿ ಅದರ ತಾತ್ಪರ್ಯಾರ್ಥವನ್ನು ತಿಳಿದುಕೊಳ್ಳುವುದು ಬಹಳ ಕಷ್ಟ. ಅಂತಹ ಕೆಲಸವನ್ನು ಮಾಡುವುದರಲ್ಲಿ ಶ್ರೀಮಧ್ವಾಚಾರ್ಯರು ಅತ್ಯಂತ ದಕ್ಷರು ಎಂದು ಶ್ರೀವೇದವ್ಯಾಸರು ತೀರ್ಮಾನಿಸಿದರು. ಅದರಂತೆ ಪರತತ್ತ್ವ ಎನಿಸಿದ ಭಗವಂತನ ಯಥಾರ್ಥ ಸ್ವರೂಪದ ಪ್ರಸಿದ್ಧಿಗೋಸ್ಕರ ಶ್ರೀ ಮಧ್ವಾಚಾರ್ಯರಿಗೆ ಶ್ರೀಮಹಾಭಾರತದ ತಾತ್ಪರ್ಯ ನಿರ್ಣಯವನ್ನು ಬರೆಯಲು ಆದೇಶಿಸಿದರು.)

ತೀರ್ತ್ವಾ ಗಂಗಾಂ ಪುನಃ ಪ್ರಾಪ ಸಾನುಗೋ ವಿಷಯಾಂತರಮ್ ।
ಕಿಂಚಿತ್ ಕಾಲಂ ಸುಖಂ ತತ್ರ ವಾಸಂ ಕೃತ್ವಾ ಮಹಾಮತಿಃ ।।೩೫ ।।
ತತೋ ದೇಶಾನ್ ಚರನ್ ಮಧ್ವಃ ತತ್ರ ತತ್ರಾಕರೋತ್ ಕಿಲ ।
ಅಶಕ್ಯಂ ವಿವಿಧಂ ಕರ್ಮ ಲೀಲಯಾ ರೋಮಹರ್ಷಣಮ್ ।। ೩೬ ।।

ಶ್ರೀವೇದವ್ಯಾಸರ ಅನುಜ್ಞೆಯನ್ನು ಪಡೆದು, ಅಲ್ಲಿಂದ ಹೊರಟು ಮರಳುವಾಗ ಶ್ರೀಮಧ್ವಾಚಾರ್ಯರು ಮತ್ತೊಮ್ಮೆ ಗಂಗಾನದಿಯನ್ನು ದಾಟಿ ಶಿಷ್ಯರೊಂದಿಗೆ ಇನ್ನೊಂದು ದೇಶಕ್ಕೆ ಬಂದರು. ಅಲ್ಲಿ ಸ್ವಲ್ಪಕಾಲ ಸುಖವಾಗಿ ಸಂಚಾರ ಮಾಡುತ್ತಾ ಅಲ್ಲಲ್ಲಿ ಉಳಿದವರಿಗೆ ಅಶಕ್ಯವಾದ, ರೋಮಾಂಚನವನ್ನುಂಟುಮಾಡುವ ಅನೇಕ ಕೆಲಸಗಳನ್ನು ಲೀಲೆಯಿಂದ ಮಾಡಿದರು.

(ಬದರಿಯಿಂದ ಮರಳಿ ಗಂಗಾನದಿಯ ಸಮೀಪಕ್ಕೆ ಬಂದಾಗ ಸಂಜೆಯಾಗಿತ್ತು. ಆ ಸಮಯದಲ್ಲಿ ದೋಣಿಗಳೂ ಇರಲಿಲ್ಲ. ಶಿಷ್ಯರಿಗೆಲ್ಲ ಗಾಬರಿಯಾಯಿತು. ಆದರೆ ಶ್ರೀಮಧ್ವಾಚಾರ್ಯರು ಮಾತ್ರ ತಾವು ಉಟ್ಟುಕೊಂಡ ವಸ್ತ್ರವೂ ಒದ್ದೆಯಾಗದ ರೀತಿಯಲ್ಲಿ ಗಂಗಾನದಿಯನ್ನು ದಾಟಿದರು. ಆಚೆಯ ದಡದಲ್ಲಿದ್ದ ರಾಜನನ್ನು ಬೆರಗುಗೊಳಿಸಿ ಆ

ರಾಜನಿಂದ ನಾವೆಗಳನ್ನು ತರಿಸಿ, ಆ ಮೂಲಕ ಶಿಷ್ಯರೂ ಗಂಗಾನದಿಯನ್ನು ದಾಟುವ
ಮಾಡಿದರು.

ಹಸ್ತಿನಪುರದಲ್ಲಿ ಶ್ರೀಮಧ್ವಾಚಾರ್ಯರು ಚಾತುರ್ಮಾಸ್ಯ ವ್ರತವನ್ನು ಕೈಗೊಂಡ ಗಂಗಾನದಿಯಿಂದ ಬಹಳ ದೂರದಲ್ಲಿರುವ ಏಕಾಂತ ಸ್ಥಳವೊಂದರಲ್ಲಿರುವ ಒಂದು ಮಠದ ಅವರು ವ್ರತವನ್ನು ಕೈಗೊಂಡಿದ್ದಾಗ, ಗಂಗಾದೇವಿಯೇ ಮರದ ರೆಂಬೆಯ ಮೂ ಪ್ರತ್ಯಕ್ಷವಾಗಿ ಶ್ರೀ ಮಧ್ವಾಚಾರ್ಯರಿಗೆ ನಮಸ್ಕಾರವನ್ನು ಮಾಡಿದಳು.

ಅಲ್ಲಿಂದ ಮುಂದೆ ವಾರಾಣಸಿಯನ್ನು ಶ್ರೀಮಧ್ವಾಚಾರ್ಯರು ತಲುಪಿದರು. ಅ ತಾವೇ ಬಲಿಷ್ಠರು ಎಂಬುದಾಗಿ ಅಹಂಕಾರ ಪಡುತ್ತಿದ್ದ ಶಿಷ್ಯರನ್ನು ಒಮ್ಮೆಗೆ ದ್ವಂದ್ವಯುದ್ಧ ಗುರುಗಳು ಕರೆದರು. ಗುರುಗಳ ಅಪ್ಪಣೆಯಂತೆ ಒಮ್ಮೆಲೆ ಬಂದ ಹದಿನೈದು ಮಂದಿ ತರು ಶಿಷ್ಯರನ್ನು ಮಧ್ವಾಚಾರ್ಯರು ನೆಲದಲ್ಲಿ ಕೆಡಹಿ ಅವರನ್ನು ಸೋಲಿಸುವುದರ ಮೂ ಅಹಂಕಾರವನ್ನು ಖಂಡಿಸಿದರು.

ಕುರುಕ್ಷೇತ್ರಕ್ಕೂ ಶ್ರೀಮಧ್ವಾಚಾರ್ಯರು ಭೇಟಿ ನೀಡಿದ್ದರು. ಅಲ್ಲಿ ತಪಸ ಮಾಡುತ್ತಿದ್ದ ಸಂನ್ಯಾಸಿಯನ್ನು ತನ್ನ ಶಿಷ್ಯರಿಗೆ ತೋರಿಸಿ ಅವನು ಮುಂದಿನ ಕಲ್ಪದ ಮಾರೀಚನಾಗುವವನು ಎಂದು ತೋರಿಸಿದರು. ಶಿಷ್ಯರು ಅವನನ್ನು ಪರೀಕ್ಷಿಸಿದಾಗ ಗುರುಗಳ ಹೇಳಿದ್ದು ಮನವರಿಕೆಯಾಯಿತು. ಹಿಂದಿನ ಅವತಾರದಲ್ಲಿ ಭೀಮನಾಗಿದ್ದಾಗ ಹಿಡಿದುಕೊಂ ಗದೆಯನ್ನು ನೋಡಬೇಕೆಂದು ಸತ್ಯತೀರ್ಥ ಮೊದಲಾದ ಶಿಷ್ಯರು ಬಯಸಿದಾಗ, ಅವ ಅಪೇಕ್ಷೆಯಂತೆ ಒಂದೆಡೆ ನೆಲವನ್ನು ಅಗೆಸಿ ಒಂದು ಗದೆಯನ್ನು ತೋರಿಸಿದರು. ಅಲ್ಲದ ಸತ್ಯತೀರ್ಥರಿಗೂ ನೀವು ಆವಾಗ ಒಬ್ಬ ರಾಜನಾಗಿದ್ದಿರಿ. ಆಗ ಈ ಆಯುಧವನ್ನು ಹಿಡಿದುಕೊಂಡಿದ್ದೀರಿ ಎಂದು ಅವರಿಗೆ ಮತ್ತೊಂದು ಆಯುಧವನ್ನು ತೋರಿಸಿದರು.

ಹೃಷೀಕೇಶಕ್ಷೇತ್ರದಲ್ಲಿ ಇದ್ದಾಗ ರುದ್ರದೇವರು ಧವಳಕಾಂತಿಯುಳ್ಳ ವಿಪ್ರನ ವೇಷದಲ್ಲಿ ಆಗಮಿಸಿ, ಭಿಕ್ಷೆಯನ್ನು ಸ್ವೀಕರಿಸಿ ಅನುಗ್ರಹಿಸಬೇಕೆಂದು ಶ್ರೀ ಮಧ್ವಾಚಾಯರನ್ನು ಪ್ರಾರ್ಥಿಸಿದರು. ಒಂದು ಕ್ಷಣ ಅಲ್ಲಿ ಎಲ್ಲರಿಗೆ ಕಾಣುವಂತೆ ಇದ್ದು ಕೂಡಲೇ ರುದ್ರದೇವರು ಅದೃಶ್ಯರಾದರು. ಅಲ್ಲದೇ ಅದೇ ಕ್ಷೇತ್ರದ ಹತ್ತಿರದಲ್ಲಿರುವ ಒಬ್ಬ ಭಕ್ತನಿಗೆ ರುದ್ರದೇವರು ಮೂರುಬಾರಿ ಸ್ವಪ್ನದಲ್ಲಿ ಕಾಣಿಸಿಕೊಂಡು, ಪ್ರೇರಣೆ ಮಾಡಿ ಅವನಿಂದ ಬಹುತೆರನಾದ ಭಕ್ಷ್ಯಭೋಜ್ಯಗಳನ್ನು ಶ್ರೀ ಮಧ್ವಾಚಾರ್ಯರಿಗೆ ಸಮರ್ಪಿಸಿ ಭಿಕ್ಷೆಯನ್ನು ಮಾಡಿಸಿದರು.

ಅಲ್ಲದೇ ಶ್ರೀಮಧ್ವಾಚಾರ್ಯರು 'ಇಷುಪಾತ' ಎನ್ನುವ ಕ್ಷೇತ್ರವನ್ನು ತಲುಪಿದರು.

ಅಲ್ಲಿಯ ರಾಜನು ಶ್ರೀಮಧ್ವಾಚಾರ್ಯರನ್ನು ಪರೀಕ್ಷಿಸುವುದಕ್ಕಾಗಿ ಶ್ರೇಷ್ಠವಾದ 'ರಾಜಕೇಲೀ' ಎನ್ನುವ ಹೆಸರಿನ ದೊಡ್ಡಗಾತ್ರದ ಸಾವಿರಾರು ಬಾಳೆಹಣ್ಣುಗಳನ್ನು ಸಮರ್ಪಿಸಿದನು. ಅವೆಲ್ಲವನ್ನು ಶ್ರೀ ಮಧ್ವಾಚಾಯರು ತಿಂದು ಜೀರ್ಣಿಸಿಕೊಂಡರು.

ಇದರ ಜೊತೆಯಲ್ಲಿ 'ಸುಮಧ್ವವಿಜಯ'ದಲ್ಲಿ 'ಗೋವಾ'ದಲ್ಲಿ ಶ್ರೀ ಮಧ್ವಾಚಾರ್ಯರು ಇದ್ದಾಗ ನಡೆದ ಒಂದೆರಡು ಘಟನೆಗಳು ಈ ರೀತಿ ಇವೆ- ಒಮ್ಮೆ ಶ್ರೀ ಮಧ್ವಾಚಾರ್ಯರು ಗೋವಾದಲ್ಲಿ ಇದ್ದಾಗ ಶಂಕರ ಎನ್ನುವ ಹೆಸರಿನ ಬ್ರಾಹ್ಮಣನೊಬ್ಬನು ಮಧ್ವಾಚಾರ್ಯರಿಗೆ ದೊಡ್ಡ ಗಾತ್ರದ ನಾಲ್ಕು ಸಾವಿರ ಬಾಳೆಹಣ್ಣುಗಳನ್ನು ಹಾಗೂ ಮೂವತ್ತು ಕೊಡಗಳಲ್ಲಿ ಹಾಲನ್ನು ಅರ್ಪಿಸಿದರು. ಮಧ್ವಾಚಾರ್ಯರು ಅವೆಲ್ಲವನ್ನು ಸ್ವೀಕರಿಸಿ ಅರಗಿಸಿಕೊಂಡರು. ಮತ್ತೊಮ್ಮೆ ದೇವಗೃಹದಲ್ಲಿ ದೇವತೆಗಳೊಂದಿಗೆ ಶ್ರೀ ಮಧ್ವಾಚಾರ್ಯರು ಸಂಭಾಷಣೆಯಲ್ಲಿ ತೊಡಗಿದ್ದಾಗ ಅಲ್ಲಿಯ ರಾಜನು ಕವಾಟವನ್ನು ತೆಗೆದು ಬಿಟ್ಟನು. ಆವಾಗ ಶ್ರೀಮಧ್ವಾಚಾರ್ಯರು ರಾಜನಿಗೆ ಇಲ್ಲಿಂದ ಹೊರಗೆ ಹೋದರೆ ನಾಶವನ್ನು ಹೊಂದುತ್ತಿ ಎಂದು ಹೇಳಿದರು. ಆದರೂ ರಾಜ ವಿಸ್ಮಿತನಾಗಿ ಕವಾಟವನ್ನು ತೆಗೆದಾಗ ಒಳಗೆ ಇದ್ದ ಮಧ್ವಾಚಾರ್ಯರು ಕೆಂಗಣ್ಣಿನಿಂದ ಒಮ್ಮೆ ನೋಡಿದರು. ಪುರೋಹಿತರೊಂದಿಗೆ ಬಂದ ರಾಜ ಬಂದು ಕ್ಷಮೆಯನ್ನು ಯಾಚಿಸಿದರೂ ಅವನಿಗೆ ಬರೇ 6 ತಿಂಗಳುಗಳ ಆಯುಷ್ಯವನ್ನು ಅನುಗ್ರಹಿಸಿದರು. ರಾಜನು ಅವರನ್ನು, ಅವರ ಶಿಷ್ಯರನ್ನು ಅಲ್ಲಿಯೇ ವಾಸ ಮಾಡುವಂತೆ ಪ್ರಾರ್ಥಿಸಿದಾಗ ಯಾರಿಗೂ ಕಾಣಿಸದಂತೆ ವಾಯುವಿನಂತೆ ಶಿಷ್ಯರನ್ನು ಮುಂದಕ್ಕೆ ಕಳುಹಿಸಿ, ತಾವೂ ಅದೃಶ್ಯರಾಗಿ ಹೊರಟು ಹೋದರು. ಮುಂದೆ ಆರೇ ತಿಂಗಳಿನಲ್ಲಿ ರಾಜ ರಾಜ್ಯದೊಂದಿಗೆ ಮರಣವನ್ನು ಹೊಂದಿದನು. ಅದೇ ಗೋವೆಯಲ್ಲಿದ್ದಾಗ ಜನರ ಪ್ರಾರ್ಥನೆಯಂತೆ ಫಲಪುಷ್ಪಗಳಿಂದ ರಹಿತವಾದ ಅಡಿಕೆ ಮೊದಲಾದ ವೃಕ್ಷಗಳಲ್ಲಿ ತಾವು ಹಾಡನ್ನು ಹಾಡಿ ಫಲಪುಷ್ಪ ಬರುವಂತೆ ಮಾಡಿದರು. ಅಲ್ಲದೇ 'ಗಾನಶಾಸ್ತ್ರ' ಎನ್ನುವ ಒಂದು ಗ್ರಂಥವನ್ನೂ ಬರೆದರು.)

ತತ್ತದ್ದೇಶಸ್ಥಿತಾನ್ ಸರ್ವಾನ್ ವಾದಿನೋಽಪಿ ನಿರಾಕರೋತ್ ।
ಏವಂ ಕೃತ್ವಾ ಸ್ಥಿತಂ ಮಧ್ವಂ ಜಯಸಿಂಹಾಖ್ಯಭೂಪತಿಃ ॥ ೩೭॥
ಸ್ವರಾಷ್ಟ್ರೇ ಕಾರಯಾಮಾಸ ವಾಸಂ ಭಕ್ತ್ಯಾ ತು ವಾರ್ಷಿಕೇ ।
(ವಾಸಂ ವಾರ್ಷಿಕಕಾಲಂ ತು ಕಾರಯಾಮಾಸ ವೈಭವಾತ್)

ಸಂಚಾರದ ಕ್ರಮದಲ್ಲಿ ಆ ದೇಶಗಳನ್ನು ಶ್ರೀಮಧ್ವಾಚಾರ್ಯರು ಸಂದರ್ಶಿಸುತ್ತಿದ್ದರು. ಅಲ್ಲಿದ್ದ ವಾದಿಗಳನ್ನು ವಾದದಲ್ಲಿ ಅವರು ನಿರಾಕರಿಸುತ್ತಿದ್ದರು.

(ಉಡುಪಿಗೆ ಮರುಳುವ ದಾರಿಯಲ್ಲಿ ಶ್ರೀಮಧ್ವಾಚಾರ್ಯರು ವಾರಾಣಸಿಯಲ್ಲಿ ತಂಗಿದ್ದಾಗ ಅಮರೇಂದ್ರ ಪುರಿ ಎನ್ನುವ ವಿದ್ವಾಂಸನೊಬ್ಬನು, 'ಜ್ಞಾನಿ ಮಾಡಿದ ಕರ್ಮವು ಮೋಕ್ಷಕ್ಕೆ ಹೇಗೆ ಸಾಧನ ? ಎಂದು ಶ್ರೀಮಧ್ವಾಚಾರ್ಯರನ್ನು ಪ್ರಶ್ನಿಸಿದನು. ಸಮರ್ಥವಾಗಿ ಶ್ರೀಮಧ್ವಾಚಾರ್ಯರು ಉತ್ತರವನ್ನು ನೀಡಿದಾಗ ಆ ವಿದ್ವಾಂಸನು ದುರಾಗ್ರಹಪೂರ್ವಕವಾಗಿ ಅವರಲ್ಲಿ ಜ್ಞಾನ ಪದದ ಅರ್ಥದ ಬಗ್ಗೆ ಪ್ರಶ್ನೆ ಹಾಕಿದನು. ಆಗ ಶ್ರೀಮಧ್ವಾಚಾರ್ಯರು'' ನೀನು ಜ್ಞಾನಿಯಾದರೆ ಅದರ ಅರ್ಥ ಗೊತ್ತಿರಲೇಬೇಕು. ಅಜ್ಞಾನಿಯಾದರೆ ಈ ಪ್ರಶ್ನೆಯೇ ಸರಿಯಲ್ಲ '' ಎಂದು ಹೇಳಿ ಅವನನ್ನು ಸೋಲಿಸಿದರು.

ಮುಂದೆ ಶ್ರೀಮಧ್ವಾಚಾರ್ಯರು ಉಡುಪಿಯನ್ನು ತಲುಪಿದರು. ಆಗ ಮಾಯಾವಾದಿಗಳು ಶ್ರೀಮಧ್ವಾಚಾರ್ಯರ ಕೀರ್ತಿಯನ್ನು ಕೇಳಿ ಸಹಿಸಲಾಗದೆ 'ಪುಂಡರೀಕಪುರಿ' ಎನ್ನುವ ದೊಡ್ಡ ಪಂಡಿತನನ್ನು ಮುಂದಿರಿಸಿಕೊಂಡು ಅವರೊಂದಿಗೆ ವಾದಕ್ಕೆ ಸಿದ್ಧರಾದರು. ಆ ವಾದ ಸಮಯದಲ್ಲಿ ಶ್ರೀ ಮಧ್ವಾಚಾರ್ಯರು ವೇದಗಳನ್ನು ಉಚ್ಚರಿಸುತ್ತಾ ಅವುಗಳಿಗೆ ಅರ್ಥವನ್ನು ವಿವರಿಸಿದರು. ಜನರ ಪ್ರಾರ್ಥನೆಯಂತೆ ಪುಂಡರೀಕಪುರಿಯೂ ವೇದವ್ಯಾಖ್ಯಾನ ಮಾಡಲು ಹೋಗಿ ಜನರಿಂದ ಅಪಹಾಸಕ್ಕೆ ಒಳಗಾದನು. ಮುಂದೆ 'ಪದ್ಮತೀರ್ಥ' ಎನ್ನುವ ಮಾಯಾವಾದದ ಪಂಡಿತನೊಬ್ಬನು ವಿಷ್ಣುಮಂಗಲದಲ್ಲಿ ಅವರ ವಶದಲ್ಲಿದ್ದ ಗ್ರಂಥಗಳನ್ನು ಅಪಹರಿಸಿದನು. ಅದನ್ನು ಕೇಳಿ ಶ್ರೀಮಧ್ವಾಚಾರ್ಯರು ಪ್ರಾಗ್ರ್ಯವಾಟ(ಏಕವಾಟ) ಎಂಬಲ್ಲಿಗೆ ಹೋಗಿ ಅವರನ್ನು ಸೋಲಿಸಿದರು. ಆ ಪದ್ಮತೀರ್ಥನಿಗೆ ಸಹಾಯ ಮಾಡಲು ಬಂದ, ಹಿಂದೊಮ್ಮೆ ಸೋತುಹೋಗಿದ್ದ ಪುಂಡರೀಕಪುರಿಯನ್ನು ಮತ್ತೊಮ್ಮೆ ಶ್ರೀಮಧ್ವಾಚಾರ್ಯರು ಅನಾಯಾಸವಾಗಿ ಸೋಲಿಸಿದರು.

ಈ ರೀತಿಯಾಗಿ ವಾದಿಗಳನ್ನು ಸೋಲಿಸಿ 'ಪ್ರಾಗ್ರ್ಯವಾಟ' ಎನ್ನುವ ದೇವಾಲಯದಲ್ಲಿ ಚಾತುರ್ಮಾಸ್ಯವ್ರತವನ್ನು ಪೂರೈಸಿ ಅಲ್ಲಿಂದ ಸಹ್ಯ ಪರ್ವತದ ಪ್ರಾಂತ ಪ್ರದೇಶಕ್ಕೆ ಬಂದರು. ಅಲ್ಲಿರುವಾಗ ಕಾಸರಗೋಡು ಪ್ರಾಂತ್ಯದ ರಾಜನಾಗಿದ್ದ 'ಜಯಸಿಂಹ' ಎನ್ನುವ ರಾಜನು ಭೃತ್ಯನೊಬ್ಬನ ಮೂಲಕ ಶ್ರೀ ಮಧ್ವಾಚಾರ್ಯರಲ್ಲಿ ತಮ್ಮ ರಾಷ್ಟ್ರಕ್ಕೆ ಬರಬೇಕು ಎಂದು ಪ್ರಾರ್ಥಿಸಿದನು. ಅದರಂತೆ ಸಹ್ಯಪರ್ವತದ ಪ್ರಾಂತ ಪ್ರದೇಶದಿಂದ ಶ್ರೀಮಧ್ವಾಚಾರ್ಯರು ಕಾಸರಗೋಡಿಗೆ ಪ್ರಯಾಣ ಬೆಳೆಸಿದರು. ಕಾಸರಗೋಡಿನ ಸಮೀಪದಲ್ಲಿರುವ ಮದನೇಶ್ವರ ದೇವಾಲಯದಲ್ಲಿ ಶ್ರೀಮಧ್ವಾಚಾರ್ಯರು ತಂಗಿದ್ದಾಗ ಜಯಸಿಂಹ ರಾಜನೇ ಸ್ವತಃ ಅಲ್ಲಿಗೆ ಬಂದು ಶ್ರೀ ಮಧ್ವಾಚಾರ್ಯರನ್ನು ಆದರಪೂರ್ವಕವಾಗಿ ಸ್ವಾಗತಿಸಿದನು.)

ಜಯಸಿಂಹ ರಾಜನು ತನ್ನ ರಾಷ್ಟ್ರಕ್ಕೆ ಆಗಮಿಸಿದ ಶ್ರೀ ಮಧ್ವಾಚಾರ್ಯರನ್ನು ಅಲ್ಲಿಯೇ

ಇರುವ ವಿಷ್ಣುಮಂಗಲ ದೇವಸ್ಥಾನದಲ್ಲಿ ಚಾತುರ್ಮಾಸ್ಯ ವ್ರತವನ್ನು ಕೈಗೊಳ್ಳುವಂತೆ ಪ್ರಾರ್ಥಿಸಿದನು. ತನ್ನ ಅಪೇಕ್ಷೆಯಂತೆ ಅಲ್ಲಿ ಕುಳಿತ ಶ್ರೀಮಧ್ವಾಚಾರ್ಯರ ಚಾತುರ್ಮಾಸ್ಯ ವ್ರತವನ್ನು ವೈಭವೋಪೇತವನ್ನಾಗಿ ಮಾಡಿಸಿದನು.

ಕದಾಚಿತ್ ಪಾಠಕಾಲೇ ತು ಮಧ್ವಮೇತ್ಯ ತ್ರಿವಿಕ್ರಮಃ ॥ ೩೮॥

ಮಾಯಿಭಿಃ ಪ್ರಾರ್ಥಿತೋ ವಿದ್ವಾನ್ ವಾದಂ ಕರ್ತುಂ ಮನೋ ದಧೌ ।

ಶ್ರೀವಿಷ್ಣುಮಂಗಲ ದೇವಸ್ಥಾನದಲ್ಲಿ ಶ್ರೀಮಧ್ವಾಚಾರ್ಯರು ಚಾತುರ್ಮಾಸ್ಯ ವ್ರತದಲ್ಲಿರುವಾಗ ಒಮ್ಮೆ ಪಾಠ ಮಾಡುತ್ತಿರುವ ಸಂದರ್ಭದಲ್ಲಿ ತ್ರಿವಿಕ್ರಮ ಪಂಡಿತಾಚಾರ್ಯರು ಅವರ ಬಳಿಗೆ ಬಂದರು. ಶ್ರೀಮಧ್ವಾಚಾರ್ಯರೊಡನೆ ವಾದ ಮಾಡುವಂತೆ ತ್ರಿವಿಕ್ರಮಪಂಡಿತಾಚಾರ್ಯರನ್ನು ಅವರ ಪಕ್ಷದ ಮಾಯಾವಾದಿಗಳು ಪ್ರಾರ್ಥಿಸಿದ್ದರು. ತಮ್ಮವರ ಅಪೇಕ್ಷೆಯಂತೆ ಅವರು ಶ್ರೀಮಧ್ವಾಚಾರ್ಯರೊಡನೆ ವಾದವನ್ನು ಮಾಡಲು ನಿಶ್ಚಯಿಸಿದರು.

ಶ್ರೀ ತ್ರಿವಿಕ್ರಮಪಂಡಿತಾಚಾರ್ಯರು ಜಯಸಿಂಹ ರಾಜನ ಆಸ್ಥಾನಪಂಡಿತರ ಸ್ಥಾನವನ್ನು ಅಲಂಕರಿಸಿದ್ದರು. ವಾದದಲ್ಲಿಯೂ ಅಪ್ರತಿಮರಾಗಿದ್ದರು. ಬಾಲ್ಯದಲ್ಲಿರುವಾಗಲೇ 'ಉಷಾಹರಣ' ಕಾವ್ಯವನ್ನು ಅವರು ಬರೆದಿದ್ದರು. ಅದ್ವೈತ ಗ್ರಂಥಗಳನ್ನು ಆಳವಾಗಿ ಅಧ್ಯಯನ ಮಾಡಿದರೂ ಅವರಿಗೆ ಆ ಸಿದ್ಧಾಂತ ರುಚಿಸಲಿಲ್ಲ. ಜೊತೆಯಲ್ಲಿ ತಂದೆಯವರಾದ ಶ್ರೀಸುಬ್ರಹ್ಮಣ್ಯಪಂಡಿತಾಚಾರ್ಯರು ತಮ್ಮ ಅಂತ್ಯಕಾಲ ಸಮೀಪಿಸಿದಾಗ ಇವರನ್ನು ಕರೆದು 'ನಿರ್ಗುಣೋಪಾಸನೆ ಸುಖಸಾಧನವಲ್ಲ; ಆದ್ದರಿಂದ ಗುಣಯುಕ್ತವಾದ ಮುಕ್ತಿಗಾಗಿ ಗುಣಪೂರ್ಣನಾದ ಶ್ರೀವಾಸುದೇವನನ್ನು ಭಜಿಸು' ಎಂದು ಕಿವಿಮಾತನ್ನು ಹೇಳಿದ್ದರು. ಪರಂಪರೋಪಯಾತವಾಗಿ ಬಂದ ಮಾಯಾಗ್ರಂಥಗಳನ್ನು ಮತ್ತೊಮ್ಮೆ ಅವಲೋಕಿಸಿದಾಗ ಭಾಷ್ಯಗ್ರಂಥಗಳಲ್ಲಿ ಪರಸ್ಪರ ಅಸಾಂಗತ್ಯಾದಿ ದೋಷಗಳು ಕಂಡು ಬಂದವು. ಅಲ್ಲದೆಯೇ ಶ್ರೀ ಮಧ್ವಾಚಾರ್ಯರ ಸಿದ್ಧಾಂತದ ಗ್ರಂಥಗಳನ್ನು ಸಹ ರಾತ್ರಿಯ ಸಮಯದಲ್ಲಿ ಯಾರೂ ಕಾಣದಿದ್ದ ಹಾಗೆ ಅವಲೋಕಿಸುತ್ತಿದ್ದರು. ಸಹಜವಾಗಿ ಆ ಸಿದ್ಧಾಂತ ಅವರಿಗೆ ರುಚಿಸಿತ್ತು. ಆದರೂ ಚೆನ್ನಾಗಿ ವಿಮರ್ಶಿಸಿ ಹೆಜ್ಜೆಯನ್ನು ಮುಂದಿಡಬೇಕೆಂದು ತೀರ್ಮಾನಿಸಿ ಸಮಯವನ್ನು ಕಾಯುತ್ತಿದ್ದರು.

ಅದೇ ಸಮಯದಲ್ಲಿ ಶ್ರೀಮಧ್ವಾಚಾರ್ಯರ ಸರ್ವತೋಮುಖವಾದ ಪಾಂಡಿತ್ಯ, ಕೀರ್ತಿ, ವಾದಕೌಶಲ-ಇವುಗಳ ಮುಂದೆ ಕಿಂಕರ್ತವ್ಯಮೂಢರಾಗಿದ್ದ ಮಾಯಾವಾದಿಗಳು ತ್ರಿವಿಕ್ರಮಪಂಡಿತಾಚಾರ್ಯರನ್ನೇ ಶರಣುಹೊಂದಿದ್ದರು. ಅವರೆಲ್ಲರೂ 'ನೀವೇ

ಮಧ್ವಾಚಾರ್ಯರೊಡನೆ ವಾದ ಮಾಡಿ ಸೋಲಿಸಿ ಮಾಯಾವಾದವನ್ನು ಉಳಿಸಬೇಕು'' ಎಂದು ಪ್ರಾರ್ಥಿಸಿದರು. ಅವರ ಪ್ರಾರ್ಥನೆಯನ್ನು ಮನ್ನಿಸಿ, ಶ್ರೀ ಮಧ್ವಾಚಾರ್ಯರು ವಿಷ್ಣುಮಂಗಲಕ್ಕಿಂತ ಬೇರೆಯಾದ 'ಕುಡಿಲ್' ಎಂಬ ಸ್ಥಳದಲ್ಲಿ ಪಾಠ ಪ್ರವಚನಾದಿಗಳನ್ನು ಮಾಡುತ್ತಿರುವ ಸಮಯದಲ್ಲಿ ಇದೇ ಯೋಗ್ಯ ಕಾಲ ಎಂದು ಅರಿತು ಅವರ ಬಳಿ ಸಾರಿದರು.)

ತತಃ ಪ್ರಾಯುಂಜ್ಕ್ತ ವಿವಿಧಯುಕ್ತೀಃ ಶ್ರುತಿಯುತಾಶ್ಚ ಸಃ
ತಾಃ ಖಂಡಾಯಿತ್ವಾ ಮಧ್ವೋಽಪಿ ರೇಜೇ ಪ್ರಬಲಯುಕ್ತಿ ಭಿಃ । ।೩೯॥

ಪಾಠ ನಡೆಯುತ್ತಿದ್ದ ಸಮಯದಲ್ಲಿ ಬಂದು ಕುಳಿತ ತ್ರಿವಿಕ್ರಮಪಂಡಿತಾಚಾರ್ಯರನ್ನು ಗಮನಿಸಿದ ಶ್ರೀಮಧ್ವಾಚಾರ್ಯರು ಅವರ ಮನಸ್ಸಿನಲ್ಲಿ ಅವರನ್ನು ಕಾಡುತ್ತಿದ್ದ ಅನೇಕ ತಾತ್ವಿಕಪ್ರಶ್ನೆಗಳಿಗೆ ಉತ್ತರವೆಂಬಂತೆ ಬ್ರಹ್ಮಸೂತ್ರದಭಾಷ್ಯವನ್ನು ಪ್ರವಚನ ಮಾಡಿದರು. ಉಳಿದ ಮತಗಳನ್ನು ಬ್ರಹ್ಮಸೂತ್ರದ ಆಧಾರದ ಮೇಲೆ ಶ್ರೀಮಧ್ವಾಚಾರ್ಯರು ಖಂಡಿಸಿದರು.

ಶ್ರೀಮಧ್ವಾಚಾರ್ಯರ ಖಂಡನಾರೀತಿ ತ್ರಿವಿಕ್ರಮಪಂಡಿತಾಚಾರ್ಯರಿಗೆ ಮನಸ್ಸಿನಲ್ಲಿ ಅತೀವ ಆನಂದವನ್ನುಂಟು ಮಾಡಿದರೂ ಸಹ ಅವರೊಂದಿಗೆ ವಾದಕ್ಕೆ ಸಿದ್ಧರಾದರು. ಶ್ರೀಮಧ್ವಾಚಾರ್ಯರ ಅಭಿಪ್ರಾಯಗಳನ್ನು ಖಂಡಿಸುತ್ತಾ ಅನೇಕ ಯುಕ್ತಿಗಳನ್ನು ತ್ರಿವಿಕ್ರಮಪಂಡಿತಾಚಾರ್ಯರು ಅವರ ವಿರುದ್ಧ ಪ್ರಯೋಗಿಸಿದರು.

ಅದಕ್ಕೆ ಶ್ರೀ ಮಧ್ವಾಚಾರ್ಯರು ಪ್ರತಿಯಾಗಿ ಯುಕ್ತಿಗಳನ್ನು ಪ್ರಯೋಗಿಸುತ್ತಾ ಅನಾಯಾಸವಾಗಿಯೇ ಖಂಡಿಸತೊಡಗಿದರು. ಇಷ್ಟಕ್ಕೂ ಸೋಲಲೊಪ್ಪದ ತ್ರಿವಿಕ್ರಮ ಪಂಡಿತಾಚಾರ್ಯರು ಅತ್ಯಂತ ಪ್ರಬಲವಾದ ವೇದಗಳನ್ನು ತನ್ನ ಸಿದ್ಧಾಂತದ ಪ್ರತಿಪಾದನೆಗಾಗಿ ಬಳಸಿದರು.

ಅದಕ್ಕೂ ಸಹ ಶ್ರೀ ಮಧ್ವಾಚಾರ್ಯರು ಅವರು ಉಲ್ಲೇಖಿಸಿದ ವೇದಗಳಿಗೆ ಶಾಸ್ತ್ರಸಮ್ಮತವಾದ ಅರ್ಥವನ್ನು ಹೇಳಿ, ಅವರು ಹೇಳಿದ ಅಶಾಸ್ತ್ರೀಯ ಅರ್ಥಗಳನ್ನುಖಂಡಿಸಿದರು. ಹೀಗೆ ಯುಕ್ತಿಗಳನ್ನು, ಅಶಾಸ್ತ್ರೀಯ ಅರ್ಥವನ್ನೊಳಗೊಂಡ ಶ್ರುತಿಗಳನ್ನು ಖಂಡಿಸುತ್ತಾ, ಶ್ರೀ ಮಧ್ವಾಚಾರ್ಯರು ತ್ರಿವಿಕ್ರಮಪಂಡಿತಾಚಾರ್ಯರ ಮನಸ್ಸಿನಲ್ಲಿ ಯಾವುದೇ ರೀತಿಯ ಸಂಶಯ ಉಳಿಯದಂತೆ ಮಾಡಿ ಅವರನ್ನು ಪ್ರತ್ಯುತ್ತರರಹಿತರನ್ನಾಗಿ ಮಾಡಿದರು. ಆ ಮೂಲಕ ಆ ಸಭೆಯಲ್ಲಿ ವಿಶೇಷವಾಗಿ ಶೋಭಿಸಿದರು.

ಏವಂ ಸಪ್ತಾಷ್ಟದಿವಸಾನ್ ವಾದಂ ಕೃತ್ವಾ ತ್ರಿವಿಕ್ರಮಃ । ।೪೦॥
ಪರಾಜಿತೋಽಭೂದ್ ಮಧ್ವೇನ ಪ್ರಣನಾಮ ತತೋ ಮುದಾ।

ಹೀಗೆ ಶ್ರೀಮಧ್ವಾಚಾರ್ಯರಿಗೂ ಶ್ರೀತ್ರಿವಿಕ್ರಮಪಂಡಿತಾಚಾರ್ಯರಿಗೆ ಒಟ್ಟಿಗೆ 15 ನಗಳವರೆಗೆ ವಾದ ನಡೆಯಿತು. ಕೊನೆಯಲ್ಲಿ ತ್ರಿವಿಕ್ರಮಪಂಡಿತಾಚಾರ್ಯರು ಸೋತು ೋದರು. ಆದರೆ ಸೋತುಹೋದುದಕ್ಕೆ ಅವರಿಗೆ ಬೇಸರ ಆಗಲೇ ಇಲ್ಲ. ಯಾಕೆಂದರೆ ೊದಲೇ ಶ್ರೀಮಧ್ವಾಚಾರ್ಯರ ಸಿದ್ಧಾಂತಕ್ಕೆ ಅವರು ಮಾರು ಹೋಗಿದ್ದರು. ಹಾಗಾಗಿ ಬಹಳ ಂತೋಷದಿಂದಲೇ ತನ್ನ ಚಾಪಲ್ಯವನ್ನು ಕ್ಷಮಿಸಬೇಕು ಎನ್ನುವುದಾಗಿ ಹೇಳಿ ಶ್ರೀ ಮಧ್ವಾಚಾರ್ಯರಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಿ ಪ್ರಾರ್ಥಿಸಿದರು.

ಅಥ ಭಾಷ್ಯಂ ಚ ಶ್ರುತ್ವಾ ತು ತದ್ವ್ಯಾಖ್ಯಾಂ ಚ ಚಕಾರ ಸಃ ||೪೧||
ಆಜ್ಞಾಪಿತೋಽಪಿ ಮಧ್ವೇನ ವಿವಿಧಾರ್ಥಪ್ರಕಾಶಿನೀಮ್।

ಶ್ರೀಮಧ್ವಾಚಾರ್ಯರಲ್ಲಿ ಶಿಷ್ಯತ್ವವನ್ನು ವಹಿಸಿದ ಶ್ರೀತ್ರಿವಿಕ್ರಮಪಂಡಿತಾಚಾರ್ಯರು ರುಗಳ ಮುಖದಿಂದಲೇ ಬ್ರಹ್ಮಸೂತ್ರಭಾಷ್ಯಗ್ರಂಥದ ಪಾಠವನ್ನು ಕೇಳಿದರು. ವಿಕ್ರಮಪಂಡಿತಾಚಾರ್ಯರ ಮೇಲಿನ ಅಪಾರ ಕರುಣೆಯಿಂದ ಶ್ರೀಮಧ್ವಾಚಾರ್ಯರು ಷ್ಯಗ್ರಂಥಕ್ಕೆ ಟೀಕಾಗ್ರಂಥವೊಂದನ್ನು ಬರೆಯುವಂತೆ ಅಪ್ಪಣೆ ಮಾಡಿದರು. ಗುರುಗಳ ಆಜ್ಞೆಗೆ ನುಗುಣವಾಗಿ ಅವರು ಭಾಷ್ಯಗ್ರಂಥಕ್ಕೆ 'ತತ್ವಪ್ರದೀಪ' ಎನ್ನುವ ಹೆಸರಿನ ಟೀಕಾಗ್ರಂಥವನ್ನು ರೆದರು. ಆ ಟೀಕಾಗ್ರಂಥವಾದರೂ ಶ್ರೀ ಮಧ್ವಾಚಾರ್ಯರ ಭಾಷ್ಯಗ್ರಂಥದಲ್ಲಿರುವ ಅನೇಕ ರ್ಥಗಳನ್ನು ತೋರಿಸಿಕೊಡುವಂತಹದ್ದಾಗಿದೆ.

ನಾನಾ ಗ್ರಂಥೇ ಕೃತೇ ಮಂದಬುದ್ಧಿನಾ ಪ್ರಾರ್ಥಿತಃ ಪುನಃ ||೪೨||
ತ್ರಿವಿಕ್ರಮೇಣ ಚಕ್ರೇ ತಾಮನುವ್ಯಾಖ್ಯಾಂ ಸುದುಷ್ಕರಾಮ್।
ಏವಂ ವ್ಯಾಖ್ಯಾದಿಕಂ ಕುರ್ವನ್ ಸುಖಂ ತತ್ರಾವಸನ್ಮುನಿಃ ||೪೩||

ಶ್ರೀಮಧ್ವಾಚಾರ್ಯರು ಅನೇಕ ಗ್ರಂಥಗಳನ್ನು ರಚಿಸಿದರೂ ಸಹ ಶ್ರೀತ್ರಿವಿಕ್ರಮಪಂಡಿತಾಚಾರ್ಯರು ವಿಶೇಷವಾಗಿ ಗುರುಗಳನ್ನು ಪ್ರಾರ್ಥಿಸಿದರು. ''ತಮ್ಮ ಗ್ರಂಥಗಳಲ್ಲಿ ಅನೇಕ ಯುಕ್ತಿಗಳಿದ್ದರೂ ಸಹ ನಮ್ಮ ಪಾಲಿಗೆ ಅವುಗಳನ್ನು ತಿಳಿಯುವುದಕ್ಕೆ ಸಾಧ್ಯವಾಗುತ್ತಿಲ್ಲ. ಹಾಗಾಗಿ ಅನೇಕ ದೇವತೆಗಳಿದ್ದರೂ ಸಹ ದೇವತೆಗಳು ಸ್ಕಂದನನ್ನು ಪಡೆದಂತೆ ನಾವು ಸಹ ಇಷ್ಟು ಗ್ರಂಥಗಳಿದ್ದರೂ ಸಹ ಮತ್ತೊಂದು ಗ್ರಂಥವನ್ನು ಬಯಸುತ್ತಿದ್ದೇವೆ. ಆದ್ದರಿಂದ [illegible] ಸ್ಪಷ್ಟವಾಗಿ ಯುಕ್ತಿಗಳು ತಿಳಿಯುವ ರೀತಿಯಲ್ಲಿ ಇರುವಂತಹ ಒಂದು ಗ್ರಂಥವನ್ನು ತಾವು ರಚಿಸಬೇಕು'' ಈ ರೀತಿಯಾಗಿ ಮಂದಬುದ್ಧಿಯುಳ್ಳ ಸಾತ್ವಿಕರ ಪ್ರತಿನಿಧಿಯಾಗಿ ಶ್ರೀತ್ರಿವಿಕ್ರಮಪಂಡಿತಾಚಾರ್ಯರು ಪ್ರಾರ್ಥಿಸಿದಾಗ ಶ್ರೀ ಮಧ್ವಾಚಾರ್ಯರು ಉಳಿದವರು ರಚನೆ ಮಾಡಲು ಸಾಧ್ಯವೇ ಇಲ್ಲದಂತಹ ಅನುವ್ಯಾಖ್ಯಾನ

ಎನ್ನುವ ಗ್ರಂಥರತ್ನವೊಂದನ್ನು ರಚಿಸಿದರು.

ಶ್ರೀ ಮಧ್ವಾಚಾರ್ಯರು ಆ ಅನುವ್ಯಾಖ್ಯಾನ ಗ್ರಂಥವನ್ನು ಒಬ್ಬೊಬ್ಬ ಶಿಷ್ಯರಿ ಒಂದೊಂದು ಅಧ್ಯಾಯವನ್ನು ಒಟ್ಟಿಗೆ ಹೇಳುತ್ತಾ ಏಕಕಾಲದಲ್ಲಿ ಅನಾಯಾಸವ ಬರೆಯಿಸಿದರು. ಆ ಮೂಲಕ ತಾವು ಮುಂದೆ ಚತುರ್ಮುಖರಾಗುವವರೆಂದು ಸೂಕ್ಷ್ಮವಾಗಿ ಮಧ್ವಾಚಾರ್ಯರು ತಿಳಿಸಿರುವರು.

ಈ ರೀತಿಯಾಗಿ ಶಿಷ್ಯರಿಗೆ ಗ್ರಂಥಗಳನ್ನು ವ್ಯಾಖ್ಯಾನ ಮಾಡುತ್ತಾ ಅಲ್ಲಿ ಸುಖವ ವಾಸಮಾಡಿದರು.

ತದಾ ಪಿತೃಭ್ಯಾಂ ಹೀನಂ ತಂ ದೈವಾದ್ ಭ್ರಷ್ಟಧನಾದಿಕಮ್।
ವೀಕ್ಷ್ಯಾನುಜಂ ಸಮಸ್ತಾಂ ಸ ತದ್ವಾರ್ತಾಮ್ ಅಶೃಣೋತ್ ಶನೈಃ ।।೪೪।।

ಅದೇ ಸಮಯದಲ್ಲಿ ಶ್ರೀಮಧ್ವಾಚಾರ್ಯರ ಪೂರ್ವಾಶ್ರಮದ ತಂದೆ ತಾಯಿಯಂದಿ ವೈಕುಂಠವಾಸಿಗಳಾದರು. ಅವರ ತಮ್ಮನು (ಶ್ರೀ ಮಧ್ವಾಚಾರ್ಯರ ಪೂರ್ವಾಶ್ರಮದ ತಮ ಹಾಗೂ ಮುಂದೆ ಶ್ರೀ ವಿಷ್ಣುತೀರ್ಥರಾಗುವವರು) ತಂದೆ ತಾಯಿಗಳನ್ನು ಕಳೆದುಕೊಂ ದ್ದಲ್ಲದೇ, ಪಾಜಕದಲ್ಲಿ ವಾಸ ಮಾಡಿಕೊಂಡಿರುವಾಗ ದೈವ ಸಂಕಲ್ಪದಂತೆ ಸಂಪತ್ತು, ಧಾ ಗೋ ಎಲ್ಲವನ್ನು ಕಳೆದುಕೊಳ್ಳುವಂತಾಯಿತು. ಉತ್ತಮಾಧಿಕಾರಿಗಳಾಗಿದ್ದ ಅವ ವೈರಾಗ್ಯವನ್ನು ಹೊಂದಿ ಶ್ರೀಮಧ್ವಾಚಾರ್ಯರ ಸನ್ನಿಧಿಗೆ ಬಂದರು.

ತಮ್ಮ ಬಳಿಗೆ ಬಂದ ಅವರಿಂದ ಎಲ್ಲ ವಿಷಯಗಳನ್ನು ಶ್ರೀಮಧ್ವಾಚಾರ್ಯರು ಕೇ ತಿಳಿದುಕೊಂಡರು.

ತಾಮುಕ್ತ್ವಾ ಪ್ರಾರ್ಥಯಂತಂ ತಂ ಚತುರ್ಥಾಶ್ರಮಮೇವ ಚ।
ಅತೀತ್ಯ ಶಾರದಂ ಕಾಲಂ ತಥಾ ಕುರ್ವೇ ನ ಸಂಶಯಃ ।।೪೫।।
ಗಚ್ಛಾಽಧುನಾ ಗೃಹಂ ಸೌಮ್ಯೇತ್ಯಬ್ರವೀತ್ ಸೋಽಪ್ಯಗಾಚ್ಚ ತತ್ ।

ಎಲ್ಲ ವೃತ್ತಾಂತಗಳನ್ನು ತಮ್ಮ ಶ್ರೀ ಮಧ್ವಾಚಾರ್ಯರಿಗೆ ತಿಳಿಸಿದರು. ಅಲ್ಲದೇ ಮೆಲ್ಲ ತಮಗೂ ಸಂನ್ಯಾಸಾಶ್ರಮವನ್ನು ನೀಡಿ ಅನುಗ್ರಹಿಸಬೇಕೆಂದು ಪ್ರಾರ್ಥಿಸಿದರು. ಅದಕ್ಕೆ ಶರತ್ಕಾಲ ಕಳೆದ ಮೇಲೆ ತಾವೇ ಬಂದು ಸಂನ್ಯಾಸಾಶ್ರಮವನ್ನು ನೀಡುತ್ತೇವೆ ಎಂದು ಅವರನ್ನು ಸಂತೈಸಿ ಮನೆಗೆ ಹಿಂತಿರುಗಲು ಹೇಳಿದರು. ಅದರಂತೆ ಅವರು ಪಾಜಕದಲ್ಲಿರುವ ತಮ್ಮ ಮನೆಗೆ ತೆರಳಿದರು.

ತತ್ಕಾಲೇ ತು ಗತೇ ಮಧ್ವೋ ಗೃಹಮೇತ್ಯ ತಥಾಽಕರೋತ್ ।।೪೬।।
ಪರಂ ಬ್ರಹ್ಮ ದದೌ ತಸ್ಮೈ ವಿಷ್ಣುತೀರ್ಥೇತಿ ನಾಮ ಚ ।

ಶರತ್ಕಾಲ ಕಳೆಯಲು (ಚಾತುರ್ಮಾಸ್ಯ ವ್ರತ ಮುಗಿಯಲು) ಜಯಸಿಂಹ ರಾಜನನ್ನು ಮಾಧಾನ ಪಡಿಸಿ ರಾಜ್ಯದಲ್ಲಿರುವಂತೆ ಮಾಡಿ ತಮ್ಮ ಅವತಾರಕ್ಷೇತ್ರವಾದ ಪಾಜಕವನ್ನು ೀ ಮಧ್ವಾಚಾರ್ಯರು ತಲುಪಿದರು. ತಮ್ಮನ ಪ್ರಾರ್ಥನೆಯಂತೆ ಶುಭ ದಿವಸದಲ್ಲಿ ಅವರಿಗೆ ೀ ಮಧ್ವಾಚಾರ್ಯರು ಸಂನ್ಯಾಸಾಶ್ರಮ ದೀಕ್ಷೆಯನ್ನು ನೀಡಿದರು. ಜೊತೆಯಲ್ಲಿ ನ್ಯಾಸಿಗಳಾದ ಅವರಿಗೆ 'ವಿಷ್ಣುತೀರ್ಥ' ಎನ್ನುವ ಅಭಿಧಾನವನ್ನೂ ನೀಡಿ ಅನುಗ್ರಹಿಸಿದರು.

ಸೋಽಪಿ ಕೃತ್ವಾಽನಿರುದ್ಧಾಖ್ಯಯತಿಂ ಸ್ಕಾಂದಭುವಿ ನ್ಯಧಾತ್ ॥ ೪೭॥
ತಥಾ ವ್ಯಾಸಾಭಿಧಾನಂ ಚ ಸ್ವಪದೇ ಸಂವಿರಕ್ತಿಮಾನ್ ।
ತಪಃ ಕರ್ತುಂ ಸ್ವಯಂ ಪ್ರಾಪ ಕುಮಾರಾಖ್ಯಂ ಮಹೀಧರಮ್ ।೪೮॥
ತತ್ರ ವಾಸಂ ಹರಿಂ ಧ್ಯಾಯನ್ ಚಕ್ರೇ ಮಧ್ವಮುನೇಽನುಗಃ ॥

ವೈರಾಗ್ಯಶಾಲಿಗಳಾದ ಶ್ರೀವಿಷ್ಣುತೀರ್ಥರು ಅನಿರುದ್ಧತೀರ್ಥ ಎನ್ನುವ ಶಿಷ್ಯರನ್ನು ೀಕರಿಸಿ, ಅವರನ್ನು ತಾವು ಸ್ಥಾಪಿಸಿದ ಶ್ರೀಸುಬ್ರಹ್ಮಣ್ಯ ಸಂಸ್ಥಾನದಲ್ಲಿರುವಂತೆ ಮಾಡಿದರು. ಮುಂದೆ ಅವರಿಂದ ಸುಬ್ರಹ್ಮಣ್ಯ ಮಠದ ಯತಿಗಳ ವಂಶ (ಪೀಳಿಗೆ) ಆರಂಭಗೊಂಡು ಮುಂದುವರಿಯಿತು.) ಹಾಗೆಯೇ ವ್ಯಾಸತೀರ್ಥರೆನ್ನುವ ಇನ್ನೊಬ್ಬ ಶಿಷ್ಯರನ್ನು ಸ್ವೀಕರಿಸಿ ವರನ್ನು ತಮ್ಮ ಸಂಸ್ಥಾನದ ಪೀಳಿಗೆಯಲ್ಲಿ (ಸೋದೆ ಮಠದ ಯತಿ ಪರಂಪರೆಯಲ್ಲಿ) ಮುಂದುವರಿಯುವಂತೆ ಮಾಡಿದರು.

ಹೀಗೆ ಸಂಸ್ಥಾನದ ಹೊಣೆಯನ್ನು ಶಿಷ್ಯರಿಬ್ಬರಿಗೆ ವಹಿಸಿಕೊಟ್ಟು, ವಿರಕ್ತ ಶಿರೋಮಣಿಗಳಾಗಿ, ತಪಸ್ಸನ್ನು ಆಚರಿಸಲು, ಶ್ರೀ ಮಧ್ವಾಚಾರ್ಯರ ಸಂಕಲ್ಪದಂತೆ, ಮುಂದೆ ಲಿಯುಗದಲ್ಲಿ 36,000 ವರ್ಷಗಳು ಕಳೆಯಲು, ಮಧ್ವಮತ ಲುಪ್ತವಾಗಲು ಪುನಃ ಸಿದ್ಧಾಂತದ ಪ್ರಚಾರಕ್ಕಾಗಿ ಮರಳಿ ಬರುವ ಸಂಕಲ್ಪವನ್ನು ತೊಟ್ಟವರಾಗಿ ಶ್ರೀ ಸುಬ್ರಹ್ಮಣ್ಯ ಕ್ಷೇತ್ರದ ಮೀಪದಲ್ಲಿರುವ ಕುಮಾರಪರ್ವತವನ್ನು ಏರಿ, ಶ್ರೀಹರಿಯನ್ನು ಧ್ಯಾನಿಸುತ್ತಾ ವಾಸ ಮಾಡಿದರು.

ತತ್ರ ತತ್ರಾವಸತ್ ಮಧ್ವಃ ಸ್ವಶಿಷ್ಯೈರಾದೃತಃ ಸುಖಮ್ ॥ ೪೯॥
ಗೋದಾತೀರೇ ಪುರಾ ಭಾಷ್ಯಮ್ ಅಶೃಣೋತ್ ಯಸ್ತು ಮಧ್ವತಃ ।
ಸ ಏತ್ಯ ಮಧ್ವಮ್ ಅಭವತ್ ಪದ್ಮನಾಭಯತಿಸ್ತದಾ ॥ ೫೦ ॥

ಶ್ರೀಮಧ್ವಾಚಾರ್ಯರು ಅಲ್ಲಲ್ಲಿ ವಾಸ ಮಾಡುತ್ತಾ ಕಾಲವನ್ನು ಕಳೆದರು. ಶಿಷ್ಯರು ಅವರನ್ನು ಭಕ್ತಿಯಿಂದ ಸೇವಿಸುತ್ತಾ ಸುಖವಾಗಿ ಅವರೊಂದಿಗೆ ಇದ್ದರು. ಹಿಂದೆ ಗೋದಾವರೀ ನದಿಯ ತೀರದಲ್ಲಿ ಶ್ರೀ ಮಧ್ವಾಚಾರ್ಯರಿಂದಲೇ ಭಾಷ್ಯಗ್ರಂಥವನ್ನು ಶ್ರವಣ ಮಾಡಿದ

ಶೋಭನಭಟ್ಟರೆಂಬ ಬ್ರಾಹ್ಮಣರೊಬ್ಬರು ಮಧ್ವಾಚಾರ್ಯರ ಬಳಿಗೆ ಬಂದು ಸಂನ್ಯಾಸಾಶ್ರಮ ದೀಕ್ಷೆಯನ್ನು ಪಡೆದು ಪದ್ಮನಾಭತೀರ್ಥರಾದರು.

ಏವಂ ವಿವಿಧದೇಶಸ್ಥಾಃ ಯೋಗ್ಯಾಃ ಸಂನ್ಯಾಸಿನೋಽಭವನ್ ।
ಬಹುಶಿಷ್ಯಪ್ರಶಿಷ್ಯೈಶ್ಚ ಯುತೋ ರೇಜೇ ಮಹಾಮತಿಃ ॥ ೫೧
ಅಜ್ಞಾನತಿಮಿರಂ ಹತ್ವಾ ತಾರಾಧಿಪತಿವದ್ ಭುವಿ ।

ಶೋಭನ ಭಟ್ಟರಂತೆ (ಮುಂದಿನ ಶ್ಲೋಕಗಳಲ್ಲಿ ನಿರೂಪಿಸುವಂತೆ) ಅನೇ ಪ್ರದೇಶಗಳಲ್ಲಿದ್ದ ಯೋಗ್ಯಸಜ್ಜನರೂ ಸಹ ಶ್ರೀ ಮಧ್ವಾಚಾರ್ಯರಿಂದ ಸಂನ್ಯಾಸ ದೀಕ್ಷೆಯನ್ನು ಪಡೆದು ಸಂನ್ಯಾಸಿಗಳಾದರು. ಅವರೂ ಶಿಷ್ಯರನ್ನು ಸ್ವೀಕರಿಸಿದರು. ಶ್ರೀ ಶ್ರೀಮಧ್ವಾಚಾರ್ಯರು ತಮ್ಮ ಶಿಷ್ಯ, ಪ್ರಶಿಷ್ಯರೊಂದಿಗೆ ಯೋಗ್ಯ ಜನರ ಅಜ್ಞಾನ ಎಮ್ಬ ಅಂಧಕಾರವನ್ನು ತೆಗೆದು ಹಾಕುತ್ತಾ ಭೂಮಿಯಲ್ಲಿ ಚಂದ್ರನಂತೆ ರಾರಾಜಿಸಿದರು.

ಬ್ರಹ್ಮೋಪದೇಶಮಾದಾಯ ಸ್ಥಿತಾ ಯೇ ಯೇ ಯತೀಶ್ವರಾಃ ॥ ೫೨ ॥
ಸುಖತೀರ್ಥೇನ ತನ್ಮಧ್ಯೇ ಮುಖ್ಯಶಿಷ್ಯಾ ನವಾಭವನ್ ।

ಶ್ರೀ ಮಧ್ವಾಚಾರ್ಯರಿಂದ ಸಂನ್ಯಾಸದೀಕ್ಷೆಯನ್ನು ಪಡೆದು ಸಂನ್ಯಾಸಿಗಳಾದ ಅನೇ ಯತಿಗಳಲ್ಲಿ ಒಂಭತ್ತು ಮಂದಿ ಯತಿಗಳು ಪ್ರಮುಖರಾಗಿದ್ದರು.

ವಿಷ್ಣುತೀರ್ಥಃ ಕವಿವರಃ ಪದ್ಮನಾಭೋ ಜನಪ್ರಿಯಃ ॥ ೫೩ ॥
ಜಿತೇಂದ್ರಿಯೋ ಹೃಷಿಕೇಶಃ ನೃಸಿಂಹೋ ವಾದಿಭೀಷಕಃ ।
ಜನಾರ್ದನೋ ಜನಕ್ಷೋಭೀ ಹ್ಯುಪೇಂದ್ರೋ ಬಹುಭಾಗ್ಯವಾನ್ ॥ ೫೪ ॥
ಭದ್ರದೋ ವಾಮನೋ ರಾಮಃ ಸ್ವಜನಾನಾಂ ಸುಖಪ್ರದಃ ।
ಅಧೋಕ್ಷಜಃ ತ್ವಧಃ ಕೃತ್ವಾ ಕುಜ್ಞಾನಂ ಹಿ ಸ್ಥಿತಃ ಸದಾ ॥ ೫೫ ॥

ಅವರಲ್ಲಿ ಶ್ರೀ ವಿಷ್ಣುತೀರ್ಥರು ಶ್ರೇಷ್ಠ ಜ್ಞಾನಿಗಳಾಗಿದ್ದರು, ಶ್ರೀ ಪದ್ಮನಾಭತೀರ್ಥರು ಬಹಳ ಪ್ರಸಿದ್ಧಿಯನ್ನು ಪಡೆದವರು. ಶ್ರೀ ಹೃಷೀ ಕೇಶತೀರ್ಥರು ಇಂದ್ರಿಯ ನಿಗ್ರಹದ ಸಿದ್ಧಿಯನ್ನು ಗಳಿಸಿದ್ದರು. ಶ್ರೀ ನೃಸಿಂಹ ತೀರ್ಥರು ದುರ್ವಾದಿಗಳನ್ನು ನಿರಾಕರಿಸುವುದರ ಅತ್ಯಂತ ಸಮರ್ಥರಾಗಿದ್ದರು. ಶ್ರೀಜನಾರ್ದನತೀರ್ಥರು ದುರ್ಜನರನ್ನು ಮೋ ಗೊಳಿಸುವುದರಲ್ಲಿ ನಿಪುಣರಾಗಿದ್ದರು. ಶ್ರೀಉಪೇಂದ್ರತೀರ್ಥರು ಬಹಳ ಸಂಪತ್ತನ್ ಹೊಂದಿದವರಾಗಿದ್ದರು. ಶ್ರೀ ವಾಮನ ತೀರ್ಥರು ಜನರಿಗೆ ಶ್ರೇಯಸ್ಸನ್ನು ಕರುಣಿಸುತ್ತಿದ್ದರು ಶ್ರೀರಾಮತೀರ್ಥರು ಭಕ್ತರ ಕಷ್ಟಗಳನ್ನು ನೀಗಿಸುತ್ತಿದ್ದರು. ಶ್ರೀ ಅಧೋಕ್ಷಜತೀರ್ಥ

ದುಷ್ಟಜ್ಞಾನವನ್ನು ಧಿಕ್ಕರಿಸಿದ ಮಹಾತ್ಮರಾಗಿದ್ದರು. ಹೀಗೆ ಆಯಾ ಹೆಸರುಗಳಿಂದ ಆ ಯತಿಶ್ರೇಷ್ಠರು ಭೂಮಿಯಲ್ಲಿ ಪ್ರಸಿದ್ಧರಾಗಿದ್ದರು.

ತತೋ ದೇಶಮಟಿತ್ವಾ ತು ವಾಸಂ ಚಕ್ರೇ ಮಹಾಮತಿ । || ೫೬ ||
ಕಣ್ವತೀರ್ಥೇ ಗ್ರಾಮವರೇ ಪಾವನೇ ಪವನಪ್ರಿಯೇ ।

ಒಮ್ಮೆ ಶ್ರೀಮಧ್ವಾಚಾರ್ಯರು ತಮ್ಮ ಶಿಷ್ಯರೊಂದಿಗೆ ದೇಶ ಸಂಚಾರ ಮಾಡುತ್ತಾ ಶ್ರೇಷ್ಠವಾದ ಕಣ್ವ ತೀರ್ಥಕ್ಕೆ ಬಂದರು. ಆ ಕಣ್ವತೀರ್ಥವಾದರೂ ಶ್ರೀ ವಾಯುದೇವರಿಗೆ ಬಹಳ ಪ್ರಿಯವಾದ ಸ್ಥಾನವಾಗಿ ಪರಮ ಪವಿತ್ರವಾಗಿತ್ತು. ಅಂತಹ ಪುಣ್ಯಸ್ಥಳದಲ್ಲಿ ಗುರುಗಳು ವಾಸ ಮಾಡಿದರು.

ಏವಂ ಸ್ಥಿತೇ ಕದಾಚಿತ್ತು ಹರಿಧಾಮ ಯಯೌ ಗುರುಃ || ೫೭ ||
ಅಚ್ಯುತಪ್ರೇಕ್ಷಸಂಜ್ಞಸ್ತು ಚ ಹರಿಂ ಧ್ಯಾತ್ವಾ ಮುದಾ ಹೃದಿ [redacted]

ಹೀಗೆ ಶ್ರೀಮಧ್ವಾಚಾರ್ಯರು ಕಣ್ವತೀರ್ಥದಲ್ಲಿ ವಾಸ ಮಾಡಿಕೊಂಡಿರುವಾಗ ಶ್ರೀ ಅಚ್ಯುತಪ್ರೇಕ್ಷತೀರ್ಥರು ತಮ್ಮ ಶಿಷ್ಯರಾದ ಶ್ರೀಪುರುಷೋತ್ತಮತೀರ್ಥರಲ್ಲಿ ಸಂಸ್ಥಾನದ ಹೊರೆಯನ್ನು ಇರಿಸಿ, ಹೃದಯದಲ್ಲಿ ಶ್ರೀಹರಿಯನ್ನು ಧ್ಯಾನಿಸುತ್ತಾ ಸಂತೋಷದಿಂದ ಶ್ರೀಹರಿಯ ಲೋಕವನ್ನು ಸೇರಿದರು.

ಸೋಽಪಿ ಕಾಲಾಂತರೇ ಶಿಷ್ಯೈರಾಹ್ವಯಿತ್ವಾ ತು ಮಾಂ ತದಾ ।
ಪೂರ್ಣಪ್ರಜ್ಞಸಮೀಪಸ್ಥಂ ದತ್ವಾ ಸರ್ವಂ ಕೃಪಾ ಮಯಿ || ೫೯ ||
ಕೃತ್ವಾಽಗಾದ್ ವಿಷ್ಣುಲೋಕಂ ಧ್ಯಾನಂ ಕುರ್ವನ್ ಹರಿಂ ಮುದಾ ॥

ಶ್ರೀಅಚ್ಯುತಪ್ರೇಕ್ಷತೀರ್ಥರು ವೈಕುಂಠವಾಸಿಗಳಾದ ನಂತರ ಸ್ವಲ್ಪ ಸಮಯದಲ್ಲಿ ಶ್ರೀ ಮಧ್ವಾಚಾರ್ಯರ ಸಮೀಪದಲ್ಲಿದ್ದ ನನ್ನನ್ನು (ಸತ್ಯತೀರ್ಥರನ್ನು) ಶ್ರೀ ಪುರುಷೋತ್ತಮ ತೀರ್ಥರು ಶಿಷ್ಯರ ಮೂಲಕ ತಾವು ವಾಸಮಾಡುತ್ತಿದ್ದ ಸ್ಥಳಕ್ಕೆ ಕರೆಸಿದರು. ಗುರುಗಳ ಬಳಿಗೆ ಬಂದ ನನಗೆ ಸಂಸ್ಥಾನದ ಹೊಣೆಗಾರಿಕೆಯನ್ನು ಹೊರಿಸಿ, ವಿಶೇಷವಾದ ಅನುಗ್ರಹವನ್ನು ಮಾಡಿ ಗುರುಗಳು ಶ್ರೀಹರಿಯನ್ನು ಧ್ಯಾನ್ಯ ಮಾಡುತ್ತಾ ಸಂತೋಷದಿಂದ ಶ್ರೀಹರಿಯ ಲೋಕವನ್ನು ಸೇರಿದರು.

ಅಥ ಸೀತಾಪತಿಂ ಪೂಜ್ಯಂ ಸನಕಾದ್ಯೈರಹಂ ತದಾ || ೬೦ ||
ಆದಾಯ ವಾಸಂ ಕೃತವಾನ್ ಪ್ರಾಪ್ಯಂ ತಂ ಮಧ್ವಸನ್ನಿಧೌ ।

ಗುರುಗಳು ವೈಕುಂಠವಾಸಿಗಳಾದ ಮೇಲೆ ಸನಕಾದಿಗಳ ಪರಂಪರೆಯಿಂದ ಪೂಜಿತವಾದ,

ಸೀತಾಪತಿ ಶ್ರೀರಾಮಚಂದ್ರದೇವರನ್ನು ಹಿಡಿದುಕೊಂಡು ನಾನು ಶ್ರೀಮಧ್ವಾಚಾರ್ಯರ ಒಳಗೆ ಹೋಗಿ ವಾಸ ಮಾಡಿದೆನು.

ತತೋ ದೇಶಾಂತರಂ ಗತ್ವಾ ಪೂರ್ಣಪ್ರಜ್ಞೋ ಹರಿಪ್ರಿಯಃ
ತತ್ರದ್ದೇಶೇಽದ್ಭುತಂ ಕರ್ಮ ಲೀಲಯಾ ಕೃತವಾನ್ ಪುನಃ । ॥ ೬೧॥

ಶ್ರೀಮಧ್ವಾಚಾರ್ಯರು ಕಣ್ವತೀರ್ಥದಿಂದ ಇನ್ನೊಂದು ಪ್ರದೇಶಕ್ಕೆ ಹೋದರು. ತಾವು ಹೋದಲೆಲ್ಲಾ ಆ ಪ್ರದೇಶದಲ್ಲಿ ಅನಾಯಾಸವಾಗಿಯೇ ಆಶ್ಚರ್ಯವನ್ನುಂಟುಮಾಡುವ ಕೆಲಸಗಳನ್ನು ಅವರು ಮಾಡುತ್ತಿದ್ದರು.

ಕ್ವಚಿದ್ದೇಶೇ ಕ್ಷಣಾಚ್ಚಕ್ರೇ ಬೀಜಸೃಷ್ಟಿಂ ಮಹಾಮತಿಃ ॥ ೬೨॥

ಒಮ್ಮೆ ಗೋಮತೀನದಿಯ ತೀರದಲ್ಲಿ ಶೂದ್ರ ರಾಜನೊಬ್ಬನು ವೇದದಲ್ಲಿ ಹೇಳಿದ್ದು ಸುಳ್ಳು; ಯಾಕೆಂದರೆ ಅದರಲ್ಲಿ ಹೇಳಿದ ಫಲ ಆಗುವುದಿಲ್ಲ'' ಎಂದು ಆಕ್ಷೇಪಿಸಿದಾಗ ಶ್ರೀಮಧ್ವಾಚಾರ್ಯರು 'ವೇದದಲ್ಲಿ ಹೇಳಿದ ಫಲವನ್ನು ಪಡೆಯಬೇಕಾದರೆ ಯೋಗ್ಯತೆ ಇರಬೇಕು. ಆದ್ದರಿಂದ ವೇದದಲ್ಲಿ ಹೇಳಿದ್ದು ಸುಳ್ಳಲ್ಲ' ಎಂದು ತಿಳಿಸಿದರು. ಅದಕ್ಕೆ ಆ ಶೂದ್ರ ರಾಜನು 'ಯೋಗ್ಯತೆ ಇರಬೇಕಾದರೆ ಅಂತಹ ಯೋಗ್ಯತೆಯುಳ್ಳ ವ್ಯಕ್ತಿಯಿಂದ ಫಲ ಆಗಬೇಕಾಗುತ್ತದೆ. ಅಂತಹ ವ್ಯಕ್ತಿಯೇ ಇಲ್ಲ. ಆದ್ದರಿಂದ ಇದೆಲ್ಲವೂ ಸುಳ್ಳು'' ಎಂದು ಆಕ್ಷೇಪಿಸಿದಾಗ ಶ್ರೀ ಮಧ್ವಾಚಾರ್ಯರು ಹೆಸರುಕಾಳನ್ನು ಅಂಗೈಯಲ್ಲಿಟ್ಟುಕೊಂಡು ಔಷಧೀಸೂಕ್ತ ಸೂಕ್ತವನ್ನು ಪಠಿಸಿ ಆ ಕಾಳಿನಿಂದ ತಕ್ಷಣವೇ ಮೊಳಕೆ,ದಲ, ಎಲೆ ಹಾಗೂ ಕಾಳುಗಳನ್ನು ಸೃಷ್ಟಿ ಮಾಡಿದರು.

ಕದಾಚಿದ್ ರಾತ್ರಿಕಾಲೇ ತು ಶಿಷ್ಯೇ ಭ್ಯೋ ಹಿ ನಖತ್ವಿಷಾ ।
ವ್ಯಾಖ್ಯಾಂ ಚಕಾರ ಭಗವಾನ್ ಕಸ್ಮಿಂಶ್ಚಿದ್ ವಿಷಯೇ ಕ್ವಚಿತ್ ॥ ೬೩॥

ಒಮ್ಮೆ ರಾತ್ರಿ ಸಮಯದಲ್ಲಿ ಶ್ರೀಮಧ್ವಾಚಾರ್ಯರು ಶಿಷ್ಯರಿಗೆ ಪಾಠಮಾಡುತ್ತಿದ್ದ ಸಮಯದಲ್ಲಿ ದೀಪ ಆರಿ ಹೋದಾಗ ತಮ್ಮ ಕಾಲಿನ ಹೆಬ್ಬೆರಳಿನ ಉಗುರಿನ ಕಾಂತಿಯಿಂದ ಬೆಳಕು ಬರುವಂತೆ ಮಾಡಿ ಪಾಠವನ್ನು ಮುಂದುವರಿಸಿದರು.

ದುರ್ಧರಾಂ ತು ಶಿಲಾಂ ಧೃತ್ವಾಽಸ್ಥಾಪಯಚ್ಚ ಸ್ಥಲಾಂತರೇ ।
ತಥಾ ದೇಶಾಂತರೇ ಮಧ್ವೋ ವಾರಿಧಿಂ ವಿಸ್ಮಯಂ ನಮನ್ ॥೬೪॥
ಚಕಾರ ನಿಸ್ವನಂ ನೃಣಾಂ ತತೋ ಸ ವಿಷಯಂ ಗತಃ ।

'ಕಳಸ' ಎಂಬ ಸ್ಥಳದಲ್ಲಿ ಜನರ ಉಪಕಾರಕ್ಕೋಸ್ಕರ ಒಂದು ಕಡೆಯಲ್ಲಿದ್ದ, ಸಾವಿರಾರು

ರಿಂದಲೂ ಎತ್ತಲು ಸಾಧ್ಯವಿಲ್ಲದ ಒಂದು ದೊಡ್ಡ ಬಂಡೆಯನ್ನು ಒಂದೇ ಕೈಯಲ್ಲಿ ಎತ್ತಿ ದು ಯೋಗ್ಯಸ್ಥಳದಲ್ಲಿ ಇರಿಸಿದರು.

ಮತ್ತೊಮ್ಮೆ ಶ್ರೀ ಮಧ್ವಾಚಾರ್ಯರು ಕಣ್ವತೀರ್ಥದ ಬಳಿಯಿರುವ ಸಮುದ್ರಕ್ಕೆ ರ್ಯಗ್ರಹಣದ ಸಮಯದಲ್ಲಿ ಹೋದಾಗ, ತಮ್ಮ ಕಟಾಕ್ಷವನ್ನು (ಕುಡಿಗಣ್ಣಿನ ೋಟವನ್ನು) ಸಮುದ್ರದತ್ತ ಬೀರಿದರು. ಒಡನೆಯ ಸಮುದ್ರದ ಘೋಷವೇ ಇಲ್ಲದಂತಾಗಿ ಮಾನ್ಯಕೆರೆಯಂತಾಯಿತು. ಅದನ್ನು ನೋಡಿದ ಜನರಿಗೆಲ್ಲ ಶ್ರೀಮಧ್ವಾಚಾರ್ಯರ ಹಿಮೆಯನ್ನು ನೋಡಿ ಬಹಳ ಆಶ್ಚರ್ಯವಾಯಿತು. ಈ ಘಟನೆಯಾದ ನಂತರ ೀಮಧ್ವಾಚಾರ್ಯರು ಒಮ್ಮೆ ಮತ್ತೊಂದು ಸ್ಥಳಕ್ಕೆ ಹೋದರು.

ತತ್ರ ದ್ವೌ ಬ್ರಾಹ್ಮಣಾವೇತ್ಯ ಪರೀಕ್ಷಾರ್ಥಂ ಚ ತದ್ಗಲಮ್ ||೬೫||
ಗೃಹೀತ್ವಾ ಮರ್ದಿತುಂ ಶಕ್ತೌ ನಾಭೂತಾಂ ಪತಿತೌ ಭುವಿ ।
ಏವಂ ಪರೀಕ್ಷಾಂ ವಿವಿಧಾಂ ಕೃತ್ವಾ ಜ್ಞಾತ್ವಾ ಬಲಂ ಮಹತ್ ||೬೬||
ಅಯಂ ತು ಪುರುಷೋ ವಿದ್ವಾನ್ ಭೀಮ ಏವ ನ ಸಂಶಯಃ।
ಇತ್ಯುಕ್ತ್ವಾ ತೌ ಜನಾನ್ ಸರ್ವಾನ್ ಮಂದಿರಂ ಪ್ರಾಪತುಃ ಕಿಲ ||೬೭||

ಆ ಸ್ಥಳದಲ್ಲಿ ಗಂಡವಾಟ (ಕೋಡಿಂಜಾಡಿ) ಎನ್ನುವ ಬ್ರಾಹ್ಮಣನು ತನ್ನ ಅಣ್ಣನೊಂದಿಗೆ ೂಡಿಕೊಂಡು ಶ್ರೀಮಧ್ವಾಚಾರ್ಯರ ಬಲವನ್ನು ಪರೀಕ್ಷಿಸ ಬೇಕೆಂದು ಬಯಸಿದನು. ಅದಕ್ಕೆ ಶ್ರೀಮಧ್ವಾಚಾರ್ಯರು ಸಮ್ಮತಿಸಿದರು. ಅವರಿಬ್ಬರೂ ಏಕಕಾಲದಲ್ಲಿ ಶ್ರೀಮಧ್ವಾಚಾರ್ಯರ ಂಠವನ್ನು ಹಿಡಿದುಕೊಂಡು ಒಮ್ಮೆಲೇ ಅಮುಕುವುದಕ್ಕೆ ಆರಂಭಿಸಿದರು. ಅವರು ಅಮುಕುವುದಕ್ಕೆ ಆರಂಭಿಸುತ್ತಿದ್ದಂತೆ ಶ್ರೀಮಧ್ವಾಚಾರ್ಯರ ಕಂಠ ಮತ್ತಷ್ಟು ಕಠಿಣವಾಗುತ್ತಾ ಹೋಯಿತು. ಆದರೆ ಸ್ವಲ್ಪವೂ ಕಂಠವನ್ನು ಅಮುಕುವುದಕ್ಕೆ ಸಾಧ್ಯವಾಗದೇ ಆಯಾಸಗೊಂಡು ಅವರಿಬ್ಬರೂ ಭೂಮಿಯ ಮೇಲೆ ಬಿದ್ದು ಬಿಟ್ಟರು.

ಅಲ್ಲದೇ ಅವರಿಬ್ಬರೂ ವಿಶ್ರಾಂತಿಯನ್ನು ತೆಗೆದುಕೊಂಡ ಬಳಿಕ ಶ್ರೀ ಮಧ್ವಾಚಾರ್ಯರೇ ತಮ್ಮ ಕೈಯ ಬೆರಳನ್ನು ಭೂಮಿಯ ಮೇಲೆ ಇರಿಸಿ, ಅದನ್ನು ನೆಲದಿಂದ ತೆಗೆಯಲು ಅವರಿಬ್ಬರಿಗೂ ತಿಳಿಸಿದರು. ಅದರಂತೆ ಅವರಿಬ್ಬರೂ ಆ ಒಂದು ಬೆರಳನ್ನು ಮೇಲೆಕ್ಕೆತ್ತಲು ಬಹಳ ಪ್ರಯತ್ನಿಸಿದರು. ಆದರೆ ಎಷ್ಟು ಪ್ರಯತ್ನಿಸಿದರೂ ಸಹ ಅವರಿಬ್ಬರಿಗೂ ಆ ಬೆರಳನ್ನು ಮೇಲಕ್ಕೆತ್ತುವುದಿರಲಿ; ಅದನ್ನು ಅಲುಗಾಡಿಸಲೂ ಸಾಧ್ಯವಾಗಲಿಲ್ಲ.

ಹೀಗೆ ಬಹಳ ರೀತಿಯಲ್ಲಿ ಶ್ರೀಮಧ್ವಾಚಾರ್ಯರನ್ನು ಪರೀಕ್ಷಿಸಲು ಹೋಗಿ ಅವರ ಬಲ ಎಂತಹದು ಎಂಬುದನ್ನು ತಿಳಿದು 'ಈ ಸರ್ವಜ್ಞನಾದ ಮಹಾಪುರುಷ ಭೀಮನೇ

ಆಗಿರುವನು; ಸಂಶಯವೇ ಇಲ್ಲ' ಎಂದು ತೀರ್ಮಾನಿಸಿ ಕೊಂಡರು. ಅಲ್ಲದೇ ಅಲ್ಲಿ ನೆ ಜನರನ್ನು ಕುರಿತು ಅದೇ ಮಾತನ್ನು ಹೇಳಿ ಮಂದಿರಕ್ಕೆ ಹೋದರು.

('ಗಂಡವಾಟ' ಎನ್ನುವ ಬ್ರಾಹ್ಮಣ ಎಂತಹ ಬಲಶಾಲಿಯಾಗಿದ್ದನು ಎ ವಿಷಯದಲ್ಲಿ 'ಸುಮಧ್ವವಿಜಯ'ದಲ್ಲಿ ಎರಡು ಘಟನೆಗಳು ಉಲ್ಲೇಖಿಸಲ್ಪಟ್ಟಿವೆ. ಗಂಡವಾಟ ಎನ್ನುವ ಬ್ರಾಹ್ಮಣ ಶ್ರೀಕಾಂತೇಶ್ವರ ದೇವಾಲಯದಲ್ಲಿ ಒಮ್ಮೆ ಬಲಶಾ ಮೂವತ್ತು ಮಂದಿ ತಂದಿರಿಸಿದ್ದ ಧ್ವಜಸ್ತಂಭವನ್ನು ತಾನೊಬ್ಬನೇ ಎತ್ತಿ ತಂದು ಮತ್ತೊಂ ಕಡೆಯಲ್ಲಿ ಇರಿಸಿದನು. ಇನ್ನೊಮ್ಮೆ ಬಹಳ ಭಾರವಾದ ಗದೆಯಿಂದ ಒಂದು ತೆಂಗಿನಮ ಒಡಿದು, ಅಷ್ಟರಿಂದಲೇ ತೆಂಗಿನ ಮರದಿಂದ ಕಾಯಿಗಳು ಬೀಳುವಂತೆ ಮಾಡಿದ್ದನು. ಅಂ ಬಲಶಾಲಿಯಾದ ಆ ಬ್ರಾಹ್ಮಣ ಶ್ರೀಮಧ್ವಾಚಾರ್ಯರನ್ನು ಪರೀಕ್ಷಿಸಲು ಬಂದು ಸೋ ಬಸವಳಿದು ಹೋದನು.)

ಏವಂ ಕೃತ್ವಾ ವ್ರಜಂತಂ ತಂ ಯತಿಂ ಮತ್ವಾ ತು ಕೇಚನ ।
ಯಜ್ಞಕ್ರಿಯಾದಿರೀತಿಂ ತಾಮಪೃಚ್ಛನ್ ತಂ ಮುನಿಂ ಪ್ರತಿ ।೨೮।।

ಹೀಗೆ ಅಮಾನುಷ ಮಹಿಮೆಗಳನ್ನು ತೋರುತ್ತಾ ಒಮ್ಮೆ ಶ್ರೀಮಧ್ವಾಚಾರ್ಯ 'ಉಚ್ಚಭೂತಿ' (ಉಜಿರೆ) ಎಂಬ ಸ್ಥಳವನ್ನು ತಲುಪಿದರು. ಅಲ್ಲಿರುವ ಕೆಲವು ಪಂಡಿತರು ಮಧ್ವಾಚಾರ್ಯರು ಸರ್ವಜ್ಞರಾಗಿದ್ದರೂ ಸಂನ್ಯಾಸಿಗಳು; ಆದ್ದರಿಂದ ಅವರಿಗೆ ಯಜ್ಞಗ ಸಂಬಂಧಿಸಿದ ಕರ್ಮಗಳನ್ನು ಹೇಗೆ ಆಚರಿಸಬೇಕು ಎನ್ನುವ ಪ್ರಕಾರದ ಬಗ್ಗೆ ಗೊತ್ತಿರುವುದಿಲ್ಲ ಹೀಗಾಗಿ ಆ ವಿಷಯಗಳಿಗೆ ಸಂಬಂಧ ಪಟ್ಟಂತೆ ಪ್ರಶ್ನೆಗಳನ್ನು ಕೇಳಿ ಅವರನ ಸೋಲಿಸಬಹುದು'' ಎಂದು ನಿಶ್ಚಯಿಸಿ 'ಛಂದಸಾಂ ವೈ ಪಷ್ಠೇನಾಹ್ನಾ ' ಎಂಬ ಬ್ರಾಹ್ಮ ಖಂಡ ಭಾಗದ ಅರ್ಥವನ್ನು ವಿವರಿಸುವಂತೆ ಸವಾಲನ್ನು ಶ್ರೀಮಧ್ವಾಚಾರ್ಯ ಮುಂದಿರಿಸಿದರು.

(ಶ್ರೀಮಧ್ವಾಚಾರ್ಯರೇ ಉಜಿರೆ ಗ್ರಾಮಕ್ಕೆ ಹೋಗಿ ತಾವೇ ಅಲ್ಲಿಯ ದುರಹಂಕಾ ವಾದಿಗಳನ್ನು ವಾದಕ್ಕೆ ಆಹ್ವಾನಿಸಿದರು. ಅವರ ದುರಹಂಕಾರವನ್ನು ಖಂಡಿಸುವುದ ಶ್ರೀಮಧ್ವಾಚಾರ್ಯರ ಉದ್ದೇಶವಾಗಿತ್ತು ಎನ್ನುವುದಾಗಿ 'ಸುಮಧ್ವ ವಿಜಯ'ದ ಉಲ್ಲೇಖಿಸಲ್ಪಟ್ಟಿದೆ.)

ತಾಮುಕ್ತ್ವಾ ವಿಸ್ತರೇಣೈವ ಲೇಖಯಿತ್ವಾ ಚ ಸನ್ಮತಿ: ।
ನಮಸ್ಕೃತಶ್ಚ ವಿದ್ವದ್ಭಿರ್ವಿಸ್ಮಿತೈರ್ಜೇತುಮಾಗತೈ: ।೨೯।।
ರೇಜೇ ಸದಸಿ ಮಧ್ವಸ್ತು ಜಿತ್ವಾ ಸರ್ವಾನ್ ಕುವಾದಿನ: ।

ಪ್ರತಿವಾದಿಗಳು ಕೇಳಿದ ಐತರೇಯ ಭಾಗದ ಮಂತ್ರಗಳಿಗೆ ಶ್ರೀಮಧ್ವಾಚಾರ್ಯರು, ಕ್ರಮವಾಗಿ ಉತ್ತರವನ್ನು ನೀಡಿದರು. ಅಲ್ಲದೇ ಹೊಂದಿಕೆಯಾಗಿ ಅದರ ಅರ್ಥ ಪ್ರಯೋಗವಾಗಿರುವ ಎಷ್ಟು ಶಬ್ದಗಳಿಂದ ಅವರು ಕೇಳಿದ ಮಹಾನಾಮ್ನೀ ಸೂಕ್ತಗಳಿಗೆ ಹತ್ತು ಬೇರೆ ಅರ್ಥವನ್ನು ಭಿನ್ನರೀತಿಯಿಂದ ಬರೆದರು.

ಶ್ರೀಮಧ್ವಾಚಾರ್ಯರು ಅರ್ಥವನ್ನು ವಿವರಿಸಿದ ರೀತಿಯನ್ನು ನೋಡಿ ಆ ವಿದ್ವಾಂಸರಿಗೆ ಬಹಳ ಆಶ್ಚರ್ಯವಾಯಿತು. ಏಕೆಂದರೆ ಮಧ್ವಾಚಾರ್ಯರಿಗೆ ಸ್ವಲ್ಪ ಭಾಗದ ಪ್ರಶ್ನೆಯು ಕಠಿಣ ಇದು ಗೊತ್ತಿಲ್ಲ ಎಂಬ ದೃಢವಿಶ್ವಾಸದಿಂದ ಆ ವಿದ್ವಾಂಸರಲ್ಲಿ ಪ್ರಶ್ನೆಯನ್ನು ಕೇಳಿದ್ದರು. ಆದರೆ ಅದಕ್ಕೆ ಉತ್ತರವನ್ನು ಅವರು ವಿವರಿಸಿದಾಗ ಆ ವಿದ್ವಾಂಸರಿಗೆ ಬಹಳ ಆಶ್ಚರ್ಯವೇ ಆಯಿತು.

ಹೀಗೆ ಮದಹಂಕಾರಿಗಳಾದ ಅಲ್ಲಿಯ ವಿದ್ವಾಂಸರನ್ನು ಶ್ರೀಮಧ್ವಾಚಾರ್ಯರು ವಾದದಲ್ಲಿ ಸೋಲಿಸಿ ಆ ವಿದ್ವತ್ ಸಭೆಯಲ್ಲಿ ವಿಶೇಷವಾಗಿ ಶೋಭಿಸಿದರು.

(ಶ್ರೀಮಧ್ವಾಚಾರ್ಯರು ಈ ಸಂದರ್ಭದಲ್ಲಿ ಹತ್ತು ಭಿನ್ನ ರೀತಿಯಿಂದ ಬರೆದುದು, ಮಹಾನಾಮ್ನೀ ಸೂಕ್ತಗಳ ಅರ್ಥವನ್ನು ವಿವರಿಸುವ ಗ್ರಂಥವು 'ಮಹಾನಾಮ್ನೀವಿವರಣ', (ಕರ್ಮನಿರ್ಣಯ) ಎನ್ನುವುದಾಗಿ ಪ್ರಸಿದ್ಧಿಯನ್ನು ಪಡೆದಿದೆ. ಅಲ್ಲದೇ ಶ್ರೀಮಧ್ವಾಚಾರ್ಯರು ರಚಿಸಿದ ಹತ್ತು ಪ್ರಕರಣ ಗ್ರಂಥಗಳಲ್ಲಿ ಒಂದಾಗಿ ಪರಿಗಣಿತವಾಗಿದೆ)

ತತೋ ರೌಪ್ಯಪುರಂ ಪ್ರಾಪ್ಯ ಕೃಷ್ಣಮಾನಮ್ಯ ಭಕ್ತಿತಃ ॥೪೦॥
ಮುದಾ ಪೂಜಾದಿಕಂ ಕುರ್ವನ್ ವಾಸಂ ಚಕ್ರೇ ಮಹಾಮುನಿಃ ॥

ಮುಂದೆ ಶ್ರೀಮಧ್ವಾಚಾರ್ಯರು ಉಡುಪಿ ಕ್ಷೇತ್ರವನ್ನು ತಲುಪಿದರು. ಅಲ್ಲಿರುವ ಶ್ರೀಕೃಷ್ಣನಿಗೆ ಭಕ್ತಿಯಿಂದ ನಮಿಸಿ, ಭಕ್ತಿಪೂರ್ವಕವಾಗಿ ಪೂಜೆ, ಶಾಸ್ತ್ರಗಳ ಪಾಠ ಮೊದಲಾದುವುಗಳನ್ನು ಮಾಡುತ್ತಾ ಸಂತೋಷದಿಂದ ವಾಸ ಮಾಡಿದರು.

ತ್ರಿವಾರಂ ಚೈತರೇಯೋಪನಿಷದ್ಭಾಷ್ಯಮಪಿ ಚ ಯೋ ಮುನಿಃ ॥೪೧॥
ಪ್ರಸಾದಂ ಕಾರಯಿತ್ವಾ ತು ಶ್ರಾವಯಾಮಾಸ ಮಾಂ ಪುರಾ।

ಗುರುಗಳಾದ ಶ್ರೀಮಧ್ವಾಚಾರ್ಯರು ನನಗೆ (ಶ್ರೀಸತ್ಯತೀರ್ಥ)ರಿಗೆ ಮೂರು ಬಾರಿ ಐತರೇಯ ಶ್ರುತಿಯನ್ನು ಪಾಠಮಾಡಿ ನನ್ನ ಮೇಲೆ ವಿಶೇಷವಾದ ಅನುಗ್ರಹವನ್ನು ಮಾಡಿದರು.

ಏವಂ ಸುಖೇನ ಕಾಲೇ ತು ಗತೇ ಮಧ್ವೋ ಮನೋ ದಧೌ ॥೪೨॥
ವ್ಯಾಸಾಶ್ರಮಂ ಪುನರ್ಗಂತುಂ ಕೃತ್ವಾ ಕರ್ಮಾಣಿ ಸರ್ವಶಃ।

ಹೀಗೆ ಮಾಡಬೇಕಾದ ಅನೇಕ ಕೆಲಸಗಳನ್ನು ಪೂರೈಸಿದ ಮೇಲೆ, ಸ್ವಲ್ಪ ಸಮ
ಕಳೆಯಲು ಶ್ರೀಮಧ್ವಾಚಾರ್ಯರು ಮತ್ತೊಮ್ಮೆ ಶ್ರೀವೇದವ್ಯಾಸದೇವರನ್ನು ನೋಡಲು ಪು
ಬದರೀ ಕ್ಷೇತ್ರಕ್ಕೆ ಹೊರಡಲು ನಿಶ್ಚಯಿಸಿದರು.

ತತೋ ರೌಪ್ಯಾಸನೇ ಮಧ್ವ: ಕೃಷ್ಣಪೂಜಾರ್ಥಮೇವ ಹಿ
ಪೂರ್ವೋಕ್ತಮುಖ್ಯಶಿಷ್ಯಾಂಸ್ತು ಸ್ಥಾಪಯಾಮಾಸ ವೈಭವಾತ್ । ।।೬೩।।
ವಿನಾ ವಾರಿಜನಾಭಾಖ್ಯಮ್ ಅಷ್ಟೌ ತಾನ್ ಮುನಿಸತ್ತಮಾನ್ ।।೬೪।।

ಬದರಿಗೆ ಹೊರಡುವ ಮುನ್ನ ಶ್ರೀಮಧ್ವಾಚಾರ್ಯರು ಉಡುಪಿಯಲ್ಲಿ ಶ್ರೀಕೃಷ್ಣನಿ
ವೈಭವಪುರಸ್ಸರವಾಗಿ ಪೂಜೆ ನಡೆಯುವುದಕ್ಕೋಸ್ಕರ ಮುಖ್ಯ ಶಿಷ್ಯರಲ್ಲಿ ಹಿಂದೆ ಹೇ
ಶ್ರೀಪದ್ಮನಾಭತೀರ್ಥರೊಬ್ಬರನ್ನು ಬಿಟ್ಟು ಉಳಿದ ಎಂಟು ಮಂದಿ ಮುಖ್ಯ ಶಿಷ್ಯರನ್ನು
ನಿಯುಕ್ತಿಗೊಳಿಸಿದರು.

ವಿಷ್ಣುತೀರ್ಥೋ ಮುನಿಶ್ರೇಷ್ಠಃ ಸ್ವಶಿಷ್ಯೇ ವ್ಯಾಸಸಂಜ್ಞಕೇ ।
ನಿಧಾಯ ಸರ್ವಂ ಚಕ್ರೇ ಚ ಸ್ವಯಂ ಪೂರ್ವೋಕ್ತಮೇವ ತು ।।೬೫।।

ಮುನಿಗಳಲ್ಲಿ ಶ್ರೇಷ್ಠರಾದ ಶ್ರೀವಿಷ್ಣುತೀರ್ಥರು ತಮ್ಮ ಶಿಷ್ಯರಾದ ಶ್ರೀವ್ಯಾಸತೀರ್ಥರಲ್ಲಿ
ತಮ್ಮ ಸಂಸ್ಥಾನದ ಹೊಣೆಗಾರಿಕೆಯನ್ನು ಇತ್ತು ಹಿಂದೆ ಹೇಳಿದಂತೆ ಕುಮಾರಪರ್ವತವನ್ನು ಏ
ತಪಸ್ಸನ್ನು ಆಚರಿಸಿದರು.

ಏವಂ ವಿವಿಧಕರ್ಮಾಣಿ ಪ್ರೋಕ್ತಾದನ್ಯಾನಿ ಸರ್ವಶಃ ।
ವಿಚಿತ್ರಾಣಿ ಪವಿತ್ರಾಣಿ ಕೃತ್ವಾ ಜಯತಿ ಪೂರ್ಣಧೀಃ ।।೬೬।।

ಹೀಗೆ ಇಲ್ಲಿ ಹೇಳಿದಕ್ಕಿಂತಲೂ ಸಹ ಬೇರೆಯಾದ, ಬಹಳ ಆಶ್ಚರ್ಯವನ್ನು
ಉಂಟುಮಾಡುವ, ಅನೇಕ ವಿಧಗಳಾದ, ಸ್ಮರಿಸುವುದರಿಂದ ಸಜ್ಜನರನ್ನು ಪಾವನಗೊಳಿಸುವ
ಕರ್ಮಗಳನ್ನು ಶ್ರೀಮಧ್ವಾಚಾರ್ಯರು ಮಾಡಿ ಉತ್ಕೃಷ್ಟರಾಗಿ ಮೆರೆದರು.

ರಜತಪೀಠಗತಂ ಹರಿಮಾದರಾದ್ ಅಹಿಪತೇರ್ಮೃದುಭೋಗಸುಶಾಯಿನಮ್ ।
ಪ್ರಚುರಧೀಸ್ತು ಮುದಾ ವಿವಿಧಸ್ತುತಿಂ ಬಹುವಿಧಾಂ ತು ವಿಧಾಯ ನನಾಮ ಸಃ ।।೬೭।।

ಶ್ರೀಮಧ್ವಾಚಾರ್ಯರು ಉಡುಪಿಯಲ್ಲಿ ಸನ್ನಿಹಿತನಾಗಿರುವ ಅನಂತಾಸನದೇವರನ್ನು
ಸಂತೋಷದಿಂದ, ಭಕ್ತಿಪೂರ್ವಕವಾಗಿ ಅನೇಕ ವಿಧವಾದ ಸ್ತೋತ್ರಗಳನ್ನು ಮಾಡುತ್ತಾ
ನಮಸ್ಕರಿಸುತ್ತಾ ವಿರಾಜಿಸಿದರು.

ಶ್ರೀಕೃಷ್ಣಂ ಜಲದಶ್ಯಾಮಂ ರುಗ್ಮಿಣೀರಮಣಂ ಮುದಾ ।
ರೌಪ್ಯಪೀಠೇ ವಿರಾಜಂತಂ ಪ್ರಣನಾಮ ಹಿಮಾಂಶುವತ್ ॥೭೮॥

ಅಲ್ಲದೇ ಉಡುಪಿಯಲ್ಲಿ ಚಂದ್ರನಂತೆ ವಿರಾಜಿಸುತ್ತಿರುವ, ರುಗ್ಮಿಣೀರಮಣನಾದ, ಮೇಘಶ್ಯಾಮನಾದ ಶ್ರೀಕೃಷ್ಣನನ್ನು ಸಂತೋಷದಿಂದ ನಮಸ್ಕರಿಸುತ್ತಾ ವಿರಾಜಿಸಿದರು.

ಏವಂ ಸರ್ವಾಂಶ್ಚ ಸಂಸ್ಥಾಪ್ಯ ಶಿಕ್ಷಾಂ ಕೃತ್ವಾ ಪುನಃ ಪುನಃ।
ನತ್ವಾ ಕೃಷ್ಣಂ ಮುಹುಃ ಸ್ತುತ್ವಾ ಯಯೌ ಬದರಿಕಾಶ್ರಮಮ್ ॥೭೯॥

ಹೀಗೆ ತಮ್ಮ ಎಲ್ಲ ಶಿಷ್ಯರಿಗೆ ಶಿಕ್ಷಣ ನೀಡಿ ಅವರನ್ನು ಯೋಗ್ಯ ಕೆಲಸಗಳಲ್ಲಿ ನಿಯೋಜಿಸಿ, ಬಾರಿಬಾರಿಗೂ ಶ್ರೀಕೃಷ್ಣನನ್ನು ಸ್ತುತಿಸಿ, ಶ್ರೀಮಧ್ವಾಚಾರ್ಯರು ಬದರಿಕಾಶ್ರಮಕ್ಕೆ ಹೊರಡಲನುವಾದರು.

ಕೃತ್ವಾಽವತಾರಕಾರ್ಯಂ ತು ಸಮಾಪ್ಯಾಽಶು ತದಾ ಗುರುಮ್ ।
ವ್ರಜಂತಮನ್ವಗಚ್ಛನ್ ವೈ ಸರ್ವೇ ಶಿಷ್ಯಾಶ್ಚ ಭಕ್ತಿತಃ ॥೮೦॥

ತಾವು ಅವತಾರ ಮಾಡಿರುವ ಉದ್ದೇಶಗಳೆಲ್ಲ ನೆರವೇರಿದ ಮೇಲೆ, ಬದರಿಕಾಶ್ರಮವನ್ನು ಕುರಿತು ಹೊರಟ ಗುರುಗಳನ್ನು ಅನೇಕ ಮಂದಿ ಶಿಷ್ಯರು ಭಕ್ತಿಯಿಂದ ಅವರನ್ನು ಹಿಂಬಾಲಿಸಲು ಬಯಸಿದರು.

ಸ್ಥಿತ್ವಾ ದೇವಾಃ ಪುಷ್ಕರೇ ವಾಯುದೇವೇ ಸ್ತುತ್ವಾ ಮಧ್ವೇ ಪುಷ್ಪವೃಷ್ಟಿಂ ಚ ಚಕ್ರುಃ।
ನತ್ವಾ ಮೂರ್ಧ್ನಾ ರೌಪ್ಯಪೀಠಸ್ಥಕೃಷ್ಣಂ ದೃಷ್ಟ್ವಾಽಮರ್ತ್ಯಾ ವಿಸ್ಮಿತಾಂತಾ ಬಭೂವುಃ ॥೮೧॥

ಶ್ರೀವಾಯುದೇವರ ಅವತಾರಿಯಾದ ಶ್ರೀಮಧ್ವಾಚಾರ್ಯರ ಮೇಲೆ ದೇವತೆಗಳು ಆಕಾಶದಲ್ಲಿದ್ದು ಪುಷ್ಪವೃಷ್ಟಿಯನ್ನು ಮಾಡಿದರು. ಉಡುಪಿಯಲ್ಲಿರುವ ಶ್ರೀಕೃಷ್ಣನನ್ನು ತಲೆಬಾಗಿ ನಮಿಸಿ, ಶ್ರೀಮಧ್ವಾಚಾರ್ಯರ ಮಹಿಮೆಗಳನ್ನು ಸ್ಮರಿಸುತ್ತಾ, ಮನಸ್ಸಿನಲ್ಲಿ ಬಹಳ ಆಶ್ಚರ್ಯಗೊಂಡರು.

ಯಾನಿ ಯಾನಿ ತು ಕರ್ಮಾಣಿ ಶ್ರೀಮಧ್ವೇನ ಕೃತಾನಿ ವೈ।
ತಾನಿ ಸರ್ವಾಣಿ ದೇವಾಶ್ಚ ಜಯಶಬ್ದೈರ್ಜಗುಃ ಸಹ ॥೮೨॥

ಶ್ರೀಮಧ್ವಾಚಾರ್ಯರು ಭೂಮಿಯಲ್ಲಿ ಅವತಾರ ಮಾಡಿ ಯಾವ ಯಾವ ಕೆಲಸಗಳನ್ನು ಮಾಡಿ ತಮ್ಮ ಮಾಹಾತ್ಮ್ಯವನ್ನು ಲೋಕಕ್ಕೆ ಪ್ರಕಟಪಡಿಸಿದರೋ, ಆ ಎಲ್ಲ ಮಾಹಾತ್ಮ್ಯಗಳನ್ನು ದೇವತೆಗಳೆಲ್ಲರೂ ಜಯ ಜಯ ಎಂದು ಹೇಳುತ್ತಾ ಹಾಡಲು ಆರಂಭಿಸಿದರು.

ಭೂತಲೇಽಪಿ ನರಾಸ್ತಾನಿ ಗಾಯಂತೋ ವೈ ತಥಾ ತದಾ।
ಏವಂ ಮಂಗಲಶಬ್ದೈಶ್ಚ ಸ್ತುತೋ ಮಧ್ವೋ ಯಯೌ ಮುದಾ ॥೮೩॥
ಆಜ್ಞಾಂ ಸ್ಥಾತುಂ ಚ ಸರ್ವೇಷಾಂ ದತ್ವಾ ವ್ಯಾಸಾಶ್ರಮಂ ಪ್ರತಿ।

ದೇವತೆಗಳು ಶ್ರೀಮಧ್ವಾಚಾರ್ಯರ ಅವತಾರ ಕಾರ್ಯಗಳನ್ನು ಹಾಡಲು ಆರಂಭಿಸಿದಾಗ, ಭೂಮಿಯಲ್ಲಿ ಸಜ್ಜನರೂ ಸಹ ಅದೇ ರೀತಿಯಲ್ಲಿ ಮಂಗಲಮಯವಾದ ವಾದ್ಯಗಳ ಧ್ವನಿಯ ಜೊತೆಯಲ್ಲಿ ಹಾಡಲು ಆರಂಭಿಸಿದರು.

ಈ ರೀತಿಯಾಗಿ ಶ್ರೀಮಧ್ವಾಚಾರ್ಯರನ್ನು ದೇವತೆಗಳೂ, ಸಜ್ಜನರೂ ಸ್ತುತಿಸುತ್ತಿರುವಾಗ ~~ಅವರು~~ ಗುರುಗಳು ಎಲ್ಲರಿಗೂ ಇಲ್ಲೇ ಇರುವಂತೆಯೂ, ಯಾರೂ ತಮ್ಮನ್ನು ಹಿಂಬಾಲಿಸಬಾರದೆಂದು ಹೇಳಿ ತಾವೊಬ್ಬರೇ ವ್ಯಾಸಾಶ್ರಮವನ್ನು ಕುರಿತು ಬದರೀಕ್ಷೇತ್ರಕ್ಕೆ ಹೊರಟು ಹೋದರು.

ತತಃ ಸರ್ವೇ ತು ಸ್ವಸ್ಥಾನೇ ವಾಸಂ ಚಕ್ರುರಹಂ ತದಾ ॥೮೪॥
ಗತ್ವಾ ವೃಕೋದರಕ್ಷೇತ್ರಮ್ ಅತಿಷ್ಠಂ ತತ್ರ ವೈ ಸುಖಮ್।

ಶ್ರೀಮಧ್ವಾಚಾರ್ಯರು ಬದರಿಗೆ ಹೊರಟು ಹೋದ ಮೇಲೆ, ಶ್ರೀಮಧ್ವಾಚಾರ್ಯರ ಎಲ್ಲ ಶಿಷ್ಯರು ತಮಗೆ ತಮಗೆ ಅವರು ನೀಡಿದ ಸ್ಥಳಗಳಲ್ಲಿ ವಾಸವನ್ನು ಮಾಡಿದರು. ನಾನಾದರೂ (ಶ್ರೀಸತ್ಯತೀರ್ಥರು) ಭೀಮಸೇನದೇವರ ಕ್ಷೇತ್ರವೆನಿಸಿದ ಶ್ರೀಭೀಮನಕಟ್ಟೆ ಎನ್ನುವ ಕ್ಷೇತ್ರಕ್ಕೆ ಹೋಗಿ ಅಲ್ಲಿ ಸುಖವಾಗಿ ಇರುವುದಕ್ಕೆ ಮನಸ್ಸು ಮಾಡಿದೆನು.

ತುಂಗಭದ್ರಾನದೀತೀರವಾತಾಗಮನಪಾವಿತೇ ॥೮೫॥
ಋಷಿಜುಷ್ಟೇ ಮಠೇ ಕುರ್ವನ್ ಸೀತಾರಾಮಾದಿಪೂಜನಮ್।
ಶ್ರೀಮನ್ಮಧ್ವಕೃತಂ ಶಾಸ್ತ್ರಂ ಪಠನ್ ಚಾಪ್ಯವಸಂ ತದಾ ॥೮೬॥

ತುಂಗಾಭದ್ರಾ ನದಿಯ ತೀರದಲ್ಲಿರುವ ತಂಪಾದ ಗಾಳಿಯಿಂದಾಗಿ ಪವಿತ್ರವಾಗಿರುವ, ಮುನಿಗಳಿಂದ ಆಶ್ರಯಿಸಲ್ಪಟ್ಟು ಸೇವಿಸಲ್ಪಟ್ಟಿರುವ ಆ ಮಠದಲ್ಲಿ ಸಂಸ್ಥಾನದ ದೇವರಾದ ಸೀತಾರಾಮದೇವರನ್ನು ಹಾಗೂ ದಾಮೋದರ ಸಾಲಿಗ್ರಾಮವನ್ನು ಪೂಜಿಸುತ್ತಾ, ಶ್ರೀಮಧ್ವಾಚಾರ್ಯರು ರಚಿಸಿದ ಶಾಸ್ತ್ರಗ್ರಂಥಗಳ ಅಧ್ಯಯನವನ್ನು ಮಾಡುತ್ತಾ ವಾಸ ಮಾಡಿದೆನು.

ತದಾ ಮಧ್ವವಿಲಾಸಂ ತು ತತ್ಸ್ಮೃತ್ಯೈ ಕೃತವಾನಹಮ್।
ರಾಮಮಧ್ವೌ ತು ಪ್ರೀಯೇತಾಂ ತೇನ ತೌ ಮಮ ಸರ್ವದಾ ॥೮೭॥

ಭೀಮನ ಕಟ್ಟೆ ಮಠದಲ್ಲಿ ತಾನಿರುವಾಗ ನಾನು (ಶ್ರೀಸತ್ಯತೀರ್ಥರು) ಈ ಮಧ್ವ ವಿಲಾಸ ಯನ್ನು ರಚಿಸಿದೆನು. ಆದರಿಂದ ನಾನು ಆರಾಧಿಸುತ್ತಿರುವ ಶ್ರೀ ಸೀತಾರಾಮದೇವರು ಮತ್ತು ಮಧ್ವಾಚಾರ್ಯರು ನನ್ನ ಮೇಲೆ ನಿರಂತರವಾಗಿಯೂ ಸುಪ್ರೀತರಾಗಿರಲಿ.

ಯ ಇಮಂ ಸನ್ ಪಠನ್ ಭಕ್ತ್ಯಾ ಶುಚಿರ್ಭೂತ್ವಾ ಸ್ಥಿತ: ಸದಾ।
ಜ್ಞಾನಾದಿಫಲಮಾಪ್ನೋತಿ ತತ್ಪ್ರಸಾದೇನ ಮಾನವ: ।೮೮॥

ಯಾವ ಸಜ್ಜನನು ಶುಚಿಯಾಗಿ, ಭಕ್ತಿಪೂರ್ವಕವಾಗಿ ಈ ಗ್ರಂಥವನ್ನು ಸದಾ ಸುತ್ತಾನೋ, ಅವನು ಶ್ರೀರಾಮ ಹಾಗೂ ಶ್ರೀಮಧ್ವಗುರುಗಳ ಅನುಗ್ರಹವಿಶೇಷದಿಂದ ನ, ಭಕ್ತಿ ಮೊದಲಾದ ಫಲಗಳನ್ನು ಪಡೆಯುತ್ತಾನೆ.

ಯೋ ಮಧ್ವ: ಕೃಪಯಾ ವಿದ್ಯಾಂ ಪರಮಾಂ ಮೇ ದದೌ ಖಲು।
ಸರ್ವದಾಽಹಂ ಸ್ಮರನ್ ತಂ ತು ಪ್ರಣಮಾಮಿ ಪುನ: ಪುನ: ।೮೯॥

ನನ್ನ ಮೇಲಿನ ಕರುಣೆಯಿಂದ, ನನಗೆ ಪರವಿದ್ಯೆಯನ್ನು ಪ್ರೀತಿಯಿಂದ ಅನುಗ್ರಹಿಸಿದ ಮಧ್ವಗುರುಗಳನ್ನು ಬಾರಿಬಾರಿಗೂ ಸ್ಮರಿಸುತ್ತಾ ಯಾವಾಗಲೂ ನಮಸ್ಕರಿಸುತ್ತೇನೆ.

ಶ್ರೀರಾಮಂ ಕಪಿಗಣರಾಜಸೇವಿತಂ ತವ್।
ಚಂದ್ರಾಸ್ಯಂ ಮುನಿವರಪೂಜಿತಂ ಪ್ರಸನ್ನಮ್।
ಶಂಭ್ವಾದ್ಯೈರಲಮುಮರ್ಯೈ: ಸ್ತುತಂ ಸದಾಽಹಂ
ಮೇಘಾಭಂ ಧೃತನತಕಾರ್ಮುಕಂ ನತೋಽಸ್ಮಿ ।೯೦॥

ಸುಗ್ರೀವ ಮೊದಲಾದ ಕಪಿವೃಂದದಿಂದ ಸೇವಿಸಲ್ಪಟ್ಟ, ಚಂದ್ರನಂತೆ ಮುಖವುಳ್ಳ, ದ್ರಾದಿ ದೇವತೆಗಳಿಂದ ಸ್ತುತಿಸಲ್ಪಡುವ, ಮೇಘಶ್ಯಾಮನಾದ, ಬಗ್ಗಿದ ಧನುಸ್ಸನ್ನು ಹಿದಿರುವ, ಸನಕಾದಿ ಮುನಿವರರು ಪೂಜಿಸಿರುವ ಶ್ರೀಸೀತಾಪತಿ ಶ್ರೀರಾಮಚಂದ್ರ ವರನ್ನು ನಾನು ಯಾವಾಗಲೂ ನಮಸ್ಕರಿಸುತ್ತೇನೆ.

ಇತಿ ಶ್ರೀಮತ್‌ಕವಿಕುಲತಿಲಕಶ್ರೀಮತ್‌ಪುರುಷೋತ್ತಮ ತೀರ್ಥ ಕರಕಮಲ ಸಂಜಾತ ೀಸತ್ಯತೀರ್ಥ ಭಿಕ್ಷುಣಾ ವಿರಚಿತೇ ಮಧ್ವವಿಲಾಸೇ ತೃತೀಯವಿಲಾಸಃ.

ಮಧ್ವವಿಲಾಸ ಗ್ರಂಥದ ವೈಶಿಷ್ಟ್ಯಗಳು

ಶ್ರೀಮದಾಚಾರ್ಯರಿಗೆ ಆಶ್ರಮದೀಕ್ಷೆಯನ್ನು ನೀಡಿದ ಶ್ರೀಅಚ್ಯುತಪ್ರೇಕ್ಷತೀರ್ಥರಿ ಶ್ರೀಪುರುಷೋತ್ತಮತೀರ್ಥರೆನ್ನುವ ಇನ್ನೊಂದು ಹೆಸರಿದೆ; ಶ್ರೀಅಚ್ಯುತಪ್ರೇಕ್ಷತೀರ್ಥರಿಂ ಶ್ರೀಮದಾಚಾರ್ಯರಿಗಿಂತ ಮೊದಲೇ ಸಂನ್ಯಾಸಾಶ್ರಮವನ್ನು ಸ್ವೀಕಾರ ಮಾಡಿದ ಇನ್ನೊ ಸಂನ್ಯಾಸಿಗಳಿದ್ದರು; ಅವರು ಲಿಕುಚ ವಂಶೀಯರು; ಅವರು ವಿಶೇಷತಃ ವೈರಾಗ್ಯ, ಇಂದ್ರಿಯನಿಗ್ರಹಾ ಅನೇಕ ಗುಣಗಳಿಂದ ವಿಭೂಷಿತರಾಗಿದ್ದರು. ಆದರೆ ಅವರನ್ನು ಜ್ಯೇಷ್ಠಯತಿಗಳೆಂ ಕರೆಯಲಾಗಿದ್ದರೂ, ಅವರ ಹೆಸರು ಯಾವುದು? ಎನ್ನುವ ಬಗ್ಗೆ ಎಲ್ಲಿಯೂ ಉಲ್ಲೇಖಗೊಂಡಿ ಇವಿಷ್ಟು ವಿಷಯಗಳು ಶ್ರೀ ಸುಮಧ್ವವಿಜಯ, ಆ ಗ್ರಂಥದ ಶ್ರೀವಿಶ್ವಪತಿತೀರ್ಥರ ಟೀಕೆ ಮ ಛಲಾರೀಯ ಟೀಕೆಗಳಲ್ಲಿ ಕಾಣ ಸಿಗುತ್ತವೆ.

ಆದರೆ 'ಮಧ್ವ ವಿಲಾಸ' ಗ್ರಂಥದಲ್ಲಿ ಮೇಲಿನ ವಿಷಯಗಳಿಗಿಂತ ಭಿನ್ನವಾದ ವಿಷಯದ ನಿರೂ ಕಾಣಸಿಗುವುದು. ಅದರಂತೆ ಶ್ರೀ ಮದಾಚಾರ್ಯರಿಗೆ ಆಶ್ರಮದೀಕ್ಷೆಯನ್ನಿತ್ತ ಅಚ್ಯುತಪ್ರೇಕ್ಷ ತೀರ್ಥರಿಗೆ ಪುರುಷೋತ್ತಮತೀರ್ಥರೆನ್ನುವ ಇನ್ನೊಂದು ಹೆಸರು ಇಲ್ಲ. 'ಸುಮ ವಿಜಯ' ಗ್ರಂಥದಲ್ಲಿ ಯಾರನ್ನು ಜ್ಯೇಷ್ಠ ಯತಿಗಳೆಂದು ಉಲ್ಲೇಖಮಾಡಲಾಗಿದೆಯೋ, ಆ ಯತಿ ಹೆಸರೇ ಶ್ರೀ ಪುರುಷೋತ್ತಮ ತೀರ್ಥರು. ಅವರು ಶ್ರೀ ಅಚ್ಯುತಪ್ರೇಕ್ಷತೀರ್ಥರಿಂದ ಆಶ್ರಮವ ಸ್ವೀಕರಿಸಿ ವಂಶಧರ ಶಿಷ್ಯರೆನಿಸಿದವರು. ಅಲ್ಲದೇ ಅವರು ಶ್ರೀ ಮದಾಚಾರ್ಯರಿಗಿಂತ ಮೊದ ಸಂನ್ಯಾಸವನ್ನು ಸ್ವೀಕರಿಸಿದ್ದರು-ಇಷ್ಟು ವಿಷಯಗಳು ಈ ಮಧ್ವ ವಿಲಾಸ ಗ್ರಂಥದಿಂದ ತಿಳಿದು ಬರುತ್

ಈ ವಿಚಾರಗಳನ್ನು ಒಪ್ಪಿಕೊಂಡರೆ ಶ್ರೀ ವಿಶ್ವಪತಿತೀರ್ಥರ ಟೀಕೆಯ ಮತ್ತು ಛಲಾರೀಯ ಟೀಕ ವಿರೋಧವು ಬರುತ್ತದೆ. ಅಲ್ಲದೆ ಕೂರ್ಮ ಶಾಸನದಲ್ಲಿಯೂ ಮೇಲಿನ ವಿಚಾರಕ್ಕೆ ವಿರುದ್ಧವ ನಿರೂಪಣೆಯಿರುವುದರಿಂದ ಅದರ ವಿರೋಧವೂ ಬರುತ್ತದೆ. ಹೀಗಾಗಿ ಈ ವಿಚಾರಗಳನ್ನು ಮತ್ತೊ ಪರಿಶೀಲಿಸಬೇಕಾದ ಅವಶ್ಯಕತೆ ಅನಿವಾರ್ಯವಾಗಿದೆ.

ಸುಮಧ್ವವಿಜಯದ ಆರನೇ ಸರ್ಗದಲ್ಲಿ ಶ್ರೀಮದಾಚಾರ್ಯರು ತಾವು ಮೊದಲ ಬಾರಿಗೆ ಬದ ಯಾತ್ರೆಯನ್ನು ಕೈಗೊಳ್ಳುವ ಸಂದರ್ಭದಲ್ಲಿ 'ಗೀತಾಭಾಷ್ಯಗ್ರಂಥ'ವನ್ನು ರಚಿಸಿ ಅದನ್ನು ಗುರುಗಳಿಗ ಆಶ್ರಮಜ್ಯೇಷ್ಠ ಯತಿಗಳಿಗೂ ನೀಡಿದರು. ಯಾತ್ರೆಗೆ ಗುರುಗಳ ಅನುಮತಿಯನ್ನು ಕೇಳಿದ ಶ್ರೀಪುರುಷೋತ್ತಮತೀರ್ಥರು ಅನುಮತಿಯಿತ್ತರು ಎನ್ನುವುದಾಗಿ ಉಲ್ಲೇಖವಿದೆ.

ಈ ಸಂದರ್ಭದಲ್ಲಿ ಈ ಪುರುಷೋತ್ತಮತೀರ್ಥರು ಯಾರು? ಎನ್ನುವ ಬಗ್ಗೆ ಈಗ ಉಪಲಬ್ಧವಾಗಿರ ಶ್ರೀನಾರಾಯಣ ಪಂಡಿತಾಚಾರ್ಯರ 'ಭಾವಪ್ರಕಾಶಿಕಾ'ದಲ್ಲಿ ಯಾವುದೇ ಮಾಹಿತಿ ನೀಡುವ ವಿಷ ಉಲ್ಲೇಖಿಸಲ್ಪಟ್ಟಿಲ್ಲ. ಶ್ರೀ ವೇದಾಂಗ ತೀರ್ಥರ ಟೀಕೆಯ ಕೆಲವು ಹಸ್ತಪ್ರತಿಗಳಲ್ಲಿಯೂ ಇ ಕುರಿತಾಗಿ ಯಾವ ಮಾಹಿತಿಯೂ ತಿಳಿಯುವುದಿಲ್ಲ. ಆದರೆ ಛಲಾರೀಯ ಟೀಕೆಯಲ್ಲಿ 'ತಾಂ ದಿದೆ ಪುರುಷೋತ್ತಮತೀರ್ಥಶ್ಚಿಂತಯನ್ ಸ ಪುರುಷೋತ್ತಮರಕ್ಷಾಮ್ ' ಎನ್ನುವ ಶ್ಲೋಕಭಾಗ ವ್ಯಾಖ್ಯಾನ ಭಾಗದಲ್ಲಿ 'ಪುರುಷೋತ್ತಮತೀರ್ಥಂ' ಎನ್ನುವ ಪಾಠಾಂತರವನ್ನು ಒಪ್ಪಿಕೊಂಡು ಅದನ ಶ್ರೀಮದಾಚಾರ್ಯರಿಗೆ ವಿಶೇಷಣ ಮಾಡಿ ಅರ್ಥೈಸಿದ್ದಾರೆ. ಅಲ್ಲದೆ ಅಲ್ಲಿಯ

ಪುರುಷೋತ್ತಮತೀರ್ಥ' ಎನ್ನುವ ಪ್ರಚಲಿತವಾಗಿರುವ ಪ್ರಸಿದ್ಧವಾದ ಪಾಠವನ್ನು ಸ್ವೀಕರಿಸಿ, ಅದಕ್ಕೆ ಶ್ರೀಅಚ್ಯುತಪ್ರೇಕ್ಷತೀರ್ಥ ಎನ್ನುವ ಅರ್ಥವನ್ನು ಹೇಳಿದ್ದಾರೆ.

ಇಷ್ಟು ಅಂಶಗಳನ್ನು ಗಮನಿಸುತ್ತಾ ಮಧ್ವವಿಲಾಸ ಗ್ರಂಥದಲ್ಲಿ ಬಂದ ವಿಷಯಕ್ಕೆ ಪ್ರಾಮಾಣ್ಯವನ್ನು ಒಪ್ಪಿಕೊಂಡು ಈ ರೀತಿಯಾಗಿ ನಿರ್ಣಯಿಸಬಹುದಾಗಿದೆ.

ಹಿಂದಿನ ಶ್ಲೋಕದಲ್ಲಿ 'ಜ್ಯಾಯಸೇ ಸಗುರವೇ' ಎನ್ನುವುದಾಗಿ ಶ್ರೀ ಮಧ್ವಾಚಾರ್ಯರು ಗೀತಾಭಾಷ್ಯಗ್ರಂಥವನ್ನು ಜ್ಯೇಷ್ಠಯತಿಗಳಿಗೂ, ಗುರುಗಳಿಗೂ ನೀಡಿದರೆಂದು ಉಲ್ಲೇಖವಿದೆ. ಮುಂದಿನ ಶ್ಲೋಕದಲ್ಲಿ ಶ್ರೀಮಧ್ವಾಚಾರ್ಯರು ಬದರಿಗೆ ಹೋಗಲು ಅನುಜ್ಞೆಯನ್ನು ಬೇಡಲು ಪ್ರಾರ್ಥಿಸಿದ ವಿಚಾರ ಬಂದಿದೆ. ಯಾರ ಬಳಿಯಲ್ಲಿ ಎನ್ನುವುದಾಗಿ ಇಲ್ಲದಿದ್ದರೂ ಸಹಜವಾಗಿ ಆಶ್ರಮಗುರುಗಳ ಅನುಜ್ಞೆಯನ್ನು ಎಂದು ಅರ್ಥವನ್ನು ಇಟ್ಟುಕೊಳ್ಳಬಹುದಾಗಿದೆ. ಈ ವಿಷಯವನ್ನು ಪುರುಷೋತ್ತಮತೀರ್ಥ ಎನ್ನುವುದಾಗಿ ಉಲ್ಲೇಖಿಸಲಾಗಿದೆ. ಅಲ್ಲಿ ಶ್ರೀಅಚ್ಯುತಪ್ರೇಕ್ಷತೀರ್ಥರಿಗೆ ಪುರುಷೋತ್ತಮತೀರ್ಥ ಎನ್ನುವ ಹೆಸರಿದೆ ಅಂತಲೇ ಹೇಳಿದಂತಾಗುತ್ತದೆ. ಆದರೆ ಶ್ರೀ ಮಧ್ವಾಚಾರ್ಯರು ಇಬ್ಬರ ಅನುಜ್ಞೆಯನ್ನು ಪಡೆದು ಹೊರಟರು ಎನ್ನುವ ಅರ್ಥದ ಹಿನ್ನೆಲೆಯಲ್ಲಿ ಯೋಚಿಸುವ ಅವಕಾಶವೊಂದಿದೆ.

ಆದ್ದರಿಂದ 'ಹೇತುವಾದಿನಿ....'' ಎಂದು ಆರಂಭವಾಗುವ ಮುಂದಿನ ಶ್ಲೋಕದಲ್ಲಿ ಉತ್ತರಾರ್ಧದ ಪಾಠ ಹೀಗಿದ್ದಿರಬಹುದು-

ತಾಂ ದಿದೇಶ ಪುರುಷೋತ್ತಮರಕ್ಷಾಂ ಚಿಂತಯನ್ ಸಪುರುಷೋತ್ತಮತೀರ್ಥಃ''

ಈಗ 'ಸಪುರುಷೋತ್ತಮ ತೀರ್ಥಃ' ಎನ್ನುವುದಕ್ಕೆ ಪುರುಷೋತ್ತಮತೀರ್ಥರಿಂದ ಕೂಡಿಕೊಂಡ ಶ್ರೀ ಅಚ್ಯುತಪ್ರೇಕ್ಷತೀರ್ಥರು ಅಂತ ಅರ್ಥೈಸಬಹುದಾಗಿದೆ. ಯಾವುದಕ್ಕೂ ಮತ್ತೊಮ್ಮೆ ಸುಮಧ್ವವಿಜಯದ ಮೂಲ ಪಾಠದ ಅನ್ವೇಷಣೆಗೊಂದು ಅವಕಾಶ ದೊರೆತಂತಾಗಿದೆ.

ಅಥವಾ 'ಪುರುಷೋತ್ತಮತೀರ್ಥ' ಎನ್ನುವುದು ಯೌಗಿಕ ನಾಮವೆಂದಿಟ್ಟುಕೊಂಡು ಅಚ್ಯುತಪ್ರೇಕ್ಷರಿಗೂ ಆ ಹೆಸರನ್ನು ಹೊಂದಿಸಬಹುದು. ಆವಾಗ ಪ್ರಚಲಿತ ಪಾಠವೇ ಶುದ್ಧವೆಂದು ಹೇಳಬಹುದು. ಜೊತೆಯಲ್ಲಿ ಟೀಕಾ ಗ್ರಂಥಗಳ ವಿರೋಧವನ್ನು ತಾತ್ಪರ್ಯಾರ್ಥವನ್ನಿಟ್ಟುಕೊಂಡು ಪರಿಹರಿಸಿದಂತಾಗುವುದು. ಪ್ರಾಯಃ ಹೀಗೆ ಒಪ್ಪಿಕೊಂಡೇ ಎಲ್ಲವನ್ನು ಹೊಂದಿಸುವುದು ಅತ್ಯಂತ ಸಮುಚಿತ ಎಂದು ಕಾಣಿಸುತ್ತದೆ. - ಅತ್ರ ಮಹಾಂತಃ ಪ್ರಮಾಣಮ್ ।

ಈ ವಿಚಾರದ ಜೊತೆಯಲ್ಲಿ ಇನ್ನೊಂದು ಅಂಶವನ್ನು ನಾವು ಗಮನಿಸಬಹುದಾಗಿದೆ. ಶ್ರೀ ಅಚ್ಯುತಪ್ರೇಕ್ಷತೀರ್ಥರ ವಂಶಧರ ಶಿಷ್ಯರು ಶ್ರೀ ಪುರುಷೋತ್ತಮತೀರ್ಥರು. ಅವರ ವಂಶಧರ ಶಿಷ್ಯರು ಶ್ರೀ ಸತ್ಯತೀರ್ಥರು. ಅವರು ಶ್ರೀ ಮದಾಚಾರ್ಯರ ಕೊನೆಯ ಬದರೀಯಾತ್ರೆಯ ನಂತರ ಅವರೇ ಗ್ರಂಥದಲ್ಲಿ ತಿಳಿಸಿದಂತೆ ವೃಕೋದರಕ್ಷೇತ್ರವೆನಿಸಿದ ಶ್ರೀ ಭೀಮನಕಟ್ಟೆ ಎನ್ನುವ ಸ್ಥಳಕ್ಕೆ ಹೋಗಿ ಅಲ್ಲಿಯೇ ವಾಸ ಮಾಡಿದರು. ಇದರಿಂದ ಆ ಪೀಳಿಗೆ ಅಲ್ಲಿ ಮುಂದುವರಿಯಿತು ಎಂದು ಸ್ಪಷ್ಟವಾಗುವುದು. ಆದಕ್ಕೆಂದೇ ಶ್ರೀ ಭೀಮನಕಟ್ಟೆಮಠವು ಶ್ರೀ ಅಚ್ಯುತತೀರ್ಥಸಂಸ್ಥಾನವೆಂದೇ ಪ್ರಸಿದ್ಧವಾಗಿದೆ.

ಇದರ ಜೊತೆಯಲ್ಲಿ ಶ್ರೀ ಮಧ್ವಾಚಾರ್ಯರು ಸನಕಾದಿಗಳ ಪರಂಪರೆಯಲ್ಲಿ ಬಂದ ಶ್ರೀ ಅಚ್ಯುತಪ್ರೇಕ್ಷತೀರ್ಥರಿಂದ ಸಂನ್ಯಾಸಾಶ್ರಮವನ್ನು ಸ್ವೀಕರಿಸಿದರೇ ಹೊರತು ಅವರ ವಂಶಧರ ಶಿಷ್ಯರಾಗಲಿಲ್ಲ. ಅಂದರೆ ಶ್ರೀ ಮಧ್ವಾಚಾರ್ಯರು ಶ್ರೀ ಅಚ್ಯುತಪ್ರೇಕ್ಷತೀರ್ಥರ ಯತಿ ಪೀಳಿಗೆಯಲ್ಲಿ ಸೇರುವುದಿಲ್ಲ - ಎಂಬುದೂ ಸ್ಪಷ್ಟವಾಗುತ್ತದೆ.

ಇವುಗಳ ಜೊತೆಯಲ್ಲಿ ಈ 'ಮಧ್ವವಿಲಾಸಗ್ರಂಥ'ದಲ್ಲಿ ಕೆಲವು ಗಮನಾರ್ಹ ವಿಚಾರಗಳು ಬಂದಿವೆ. ಅವುಗಳನ್ನು ಹೀಗೆ ಸಂಗ್ರಹಿಸಲಾಗಿದೆ.

೧. ಈ ಗ್ರಂಥದಲ್ಲಿ ಎರಡನೆಯ ವಿಲಾಸದಲ್ಲಿ ಒಮ್ಮೆ ಪಾಠ ನಡೆಯುತ್ತಿದ್ದ ಸಮಯದಲ್ಲಿ ಯಾವುದೋ ಒಂದು ವಿಷಯದಲ್ಲಿ ಶ್ರೀ ಮಧ್ವಾಚಾರ್ಯರು ಅನೇಕ ರೀತಿಯ ವಿಕಲ್ಪಗಳನ್ನು ಮಾಡಿದಾಗ ಅವುಗಳನ್ನು ಗುರುಗಳಿಗೆ ಪರಿಹರಿಸಲು ಆಗಲಿಲ್ಲ. ಜನರೆಲ್ಲ ಬಹಳ ಆಶ್ಚರ್ಯಗೊಂಡರು ಎನ್ನುವುದಾಗಿ ನಿರೂಪಿತವಾಗಿದೆ.

ಪ್ರಾಯಃ ಈ ವಿಚಾರ ಅಪೂರ್ವ ಅಂತ ಕಾಣುತ್ತದೆ. 'ಸುಮಧ್ವವಿಜಯ'ಗ್ರಂಥದಲ್ಲಿ ವಾದಿಸಿಂಹ ಎನ್ನುವ ಬೌದ್ಧ ವಿದ್ವಾಂಸ ಅನೇಕ ವಿಕಲ್ಪಗಳನ್ನು ಮಾಡಿದ್ದರ ಉಲ್ಲೇಖವಿದೆ. ಅದೇ ರೀತಿಯಲ್ಲಿ ಶ್ರೀ ಮಧ್ವಾಚಾರ್ಯರು 'ಇಷ್ಟಸಿದ್ಧಿ' ಎನ್ನುವ ಗ್ರಂಥದ ಮಂಗಳಾಚರಣ ಶ್ಲೋಕದಲ್ಲಿ 32 ದೋಷಗಳನ್ನು ಹೇಳಿದಾಗ, ಗುರುಗಳಿಗೆ ಅವುಗಳನ್ನು ಪರಿಹರಿಸಲು ಆಗಲಿಲ್ಲ ಎಂದು ಉಲ್ಲೇಖವಿದೆ. ಆದರೆ ಈ ಎರಡು ಘಟನೆಗಳ ಒಂದೊಂದು ಅಂಶವನ್ನು ತೆಗೆದುಕೊಂಡು ನಿರೂಪಿತವಾದಂತೆ ಕಂಡು ಬಂದರೂ ಸುಮಧ್ವವಿಜಯಗ್ರಂಥ ಉಲ್ಲೇಖಮಾಡದ ವಿಚಾರ ಇದಾಗಿದೆ ಎಂದು ಅರ್ಥೈಸಬಹುದಾಗಿದೆ.

೨. ಶ್ರೀ ಮಧ್ವಾಚಾರ್ಯರು ಗುರುಗಳ ಜೊತೆಯಲ್ಲಿ ಕೈಗೊಂಡ ದಕ್ಷಿಣದೇಶದ ದಿಗ್ವಿಜಯವು ಚಾತುರ್ಮಾಸ್ಯ ವ್ರತದ ಸಮಾಪ್ತಿಯೊಂದಿಗೆ ಮುಗಿಯಲು ಪುನಃ ಉಡುಪಿಗೆ ಬಂದರು. ಆ ಸಮಯದಲ್ಲಿ ಈ ಗ್ರಂಥದ ಗ್ರಂಥಕರ್ತೃಗಳು (ಮುಂದೆ ಸತ್ಯತೀರ್ಥರೆನಿಸುವವರು) ಉಡುಪಿಯಲ್ಲಿ ಶ್ರೀ ಅಚ್ಯುತಪ್ರೇಕ್ಷತೀರ್ಥರು, ಶ್ರೀ ಪುರುಷೋತ್ತಮತೀರ್ಥರು ಮತ್ತು ಶ್ರೀ ಮಧ್ವಾಚಾರ್ಯರು ಒಟ್ಟಿಗೆ ಇರುವಾಗ ಬಂದು, ಅವರಿಗೆ ನಮಸ್ಕಾರವನ್ನು ಮಾಡಿದರು. ಆಗ ಶ್ರೀ ಅಚ್ಯುತಪ್ರೇಕ್ಷತೀರ್ಥರು ಅವರಲ್ಲಿ ಬಂದ ಕಾರಣವನ್ನು ಕೇಳಿದಾಗ 'ತನಗೆ ತುರ್ಯಾಶ್ರಮದ ದೀಕ್ಷೆಯನ್ನಿತ್ತು ಅನುಗ್ರಹಿಸಬೇಕೆಂದು' ಗ್ರಂಥಕರ್ತೃಗಳು ಪ್ರಾರ್ಥಿಸಿದರು. ಆಗ ಶ್ರೀ ಪುರುಷೋತ್ತಮತೀರ್ಥರು ತಮ್ಮ ಗುರುಗಳಾದ ಶ್ರೀ ಅಚ್ಯುತ ಪ್ರೇಕ್ಷತೀರ್ಥರ ಅನುಜ್ಞೆಯನ್ನು ಪಡೆದು, ಗ್ರಂಥಕರ್ತೃಗಳಿಗೆ ಸಂನ್ಯಾಸದೀಕ್ಷೆಯನ್ನಿತ್ತು 'ಸತ್ಯತೀರ್ಥ' ಎನ್ನುವ ಹೆಸರನ್ನು ನೀಡಿದರು ಎನ್ನುವ ಘಟನೆ ಎರಡನೆಯ ವಿಲಾಸದಲ್ಲಿ ನಿರೂಪಿತವಾಗಿದೆ.

ಇದರಿಂದ ಸ್ಥೂಲವಾಗಿ ಶ್ರೀ ಸತ್ಯತೀರ್ಥರ ಸಂನ್ಯಾಸಸ್ವೀಕಾರ ಯಾವಾಗ ಆಯಿತು ಎನ್ನುವುದನ್ನು ತಿಳಿಯುವುದರ ಜೊತೆಯಲ್ಲಿ ಒಂದೇ ಸಮಯದಲ್ಲಿ ಪೀಳಿಗೆಯ ಮೂವರು ಯತಿಗಳಿದ್ದರು ಎಂಬ ವಿಷಯವೂ ತಿಳಿಯುತ್ತದೆ.

೩. ಶ್ರೀ ಮಧ್ವಾಚಾರ್ಯರು ಬದರಿಕಾಶ್ರಮದಲ್ಲಿ ಕಾಷ್ಠಮೌನವ್ರತವನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ಶ್ರೀ ವೇದವ್ಯಾಸರು ಕಾಣಿಸಿಕೊಂಡು ತಮ್ಮ ಆಶ್ರಮಕ್ಕೆ ಬರಲು ಶ್ರೀ ಮಧ್ವಾಚಾರ್ಯರಿಗೆ

ಪ್ರೇರಣೆಯನ್ನು ನೀಡಿದರು. ಮೌನವ್ರತದ ನಿಯಮದಿಂದಾಗಿ ಶಿಷ್ಯರನ್ನು ಕುರಿತು ಶ್ರೀ ಮದಾಚಾರ್ಯರಿಗೆ ನೇರವಾಗಿ ವಿಷಯವನ್ನು ತಿಳಿಸಲು ಆಗಲಿಲ್ಲ. ಆದುದರಿಂದ ಒಂದು ಪತ್ರದಲ್ಲಿ ಶಿಷ್ಯರಿಗೆ ತಿಳಿಸಬೇಕಾದ ವಿಷಯವನ್ನು ಬರೆದು, ಅದನ್ನು ಬೆಳಿಗ್ಗೆಯ ಸಮಯದಲ್ಲಿ ಶಿಷ್ಯರ ಬಳಿಯಿರಿಸಿ ವ್ಯಾಸಾಶ್ರಮದತ್ತ ಹೆಜ್ಜೆ ಹಾಕಿದರು. ಶ್ರೀ ಮದಾಚಾರ್ಯರು ಪತ್ರದಲ್ಲಿ ಬರೆದ ವಿಷಯವನ್ನು 'ಸುಮಧ್ವವಿಜಯ'ಗ್ರಂಥ ಈ ರೀತಿಯಾಗಿ ಉಲ್ಲೇಖಿಸಿದೆ.

ಅ. ಬದರೀಕ್ಷೇತ್ರಕ್ಕೆ ಸಮಾನವಾದ ಪಾಪ ಪರಿಹಾರಕವಾದ ಕ್ಷೇತ್ರ ಇನ್ನೊಂದಿಲ್ಲ.

ಆ. ಗಂಗಾನದಿಗೆ ಸದೃಶವಾದ ತೀರ್ಥ ಮತ್ತೊಂದಿಲ್ಲ.

ಇ. ಶ್ರೀಹರಿಗೆ ಸರಿಯೆನಿಸುವ ಇನ್ನೊಬ್ಬ ದೇವರಿಲ್ಲ.

ಈ. ನಮ್ಮ (ಶ್ರೀ ಮದಾಚಾರ್ಯರ) ಮಾತಿನಷ್ಟು ಹಿತಕರವಾದ ಮಾತು ಮತ್ತೊಂದಿಲ್ಲ.

ಆದರೆ ಈ 'ಮಧ್ವವಿಲಾಸಗ್ರಂಥದಲ್ಲಿ ಈ ಮೇಲಿನ ನಾಲ್ಕು ವಿಷಯಗಳಲ್ಲಿ ನಾಲ್ಕನೆಯ ವಿಷಯ ನಿರೂಪಿತವಾಗಿಲ್ಲ. ಅದರ ಬದಲಿಗೆ 'ವೇದಶಾಸ್ತ್ರಕ್ಕಿಂತ ಮಿಗಿಲಾದ ಒಂದು ಮಾತಿಲ್ಲ' ಎನ್ನುವ ವಿಷಯ ಬಂದಿದೆ.

ಈ ಎರಡು ವಿಷಯಗಳನ್ನು ಸಮನ್ವಯ ಮಾಡಿಕೊಂಡು 'ನಮ್ಮ (ಶ್ರೀ ಮದಾಚಾರ್ಯರ) ಮಾತು ವೇದದ ಮಾತೇ ಆಗಿರುವಂತಹದ್ದು' ಎಂಬ ತಾತ್ಪರ್ಯಾರ್ಥದ ಹಿನ್ನಲೆಯಲ್ಲಿ ವಿರೋಧವನ್ನು ಪರಿಹರಿಸಬಹುದಾಗಿದೆ.

ತಾನು ಪುನಃ ಶ್ರೀವೇದವ್ಯಾಸರ ಆಶ್ರಮದಿಂದ ಮರಳಿ ಬರುತ್ತೇನೋ, ಇಲ್ಲವೋ ಗೊತ್ತಿಲ್ಲ' ಎನ್ನುವ ವಿಷಯ ಸುಮಧ್ವವಿಜಯಗ್ರಂಥದಲ್ಲಿ ಇದ್ದರೆ, ಆ ವಿಷಯ ಈ ಮಧ್ವವಿಲಾಸಗ್ರಂಥದಲ್ಲಿ ಇಲ್ಲ. ಇದರಲ್ಲಿ ಉಪದೇಶವನ್ನು ಮಾಡುತ್ತಾ 'ಈ ರೀತಿಯಾಗಿ ಎಲ್ಲರೂ ತಿಳಿದುಕೊಳ್ಳಿರಿ; ಎಂದೂ ಮರೆಯದಿರಿ' ಎನ್ನುವ ವಿಷಯ ಬಂದಿದ್ದರೆ, ಸುಮಧ್ವವಿಜಯಗ್ರಂಥದಲ್ಲಿ ಈ ವಿಷಯದ ನಿರೂಪಣೆ ಬಂದಿಲ್ಲ - ಹೀಗೆ ಇದೊಂದು ಗಮನಿಸಬೇಕಾದ ವಿಚಾರವಾಗಿದೆ.

೪. ಸುಮಧ್ವವಿಜಯಗ್ರಂಥದಲ್ಲಿ ಶ್ರೀಮದಾಚಾರ್ಯರು ಬದರಿಕಾಶ್ರಮಕ್ಕೆ ಹೋಗಿ, ಅಲ್ಲಿಂದ ಶ್ರೀ ವೇದವ್ಯಾಸರ ಆಶ್ರಮಕ್ಕೆ ತೆರಳಿ, ಅಲ್ಲಿಂದ ಮತ್ತೆ ಶ್ರೀವೇದವ್ಯಾಸರ ಜೊತೆಯಲ್ಲಿ ನಾರಾಯಣಾಶ್ರಮಕ್ಕೆ ತೆರಳಿ ಅಲ್ಲಿ ನಾರಾಯಣದೇವರಿಂದ ಬ್ರಹ್ಮಸೂತ್ರಗಳಿಗೆ ಭಾಷ್ಯಗ್ರಂಥವನ್ನು ಬರೆಯಬೇಕೆಂಬ ಆಜ್ಞೆಯನ್ನು ಸ್ವೀಕಾರ ಮಾಡಿದರು ಎನ್ನುವುದಾಗಿ ನಿರೂಪಿಸಲ್ಪಟ್ಟಿದೆ.

ಪುನಃ ಶ್ರೀಮದಾಚಾರ್ಯರು ತಮ್ಮ ಶಿಷ್ಯರು ನೆಲಸಿರುವ ಅನಂತಮಠಕ್ಕೆ ಬಂದು ಅಲ್ಲಿ ವಾಸಮಾಡುತ್ತಾ ಬ್ರಹ್ಮಸೂತ್ರಗಳಿಗೆ ಭಾಷ್ಯಗ್ರಂಥವನ್ನು ಬರೆದರು ಎನ್ನುವ ಅಂಶ 'ಸುಮಧ್ವವಿಜಯಗ್ರಂಥ'ದಲ್ಲಿ ಉಲ್ಲೇಖಗೊಂಡಿದ್ದರೂ, ಮಧ್ವವಿಲಾಸದಲ್ಲಿ (3.16) ಈ ವಿಷಯ ಶಬ್ದತಃ ಸ್ಪಷ್ಟವಾಗಿಯೇ ಉಲ್ಲೇಖಿಸಲ್ಪಟ್ಟಿದೆ.

ಹೀಗೆ ಸುಮಧ್ವವಿಜಯದಲ್ಲಿ ಬಂದ ಒಂದು ಘಟನೆಯನ್ನು ಬಹಳ ಸ್ಪಷ್ಟವಾಗಿ ಮಧ್ವವಿಲಾಸಗ್ರಂಥ ನಿರೂಪಿಸಿದೆ ಎಂದು ತಿಳಿಯಬಹುದಾಗಿದೆ.

೫. ಪೂಜಾದಿವಿಭವಂ ಚಾಸೌ ಕಾರಯಾಮಾಸ ಸಾನುಜಃ (ಚಕ್ರೇ ಸಾನುಜೋ ಮಾಧವಪ್ರಿಯಃ ಎನ್ನುವುದಾಗಿ ಶ್ರೀ ಮದಾಚಾರ್ಯರು ಶ್ರೀಕೃಷ್ಣನನ್ನು ಪ್ರತಿಷ್ಠಾಪಿಸುವ ಸಂದರ್ಭದಲ್ಲಿ ಪೂಜಾ ವ್ಯವಸ್ಥೆಗಳನ್ನು ತಮ್ಮಂದಿರೊಂದಿಗೆ ಜೊತೆಗೂಡಿ ಮಾಡಿದರು ಎನ್ನುವುದಾಗಿ ಮೂರನೆಯ ವಿಲಾಸ ಹದಿನಾರನೆಯ ಶ್ಲೋಕದಲ್ಲಿ ನಿರೂಪಿತವಾಗಿದೆ. ಯಾವ ರೀತಿಯ ವ್ಯವಸ್ಥೆಯನ್ನು ಮಾಡಿದರು ಎನ್ನುವುದು ಸ್ಪಷ್ಟವಾಗುವುದಿಲ್ಲ.

ಶ್ರೀವಿಷ್ಣುತೀರ್ಥರು ಶ್ರೀಮದಾಚಾರ್ಯರ ಮುಖ್ಯಶಿಷ್ಯರಲ್ಲಿ ಶ್ರೇಷ್ಠಜ್ಞಾನಿಗಳಾಗಿರುವುದರಿಂ ಶ್ರೀಕೃಷ್ಣನ ಪೂಜೆಗೆ ಸಂಬಂಧಿಸಿದ ವಿಧಿ-ನಿಯಮಗಳನ್ನು ಶ್ರೀ ವಿಷ್ಣುತೀರ್ಥರ ವ್ಯವಸ್ಥೆ ಮಾಡಿರಬಹುದು. ಈ ಒಂದು ಅವಕಾಶದಿಂದಲೇ ಅವರು ಮುಂದೆ 'ಸಂನ್ಯಾಸಪದ್ಧತಿ'ಯನ್ನ ಬರೆಯುವಂತಾಗಿರಬಹುದು ಎಂಬುದನ್ನು ನಾವು ಮೇಲಿನ ಒಂದು ಉಲ್ಲೇಖದಿಂ ತಿಳಿಯಬಹುದೋ ಏನೋ?

೬. 'ತಥಾ ವ್ಯಾಸಾಭಿಧಾನಂ ಚ ಸ್ವಪದೇ ಸಂವಿರಕ್ತಿಮಾನ್ ನ್ಯಧಾತ್' ಎನ್ನುವುದಾಗಿ ಮೂರನೆಯ ವಿಲಾಸದ 47ನೆಯ ಶ್ಲೋಕದಲ್ಲಿ ಶ್ರೀ ವಿಷ್ಣುತೀರ್ಥರು ಶ್ರೀ ವ್ಯಾಸತೀರ್ಥರೆನ್ನುವ ಶಿಷ್ಯರನ್ನು ಸ್ವೀಕರಿಸಿ ಅವರನ್ನು ತಮ್ಮ ಸಂಸ್ಥಾನದ (ಸೋದಾ ಸಂಸ್ಥಾನದ) ಉತ್ತರಾಧಿಕಾರಿಯನ್ನಾಗಿ ಮಾಡಿದರು ಎನ್ನುವುದಾಗಿ ಉಲ್ಲೇಖಿಸಲಾಗಿದೆ.

ಇದರಿಂದಾಗಿ ಶ್ರೀವಿಷ್ಣುತೀರ್ಥರು ಸೋದಾ ಸಂಸ್ಥಾನದ ಯತಿಪೀಠಿಗೆಯಲ್ಲಿ ಮೊದಲ ಯತಿಗಳಾಗಿದ್ದರು; ಅವರ ಮುಂದೆ ಶ್ರೀ ವ್ಯಾಸತೀರ್ಥರು ಸಂಸ್ಥಾನದ ಉತ್ತರಾಧಿಕಾರಿಗಳಾಗಿ ಯತಿ ಪೀಠಿಗೆ ಮುಂದುವರಿಯಿತು; ಶ್ರೀಮದಾಚಾರ್ಯರು ಅಷ್ಟಮಠಗಳಿಗೆ ಸ್ಥಾಪಕ ಗುರುಗಳಿದ್ದಂತೆ, ಶ್ರೀ ವಿಷ್ಣುತೀರ್ಥರು ಸುಬ್ರಹ್ಮಣ್ಯ ಮಠಕ್ಕೆ ಕೇವಲ ಸ್ಥಾಪಕಗುರುಗಳಾಗಿದ್ದರು; ಅಲ್ಲಿಯ ಯತಿಪೀಠಿಗೆಯು ಶ್ರೀ ವಿಷ್ಣುತೀರ್ಥರಿಂದ ಸಂನ್ಯಾಸಾಶ್ರಮವನ್ನು ಸ್ವೀಕರಿಸಿದ ಶ್ರೀ ಅನಿರುದ್ಧತೀರ್ಥರಿಂದ ಆರಂಭಗೊಂಡಿತು; (ಶ್ರೀವಿಷ್ಣುತೀರ್ಥರು ಶ್ರೀ ಸುಬ್ರಹ್ಮಣ್ಯ ಮಠದ ಯತಿಪೀಠಿಗೆಯಲ್ಲಿ ಮೊದಲ ಯತಿಗಳಾಗಲಿಲ್ಲ)- ಎನ್ನುವ ವಿಷಯಗಳನ್ನು ನಿಖರವಾಗಿ ತಿಳಿದುಕೊಳ್ಳಬಹುದು.

೭. 'ಬಹುಶಿಷ್ಯಪ್ರಶಿಷ್ಯೈಶ್ಚ ಯುತೋ ರೇಜೇ ಮಹಾಮತಿಃ' ಎನ್ನುವುದಾಗಿ ಶ್ರೀ ಮದಾಚಾರ್ಯರು ಅನೇಕ ಶಿಷ್ಯರಿಂದ, ಅನೇಕ ಪ್ರಶಿಷ್ಯರಿಂದ ಕೂಡಿಕೊಂಡು ಕಂಗೊಳಿಸಿದರು ಎನ್ನುವ ವಿಷಯವನ್ನು ಮೂರನೆಯ ವಿಲಾಸದ 51ನೆಯ ಶ್ಲೋಕದಲ್ಲಿ ನಿರೂಪಿಸಲಾಗಿದೆ.

ಈ ನಿರೂಪಣೆಯಿಂದ ಆ ಸಮಯದಲ್ಲಿ ಶ್ರೀ ಮದಾಚಾರ್ಯರ ಶಿಷ್ಯರಾದ ಅಷ್ಟಮಠದ ಯತಿಗಳು ಶಿಷ್ಯರನ್ನು ಸ್ವೀಕರಿಸಿದ್ದರು ಎನ್ನುವ ಅಂಶ ಸ್ಪಷ್ಟವಾಗುತ್ತದೆ.

(ಸೋದೆ ಮಠಕ್ಕೆ ಸಂಬಂಧಿಸಿದ ಈ ವಿವರಣೆ ಹಿಂದೆ ಬಂದಿರುವುದೂ ಇದಕ್ಕೊಂದು ಗಮಕವೇ ಆಗಿರುತ್ತದೆ.)

೮. 'ಸುಖತೀರ್ಥೇನ ತನ್ಮಧ್ಯೇ ಮುಖ್ಯಶಿಷ್ಯಾ ನವಾಭವನ್' ಎನ್ನುವ ಶ್ಲೋಕದಲ್ಲಿ ಶ್ರೀ ಮದಾಚಾರ್ಯರಿಗೆ ಮುಖ್ಯವಾಗಿ 9 ಮಂದಿ ಶಿಷ್ಯರಿದ್ದರು ಎಂದು ಉಲ್ಲೇಖಿಸಿ, ಮುಂದಿನ ಶ್ಲೋಕಾರ್ಧದ ಭಾಗದಲ್ಲಿ 'ವಿಷ್ಣುತೀರ್ಥಃ ಕವಿವರಃ ಪದ್ಮನಾಭೋ ಜನಪ್ರಿಯಃ' ಎನ್ನುವುದಾಗಿ

ಪ್ರಧಾನವಾಗಿ ಇಬ್ಬರನ್ನು ಉಲ್ಲೇಖಿಸಲಾಗಿದೆ. ಈ ವಿಚಾರಕ್ಕೆ ಅನೇಕ ಗ್ರಂಥಗಳು ಸಂವಾದಿಯಾಗಿವೆ.

ಶ್ರೀ ಪದ್ಮನಾಭತೀರ್ಥರಿಗೆ ಶ್ರೀ ಮದಾಚಾರ್ಯರು ಶ್ರೀಕೃಷ್ಣನನ್ನು ಪೂಜಿಸುವ ಅಧಿಕಾರವನ್ನು ನೀಡಲಿಲ್ಲ ಎನ್ನುವುದನ್ನು ಈ ಮಧ್ವವಿಲಾಸದ 74 ನೆಯ ಶ್ಲೋಕದಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ.

೯. ಶ್ರೀ ಮದಾಚಾರ್ಯರ ಉಳಿದ ಪ್ರಧಾನ ಶಿಷ್ಯರನ್ನು ಉಲ್ಲೇಖಿಸುವಾಗ 2 ಶ್ಲೋಕಗಳಲ್ಲಿ ಉಳಿದ ಏಳು ಶಿಷ್ಯರನ್ನು ಒಂದೊಂದು ವಿಶೇಷಣವನ್ನು ನೀಡಿ ಹೆಸರಿಸಲಾಗಿದೆ. ಒಬ್ಬೊಬ್ಬರಿಗೂ ನೀಡಿದ ವಿಶೇಷಣ ಬೇರೆ ಬೇರೆ ಯಾಗಿದ್ದು, ಆ ವಿಶೇಷಣ ಅವರವರ ವಿಶಿಷ್ಟವ್ಯಕ್ತಿತ್ವವನ್ನು ಪರಿಚಯಿಸುವಂತಿದೆ. ಅವುಗಳ ವಿವರಣೆಯನ್ನು ಹೊಂದೆ ಅನುವಾದದಲ್ಲಿ ಸ್ಥೂಲವಾಗಿ ನೀಡಲಾಗಿದೆ. ಆಯಾ ಮಠಗಳ ಮೂಲದಾಖಲೆಗಳನ್ನು ಪರಿಶೀಲಿಸಿ, ಮೂಲಯತಿಗಳ ವ್ಯಕ್ತಿತ್ವದ ಮುಖವನ್ನು ಇನ್ನಷ್ಟು ಪರಿಚಯಿಸಿಕೊಳ್ಳುವುದಕ್ಕೆ ಅವಕಾಶವಾದಂತಾಗಿದೆ.

ಸುಮಧ್ವವಿಜಯಗ್ರಂಥದಲ್ಲಿ ಪ್ರತಿಯೊಬ್ಬರಿಗೂ ಈ ರೀತಿಯಾಗಿ ಒಂದೊಂದು ವಿಶೇಷಣಗಳನ್ನು ಇತ್ತು ಪರಿಚಯಿಸಲಿಲ್ಲ. ಆದ್ದರಿಂದ ಈ ರೀತಿಯ ನಿರೂಪಣೆಗೆ ಬಹಳ ಮಹತ್ತ್ವವಿದೆ ಎಂದು ಅರಿಯಬಹುದು.

೧೦. ಒಮ್ಮೆ ಶ್ರೀ ಮದಾಚಾರ್ಯರ ಬಲವನ್ನು ಪರೀಕ್ಷಿಸುವ ದೃಷ್ಟಿಯಿಂದ, ಅವರ ಕುತ್ತಿಗೆಯನ್ನು ಒತ್ತುವ ಕೆಲಸಕ್ಕೆ ಪ್ರಯತ್ನಪಟ್ಟ 'ಗಂಡವಾಟ' ಎನ್ನುವ ಹೆಸರಿನವನು 'ಬ್ರಾಹ್ಮಣ' ಎಂದು ಈ ಗ್ರಂಥ (3.67) ಉಲ್ಲೇಖಿಸಿದೆ. 'ಸುಮಧ್ವ ವಿಜಯ' ಗ್ರಂಥ ಈ ವಿಷಯದಲ್ಲಿ ಏನನ್ನೂ ತಿಳಿಸಲಿಲ್ಲ. ಆದರೆ ಛಲಾರೀಯ ಟೀಕಾ ಗ್ರಂಥದಲ್ಲಿ ಆ ವ್ಯಕ್ತಿ ಬ್ರಾಹ್ಮಣ ಎಂದು ನಿರೂಪಿಸಲಾಗಿದೆ. ಆದ್ದರಿಂದ ಛಲಾರಿಯವರು ಈ ಗ್ರಂಥವನ್ನು ಅವಲೋಕಿಸಿರುವ ಸಾಧ್ಯತೆಯನ್ನು ಊಹಿಸಬಹುದಾಗಿದೆ.

ಅಲ್ಲದೆ ಬ್ರಾಹ್ಮಣನಲ್ಲದ ವ್ಯಕ್ತಿ ಶ್ರೀ ಮದಾಚಾರ್ಯರ ಕುತ್ತಿಗೆಯನ್ನು ಹೇಗೆ ಮುಟ್ಟಿದ? ಎನ್ನುವ ಪ್ರಶ್ನೆಗೂ ಉತ್ತರ ದೊರಕಿದಂತಾಗಿದೆ.

೧೧. ಮೂರನೆಯ ವಿಲಾಸದ 77ನೆಯ ಶ್ಲೋಕದಲ್ಲಿ ಶ್ರೀ ಮದಾಚಾರ್ಯರು ಉಡುಪಿಯಲ್ಲಿರುವ ಶ್ರೀ ಅನಂತಾಸನ ದೇವರನ್ನೂ ಅನೇಕ ವಿಧವಾದ, ಬಗೆಬಗೆಯ ಛಂದಸ್ಸುಗಳುಳ್ಳ ಸ್ತೋತ್ರಗಳನ್ನು ರಚಿಸಿ ಕೊಂಡಾಡಿದರು- ಎಂಬುದಾಗಿ ಉಲ್ಲೇಖವಿದೆ. ಮುಂದಿನ ಶ್ಲೋಕದಲ್ಲಿ ಶ್ರೀಕೃಷ್ಣನನ್ನು ಸ್ತುತಿಸಿದ ವಿವರಣೆಯಿದೆ. ಆದ್ದರಿಂದ ಶ್ರೀಅನಂತಾಸನದೇವರನ್ನು ಶ್ರೀಮದಾಚಾರ್ಯರು ಸ್ತುತಿಸಿದ್ದಾರೆ ಎನ್ನುವುದು ಒಂದು ಅಪೂರ್ವ ಉಲ್ಲೇಖವೆನಿಸುತ್ತದೆ. ಆದರೆ ಇದನ್ನು ದೃಢಪಡಿಸುವ ಯಾವ ಶ್ಲೋಕವೂ ಸಿಗದಿರುವುದು ನಮ್ಮ ದೌರ್ಭಾಗ್ಯವೆನಿಸಿದೆ.

೧೨. ಈ ಗ್ರಂಥದ ಎರಡು ಕಡೆಗಳಲ್ಲಿ (2.39 ಮತ್ತು 3.59) ಅಪಾಣಿನೀಯ ರೂಪಗಳು ಬಂದಿವೆ. 'ಅಬ್ರುವವ್' ಹಾಗೂ 'ಆಹ್ವಯಿತ್ವಾ' ಎನ್ನುವುದೇ ಆ ಎರಡು ರೂಪಗಳು. ಆದರೆ ಸಾಧುಶಬ್ದಗಳಲ್ಲಿಯೇ ಪಾಣಿನೀಯ ಹಾಗೂ ಅಪಾಣಿನೀಯ ಎನ್ನುವ ಎರಡು ಪ್ರಭೇದಗಳಿವೆ ಎನ್ನುವುದನ್ನು ಒಪ್ಪಿಕೊಳ್ಳಬೇಕಾಗುವುದರಿಂದ ಈ ಶಬ್ದಗಳು ಸಾಧುವೇ ಆಗುತ್ತವೆ.

ಅದೇ ರೀತಿಯಲ್ಲಿ 'ರವಿಮಂಡಲೇ ಉದಯೇ' ಎನ್ನುವ ಇನ್ನೊಂದು ಪ್ರಯೋಗದಲ್ಲಿ (2.31) ಉದಯ ಎನ್ನುವುದು 'ಅರ್ಶ ಆದ್ಯಚ್' ಎನ್ನುವ ಸೂತ್ರದಿಂದ ಬಂದ 'ಅಚ್' ಪ್ರತ್ಯಯವನ್ನು

ಹೊಂದಿದ ಶಬ್ದ ಅಂತ ತಿಳಿದುಕೊಳ್ಳಬೇಕು.

೧೩. ಗಂಡವಾಟ ಎನ್ನುವ ಬ್ರಾಹ್ಮಣನ ಪ್ರಸ್ತಾವದಲ್ಲಿ (3.67) ಆ ಇಬ್ಬರು ಸಹೋದರರ ಮಾತು, ಹಾಗೂ ಅವರಿಬ್ಬರು ಮಂದಿರಕ್ಕೆ ಪ್ರವೇಶಿದ್ದು - ಈ ಎರಡು ವಿಷಯಗಳು ಅಪೂರ್ವವೇ ಆಗಿವೆ.

೧೪. ಕೊನೆಯದಾಗಿ ಶ್ರೀಸತ್ಯತೀರ್ಥರು ತಮಗೇ ಸಂಬಂಧಿಸಿದ ಅಪೂರ್ವ ಮೂರು ಘಟನೆಗಳನ್ನು ಸ್ವಲ್ಪವೂ ಉಲ್ಲೇಖಿಸದಿರುವುದು ಬಹಳ ಆಶ್ಚರ್ಯವನ್ನುಂಟುಮಾಡುತ್ತಿದೆ.

ಶ್ರೀಮದಾಚಾರ್ಯರು ಎರಡನೆಯ ಬದರೀಯಾತ್ರೆಯ ಸಂದರ್ಭದಲ್ಲಿ ಶ್ರೀ ಸತ್ಯತೀರ್ಥರ ಮೇಲೆ ದೈತ್ಯನೊಬ್ಬ ವ್ಯಾಘ್ರ(ಹುಲಿ) ರೂಪದಲ್ಲಿ ಎರಗಿದಾಗ ತಮ್ಮ ಕೈಯಿಂದಲೇ ಬಹಳ ಮೆಲ್ಲಗೆ ಹೊಡೆದು ಸಾಯಿಸಿದರು.

'ಸುಮಧ್ವವಿಜಯಗ್ರಂಥ'ದಲ್ಲಿ ಈ ಘಟನೆಯನ್ನು ಉಲ್ಲೇಖಿಸುವಾಗ 'ಭಾವಪ್ರಕಾಶಿಕಾ'ದಲ್ಲಿ ಶ್ರೀನಾರಾಯಣಪಂಡಿತಾಚಾರ್ಯರು 'ಶ್ರೀಸತ್ಯತೀರ್ಥರು ಶ್ರೀಮದಾಚಾರ್ಯರಿಂದ ಪೂಜಿತವಾಗುವ ದೇವರ ಪೆಟ್ಟಿಗೆಯನ್ನು ಹಿಡಿದುಕೊಂಡು ಮುಂಭಾಗದಲ್ಲಿ ಹೋಗುತ್ತಿದ್ದರು' ಎಂದು ಉಲ್ಲೇಖಿಸಿದ್ದಾರೆ. ಪ್ರಾಯಃ ಶ್ರೀ ಮದಾಚಾರ್ಯರ ದೇವರ ಪೆಟ್ಟಿಗೆಯನ್ನು ಶ್ರೀಸತ್ಯತೀರ್ಥರು ಯಾವಾಗಲೂ ಹೊತ್ತುಕೊಂಡು ಮುಂಭಾಗದಲ್ಲಿ ಹೋಗುತ್ತಿದ್ದರು ಎಂದು ಕಾಣುತ್ತದೆ.

ಕುರುಕ್ಷೇತ್ರದಲ್ಲಿ ಶ್ರೀಮದಾಚಾರ್ಯರು ಸಂಚಾರ ಮಾಡುತ್ತಿದ್ದಾಗ, ಆ ಕುರುಕ್ಷೇತ್ರದಲ್ಲಿ ತಪಸ್ವಿಯಂತೆ ಕಾಣುತ್ತಿದ್ದ ಡಂಭಾಚಾರದ ವ್ಯಕ್ತಿಯನ್ನು ಸತ್ಯತೀರ್ಥರೇ ಮೊದಲಾದ ತಮ್ಮ ಶಿಷ್ಯರಿಗೆ ತೋರಿಸಿದರು. ಅವರೆಲ್ಲರೂ ಅವನನ್ನು ಪರೀಕ್ಷಿಸಿದಾಗ ಅವನು ವಿಷ್ಣುದ್ವೇಷಿಯೆಂದು ದೃಢಪಟ್ಟಿತು. ಅವರೆಲ್ಲರಿಗೂ ಶ್ರೀಮದಾಚಾರ್ಯರ ದಿವ್ಯಜ್ಞಾನವನ್ನು ಕಂಡು ಬಹಳ ಆಶ್ಚರ್ಯವಾಯಿತು.

ಅಲ್ಲಿಯೇ ಶ್ರೀಮದಾಚಾರ್ಯರು ವಾಸಮಾಡಿದ್ದಾಗ ಸತ್ಯತೀರ್ಥರೇ ಮೊದಲಾದ ಶಿಷ್ಯರು ಶ್ರೀಮದಾಚಾರ್ಯರಲ್ಲಿ 'ತಾವು ಭೀಮಸೇನನಾಗಿದ್ದಾಗ ಧರಿಸಿದ್ದ ಗದೆಯನ್ನು ನಮಗೆ ತೋರಿಸಬೇಕು' ಎಂದು ಪ್ರಾರ್ಥಿಸಿದರು. ಅವರ ಪ್ರಾರ್ಥನೆಯಂತೆ ಒಂದೆಡೆ ನೆಲವನ್ನು ಅಗೆಯುವಂತೆ ಹೇಳಿ ಅಲ್ಲಿದ್ದ ತಮ್ಮ ಗದೆಯನ್ನು ಶಿಷ್ಯರಿಗೆ ತೋರಿಸಿದರು. ಅಲ್ಲದೆಯೇ ಸತ್ಯತೀರ್ಥರಿಗೆ 'ನೀವು ದ್ವಾಪರಯುಗದಲ್ಲಿ ಒಬ್ಬ ರಾಜರಾಗಿದ್ದು ಈ ಆಯುಧವನ್ನು ಹಿಡಿದುಕೊಂಡಿದ್ದಿರಿ' ಎಂದು ಹೇಳಿ ಅವರ ಆಯುಧವನ್ನು ತೋರಿಸಿದರು.

ಈ ಘಟನೆಗಳು ಈ ಗ್ರಂಥದಲ್ಲಿ ನಿರೂಪಿತವಾಗಿಲ್ಲ. ಪ್ರಾಯಃ ಈ ಘಟನೆಗಳಿಂದ ತಮ್ಮ ಹೆಗ್ಗಳಿಕೆಯನ್ನು ತಾವೇ ಹೇಳಿಕೊಂಡಂತೆ ಆಗುತ್ತದೆ ಎಂಬ ದೃಷ್ಟಿಯಿಂದ ಹೇಳಲಿಲ್ಲ ಎಂದು ತಿಳಿದುಕೊಳ್ಳಬಹುದಾಗಿದೆ. ಅಥವಾ ಶ್ರೀಸತ್ಯತೀರ್ಥರ ಸಮಕಾಲೀನ ಮಹಾತ್ಮರೂ ಈ ವಿಷಯವನ್ನು ಅವರ ಗ್ರಂಥದಲ್ಲಿ ಉಲ್ಲೇಖಿಸಿರಬಹುದು. ಇದರ ಬಗ್ಗೆ ಇನ್ನೂ ಹೆಚ್ಚಿನ ಪರಿಶೀಲನೆ ಸಾಗಬೇಕಾಗಿದೆ.

ಹೀಗೆ ಇಷ್ಟು ವಿಷಯಗಳು ಈ ಗ್ರಂಥವನ್ನು ಸ್ಥೂಲವಾಗಿ ನೋಡಿದಾಗ ತಿಳಿದುಬರುತ್ತದೆ.

ಪರಿಷ್ಕರಿಸಲ್ಪಟ್ಟ ಭಾಗಗಳು ಮತ್ತು ಜಿಜ್ಞಾಸೆಗಳು

ಅನುವಾದಕ್ಕೆ ಬಳಸಿಕೊಂಡ ಹಸ್ತಪ್ರತಿಯಲ್ಲೇ ನಾಲ್ಕು ಕಡೆಗಳಲ್ಲಿ (2.26, 3.18, 3.27, ಮತ್ತು 3.38) ಪಾಠಾಂತರವನ್ನು ಉಲ್ಲೇಖಿಸಲಾಗಿದೆ. ಅವುಗಳನ್ನು ಅನುವಾದದಲ್ಲಿಯೇ ನಮೂದಿಸಲಾಗಿದೆ. ಇದಲ್ಲದೆ ಸಿಕ್ಕಿದ ಒಂದೇ ಒಂದು ಹಸ್ತಪ್ರತಿಯಲ್ಲಿ ಕೆಲವು ಪಾಠಗಳನ್ನು ನಾನೇ ಪರಿಷ್ಕರಿಸಿಕೊಂಡು ಬಳಸಿಕೊಂಡಿದ್ದೇನೆ. ಅದಕ್ಕಾಗಿ ನಾನು ಬಳಸಿಕೊಂಡ ಪಾಠಗಳನ್ನೂ, ಪ್ರತ್ಯೇಕವಾಗಿ ಪಟ್ಟಿಯ ರೂಪದಲ್ಲಿ ನೀಡುತ್ತಿದ್ದೇನೆ.

ಒಂದನೆಯ ವಿಲಾಸದ 4 ನೆಯ ಶ್ಲೋಕದಲ್ಲಿ 'ಜೀವೋ ಬಂಧಾತ್ವಂ ಲೋಕಸಿದ್ಧಯೇ' ಎಂದು ಹಸ್ತಪ್ರತಿಯಲ್ಲಿದೆ. ಇದನ್ನು ಅರ್ಥೈಸಲಿಕ್ಕೆ ಬರುವುದಾದರೂ, ಸುಲಭವಾಗಿ ಅರ್ಥೈಸುವ ದೃಷ್ಟಿಯಿಂದ 'ಬಂಧಾತಲ್ಲೋಕಸಿದ್ಧಯೇ' ಎಂದು ಬದಲಾಯಿಸಿದ್ದೇನೆ. (ಡಾ। ಪ್ರಭಂಜನಾಚಾರ್ಯರೂ ಇದೇ ರೀತಿಯ ಪಾಠವನ್ನು ಗುರುತಿಸಿದ್ದಾರೆ.) ಹೀಗೆ ಬೇರೆ ಬೇರೆ ಕಾರಣಗಳಿಂದ ಪಾಠವನ್ನು ಬದಲಾಯಿಸಲಾಗಿದೆ. ಇನ್ನಷ್ಟು ಹಸ್ತಪ್ರತಿಗಳು ದೊರಕುವವರೆಗೆ ಹಾಗೂ ಶ್ಲೋಕದ ನಡೆ ಸಮಗ್ರವಾಗಿ ಇರಲಿ ಎನ್ನುವ ದೃಷ್ಟಿಯಿಂದ ಈ ಒಂದು ವ್ಯವಸ್ಥೆಯನ್ನು ಮಾಡಿಕೊಂಡಿದ್ದೇನೆ.

ಕ್ರ.ಸಂ	ವಿಲಾಸ	ಶ್ಲೋ.ಸಂ	ಇರುವ ಪಾಠ	ಬದಲಾಯಿಸಿದ ಪಾಠ
1	1	8	ಕೃಷ್ಣಭೀಮಾವುಭಾವಪಿ	ಕೃಷ್ಣಭೀಮಾವುಭೌ ಚಾಪಿ
2	2	3	ದಕ್ಷಿಣಾಂ ಚ ತಃ	ದಕ್ಷಿಣಾಂ ಚ ಸಃ
3	2	4	ಏವಂ ಸುಖೇನ ಕಾಲಸ್ತು ಗತಃ	ಏವಂ ಸುಖೇನ ಕಾಲೇ ತು ಗತೇ
4	2	12	ಬಹ್ವೀಂ ಕೋಟಿಂ ಕೃತೋಽಪಿ ಸಃ	ಬಹ್ವೀಂ ಕೋಟೀಂ ಕೃತಾಂ ಚ ಸಃ
5	2	16	ಮೇನಿರೇ ವೈ ಬುಧಾಮಯೀಮ್	ಮೇನಿರೇ ವೈ ಬುಧಾ ಯತಿಮ್
6	2	27	ಸಮರ್ಪಯತ್	ಸಮಾರ್ಪಯತ್
7	2	34	ಭೂಯಾದಿತೀತಿ	ಭೂಯಾದಿತ್ಯೇವ
8	2	34	ಅಭವನ್ ಖಿನ್ನಮಾನಸಾಃ	ಖಿನ್ನಸ್ವಾಂತಾ ಅಭೂಮ ಹ
9	2	38	ಅತಿಕ್ರಮ್ಯ ಗತೋ ಮಠಮ್	ಅತಿಕ್ರಮ್ಯಾಽಗತೋ ಮಠಮ್
10	3	4	ತತಸ್ತ್ವರೇಣ	ತತಸ್ತು ತ್ವರಯಾ
11	3	8	ವಿಮಲೀಕೃತ್ಯ	ವಿಮಲೀಕುರು
12	3	12	ಜಗಾಮ ತತ್	ಜಗಾಮ ಸಃ
13	3	23	ನಮಸ್ಕೃತಂ ತಂ	ನಮಸ್ಕೃತಸ್ತಂ
14	3	29	ರೌಪ್ಯಪೀಠಗತಸ್ಯ ತಮ್	ರೌಪ್ಯಪೀಠಗತಸ್ಯ ಸಃ
15	3	46	ಗಚ್ಛ... ಗೃಹಮ್	ಗಚ್ಛಾಧುನಾ ಗೃಹಮ್
16	3	46	ತತ್ಕಾಲೇ ತ್ವತೀತೇ	ತತ್ಕಾಲೇ ತು ಗತೇ
17	3	62	ತತ್ತದ್ದೇಶಾದ್ಭುತಮ್	ತತ್ತದ್ದೇಶೇಽದ್ಭುತಮ್
18	3	62	ಬೀಜವೃಷ್ಟಿಮ್	ಬೀಜಸೃಷ್ಟಿಮ್
	3	74	ಅಷ್ಟಾ ಶಾನ್ —	ಅಷ್ಟಾ ಶಾನ್ ಮುಖತಃ ದ್ಯಾನ್

ಜಿಜ್ಞಾಸೆಗಳು :

ಸಾಮಾನ್ಯವಾಗಿ ಸರ್ಗದ ಅಥವಾ ಇನ್ನಾವುದೇ ವಿಭಾಗದ ಕೊನೆಯಲ್ಲಿ ಮೊದಲು ಬಳಸಿದ ವೃತ್ತಪ್ರಭೇದಕ್ಕಿಂತ ಭಿನ್ನವಾದ ವೃತ್ತವನ್ನು ಬಳಸಬೇಕೆಂಬ ನಿಯಮವಿದೆ. ಆದರೆ ಇದಕ್ಕೆ ಅಪವಾದ ಎನ್ನುವಂತೆ ಈ ಗ್ರಂಥದ ಎರಡನೆಯ ವಿಲಾಸದ 5ನೆಯ ಹಾಗೂ 6ನೆಯ ಶ್ಲೋಕಗಳಲ್ಲಿ ಮತ್ತು ಮೂರನೆಯ ವಿಲಾಸದ 77ನೆಯ ಹಾಗೂ 81ನೆಯ ಶ್ಲೋಕಗಳಲ್ಲಿ ಒಮ್ಮೆಲೇ ಭಿನ್ನವಾದ ವೃತ್ತಪ್ರಭೇದಗಳನ್ನು ಅಳವಡಿಸಲಾಗಿದೆ. ಇದಕ್ಕೇನು ಕಾರಣ ? ಎನ್ನುವುದರ ಅನ್ವೇಷಣೆ ಆಗಬೇಕಾಗಿದೆ.

ಕೆಲವೊಮ್ಮೆ ವಿಷಯಾಂತರವನ್ನೋ ಅಥವಾ ಹೊಸ ವಿಷಯವೊಂದನ್ನು ತಿಳಿಸುವುದಕ್ಕೋಸ್ಕರ ನಿಯಮಗಳನ್ನು ಮುರಿಯುವ ಕ್ರಮವಿದೆ. ಶ್ರೀಮದಾಚಾರ್ಯರು ಅ ರೀತಿಯ ಕ್ರಮವನ್ನು ಅನುಸರಿಸಿದ್ದಿದೆ. ಅಂತಹದೇನಾದರೂ ಇಲ್ಲಿ ಇದೆಯೆ? ಎನ್ನುವುದನ್ನು ಹುಡುಕಬೇಕಾಗಿದೆ.

ಮೂರನೆಯ ವಿಲಾಸದ 71 ನೆಯ ಶ್ಲೋಕದಲ್ಲಿ ಸಹಜವಾದ ಕ್ರಮದಲ್ಲಿ ಅನ್ವಯವನ್ನು ಮಾಡುವ ಹಾಗೆ ಪದಗಳು ಶ್ಲೋಕದಲ್ಲಿಲ್ಲ. 'ಕಾರಯಿತ್ವಾ' ಎನ್ನುವುದಕ್ಕೆ 'ಕೃತ್ವಾ' ಎಂದೋ, ಅಥವಾ 'ದೇವೇನ' ಎನ್ನುವ ಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಅದೇ ರೀತಿಯಲ್ಲಿ 'ಶ್ರಾವಯಾಮಾಸ' ಎನ್ನುವದನ್ನೂ ಅನ್ವಯಿಸುವುದು ಸ್ವಲ್ಪ ದುಷ್ಕರವೇ. ಇದರ ಬಗ್ಗೆಯೂ ಯೋಚಿಸಬೇಕಾಗಿದೆ.

ಇದಲ್ಲದೇ ಈ ಗ್ರಂಥದಲ್ಲಿ ಅನೇಕ ವಿಚಾರಗಳನ್ನು ಗುರುತಿಸಬಹುದಾಗಿದೆ. ಆದರೆ ವಿಸ್ತಾರಭಯದಿಂದ ಅವುಗಳನ್ನು ನಿರೂಪಿಸಲಿಲ್ಲ.

ಪುರಾಣಿಕಪದೋಪಾಹ್ವೋ ರಾಘವೇಂದ್ರಃ ಸುಟಿಪ್ಪಣೀಮ್।
ಚಕ್ರೇ ಶ್ರೀಕೃಷ್ಣತುಷ್ಟ್ಯರ್ಥಂ ಗುರೂಣಾಂ ಚ ಕೃಪಾಪ್ತಯೇ ॥೧॥

ಯೈರತ್ರಾಕುಶಲೋಽನುವಾದಕರಣೇ ಶ್ರೀಮಧ್ವನುತ್ಯಾತ್ಮಕ -
ಶ್ರೀಮನ್ಮಧ್ವವಿಲಾಸನಾಮಕಕೃತೇಃ ಪ್ರೀತ್ಯಾ ನಿಯುಕ್ತೋಽಭವಮ್।
ಸಂಪೂರ್ತಿಂ ಹ್ಯಗಮಚ್ಚ ಕರ್ಮ ಸುಮಹದ್ಯೇಷಾಂ ಪರಾನುಗ್ರಹಾತ್
ವಂದೇ ತಾನ್ಮಹಿತಾನ್ ಗುಣೌಘ ಭರಿತಾನ್ ವಿಶ್ವೋತ್ತಮಾಖ್ಯಾನ್ಯತೀನ್॥೨॥

ತಿದ್ದುಪಡಿ

ಕಾರಣಾಂತರಗಳಿಂದ ಈ ಪುಸ್ತಕದಲ್ಲಿ ಉಂಟಾದ ದೋಷಗಳಲ್ಲಿ ಪ್ರಧಾನವಾದವುಗಳನ್ನು ಇಲ್ಲಿ ಸರಿಪಡಿಸಲಾಗಿದೆ. ಓದುಗರು ಇದನ್ನು ಗಮನಿಸಬೇಕಾಗಿ ವಿನಂತಿ.

ಕ್ರ.ಸಂ.	ಪುಟ ಸಂ.	ಸಾಲು	ತಪ್ಪು	ಸರಿಯಾದ ರೂಪ
1	5	16	ಅಭಿವ್ಯಕ್ತವಾಗಿ	ಅಭಿವ್ಯಕ್ತರಾಗಿ
2	7	21	ಮೂಹೂರ್ತದಲ್ಲಿ	ಮುಹೂರ್ತದಲ್ಲಿ
3	10	25	ಪಾಠಕಾಲೇತು	ಪಾಠಕಾಲೇ ತು
4	14	8	ಅವರಿಗೆ	ಅಲ್ಲಿದ್ದ ಮೂವರು ಯತಿಗಳಿಗೆ
5	15	3	ವಟುವಿಗೆ	ನನಗೆ
6	17	3	ಉಪವಾಸ	ಉವಾಸ
7	20	19	ಸಮರ್ಥರಾಗಿರುವರು	ಸಮರ್ಥರಾಗಿರುವವರು
8	23	15	ಭಾಥಮಿತಿ	ಬಾಧಮಿತಿ
9	25	17	ತೋರಿಸಿಕೊಡುವಂತಹದು	ತೋರಿಸಿಕೊಡುವಂತಹದ್ದು
10	34	6	ಪ್ರತ್ಯಕ್ಷವಾಗಿ	ಪ್ರತ್ಯಕ್ಷಳಾಗಿ
11	35	8	ಅರ್ಪಿಸಿದರು	ಅರ್ಪಿಸಿದನು
12	36	11	ಆ ವಾದ ಸಮಯದಲ್ಲಿ	ಆ ವಾದದ ಸಮಯದಲ್ಲಿ
13	39	23	ಇಷ್ಟ ಗ್ರಂಥಗಳಿದ್ದರೂ	ಇಷ್ಟು ಗ್ರಂಥಗಳಿದ್ದರೂ
14	42	16	ಹೃಷಿಕೇಶ	ಹೃಷೀಕೇಶ
15	43	10	ಅಚ್ಯುತ ಪ್ರೇಕ್ಷ ಸಂಜ್ಞಸ್ತು ಚ ಹರಿಂ ಧ್ಯಾತ್ವಾ ಮುದಾ ಹೃದಿ	ಅಚ್ಯುತ ಪ್ರೇಕ್ಷ ಸಂಜ್ಞಸ್ತು ಯತೀಂದ್ರ ಪುರುಷೋತ್ತಮೇ ನಿಧಾಯ ಸರ್ವಭಾರಂ ಚ ಹರಿಂ ಧ್ಯಾತ್ವಾ ಮುದಾ ಹೃದಿ ॥೫೮॥
16	43	16	ಕೃಪಾ	ಕೃಪಾಂ
17	43	17	ಕೃತ್ವಾಽಗಾದ್ ವಿಷ್ಣುಲೋಕಂ	ಕೃತ್ವಾಽಗಾದ್ ವಿಷ್ಣುಲೋಕಂ ಚ
18	44	24	ನಮನ್	ನಯನ್
19	44	25	ನೃಣಾಂ	ನೃಣಾಂ
20	44	25	ತತೋ ಸ	ತತಃ ಸ
21	47	3	ಮಹನಾಮ್ನೀ	ಮಹಾನಾಮ್ನೀ